# ಕನ್ನಡ
# KANNADA

## ಅಧ್ಯಾಪಕ ಪಠ್ಯ
## TEACHER TEXT

## ಮೂಲ ಪಠ್ಯ
## BASIC TEXT

### ತರಗತಿ

### IX

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು:
**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)**
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2024

# 1. ಸಂಸ್ಕೃತಿಯ ತವರು

ವಿವಿಧತೆಯಲ್ಲಿ ಏಕತೆ ಎಂಬುದು ನಮ್ಮ ದೇಶದ ವೈಶಿಷ್ಟ್ಯವಾಗಿದೆ. ವೈವಿಧ್ಯಮಯವಾದ ವೇಷ ಭೂಷಣಗಳು ಮತ್ತು ಭಾಷೆಗಳನ್ನು ಹೊಂದಿರುವಂತೆಯೇ ನಮ್ಮ ದೇಶವು ವಿವಿಧ ಕಲೆ ಸಂಸ್ಕೃತಿಗಳ ನೆಲೆವೀಡಾಗಿದೆ. ಭಾರತ ದೇಶದಲ್ಲಿರುವ ಪ್ರತಿಯೊಂದು ರಾಜ್ಯದಲ್ಲಿಯೂ ವಿಭಿನ್ನ ಕಲೆಗಳಿವೆ. ಹಾಗೆಯೇ ಧರ್ಮಗಳಲ್ಲೂ ಆಚಾರ ವಿಚಾರಗಳಲ್ಲೂ ವೈವಿಧ್ಯವಿದೆ. ಹೀಗಿದ್ದರೂ ನಮ್ಮ ದೇಶವು ಮಾನವೀಯತೆಯನ್ನು ಮೆರೆಯುವ ತನ್ನ ನೆಲದ ಸಂಸ್ಕೃತಿಯನ್ನು, ಹಿರಿಮೆಯನ್ನು ಕಾಪಾಡುವ ದೇಶವಾಗಿದೆ. ಮಾತ್ರವಲ್ಲ ಪ್ರಕೃತಿ ಸೌಂದರ್ಯದ ಆಗರವೂ ಆಗಿದೆ. ಐಕ್ಯವೊಂದೇ ಮಂತ್ರವೆಂದು ಸಾರುವ ನಾಡು ನಮ್ಮದು. ಈ ಎಲ್ಲ ವಿಚಾರಗಳನ್ನು ಮಕ್ಕಳು ಮೈಗೂಡಿಸಿಕೊಳ್ಳಬೇಕಾದುದು ಅತ್ಯಗತ್ಯ.

ಗುರುರಾಜ ಕರ್ಜಗಿ ಅವರು ಬರೆದ 'ಕೊಟ್ಟದ್ದು ತನಗೆ' ಎಂಬ ಆಫ್ರಿಕನ್ ಕಥೆಯು ಸರ್ವಜ್ಞ ಕವಿಯ 'ಕೊಟ್ಟಿದ್ದು ಕೆಟ್ಟಿತನಬೇಡ ಮುಂದಕ್ಕೆ ಕಟ್ಟಿಹುದು ಬುತ್ತಿ ಸರ್ವಜ್ಞ' ಎಂಬ ವಚನವನ್ನು ನೆನಪಿಸುತ್ತದೆ. ಒಳಿತನ್ನೇ ಬಯಸುವುದು, ಒಳಿತನ್ನೇ ಮಾಡುವುದು ನಮ್ಮ ಧ್ಯೇಯವಾಗಿರಬೇಕು., 'ಸೇರಿಗೆ ಸವ್ವಾ ಸೇರು' ಎನ್ನುವ ರೀತಿಯಲ್ಲಿ ನಮ್ಮ ಬದುಕಾಗಬಾರದು ಎಂಬ ಸಂದೇಶದ ಮೂಲಕ ಘಟಕವನ್ನು ಪ್ರವೇಶಿಸುತ್ತಿದ್ದೇವೆ.

ಕಡೆಂಗೋಡ್ಲು ಶಂಕರ ಭಟ್ಟರ, 'ಪತ್ರ ಪುಷ್ಪ' ಕವನ ಸಂಕಲನದಿಂದ ಆಯ್ದ ಮಂಗಲಗೀತ ಪದ್ಯವು ಕನ್ನಡ ನಾಡಿನ ಚರಿತ್ರೆ, ಪ್ರಕೃತಿ ಸೌಂದರ್ಯ, ಶಿಲ್ಪಕಲೆಯ ವರ್ಣನೆಗಳನ್ನು ಒಳಗೊಂಡಿದ್ದರೆ, ಹಿರೇಮಗಳೂರು ಕಣ್ಣನ್‌ರವರ 'ನುಡಿ ಪೂಜೆ' ಕೃತಿಯಿಂದ ಆಯ್ದುಕೊಂಡ ಲಲಿತ ಪ್ರಬಂಧವು ನಮ್ಮ ಸಂಸ್ಕೃತಿ ಹೇಗಿರಬೇಕೆಂಬುದನ್ನು ನವಿರಾಗಿ ಪ್ರಕಟಪಡಿಸುತ್ತದೆ. ಶ್ರೀ ಜಯದೇವಪ್ಪ ಜೈನ ಕೇರಿಯವರ ಭೂಲೋಕದ ಅಮರಾವತಿ ಶಿಮ್ಲಾ ಎಂಬ ಪ್ರವಾಸ ಕಥನವು, ಪ್ರವಾಸಿ ತಾಣಗಳ ಸಂದರ್ಶನಕ್ಕೆ ಹಾಗೂ ಚಾರಣಕ್ಕೆ ಪ್ರೇರೇಪಣೆ ನೀಡುವುದರೊಂದಿಗೆ ಇಂತಹ ಪ್ರದೇಶಗಳಲ್ಲಿರುವ ಜನರ ಜೀವನದ ರೀತಿ, ನೀತಿ, ಸಾಹಸ, ಕಷ್ಟ ಸಹಿಷ್ಣುತೆಯನ್ನು ತಿಳಿಯುವ ಅವಕಾಶವನ್ನು ಒದಗಿಸುತ್ತದೆ.

## ಸಿಲೆಬಸ್ ಗ್ರಿಡ್

| | | |
|---|---|---|
| ವಿಷಯ | : | **ಕನ್ನಡ ಮೂಲಪಠ್ಯ** |
| ತರಗತಿ | : | **9** |
| ಸಮಯ | : | **25 ಪಿರೀಡುಗಳು** |
| ಘಟಕದ ಹೆಸರು | : | **ಸಂಸ್ಕೃತಿಯ ತವರು** |
| ಆಶಯ | : | **ಕಲೆ-ಸಂಸ್ಕೃತಿ** |

### ಉಪ ಆಶಯಗಳು :

- ಸ್ಥಳೀಯ ಕಲೆಗಳು, ಗೀತೆಗಳು
- ಚಾರಿತ್ರಿಕ ಸ್ಮಾರಕಗಳು
- ನಡೆನುಡಿ, ಆಚಾರವಿಚಾರಗಳು

### ಸಾಹಿತ್ಯ ಪ್ರಕಾರಗಳು

- ಕವನ
- ಲಲಿತ ಪ್ರಬಂಧ
- ಪ್ರವಾಸ ಕಥನ

### ಕಲಿಕಾ ಉದ್ದೇಶಗಳು:

- ಕವನ, ಲಲಿತ ಪ್ರಬಂಧ, ಪ್ರವಾಸ ಕಥನ ಇತ್ಯಾದಿ ಸಾಹಿತ್ಯ ಪ್ರಕಾರಗಳ ಸೌಂದರ್ಯ ಮತ್ತು ನಿರೂಪಣಾ ವೈಶಿಷ್ಟ್ಯಗಳನ್ನು ತಿಳಿದುಕೊಂಡು ಸ್ವಂತ ದೃಷ್ಟಿಕೋನದೊಂದಿಗೆ ಲಿಖಿತವಾಗಿ ಹಾಗೂ ಮಾಹಿತಿ ತಂತ್ರಜ್ಞಾನಗಳ ಮೂಲಕ ಪ್ರಕಟಪಡಿಸುವುದು.
- ಸಾಹಿತ್ಯ ಕೃತಿಗಳ ಶೈಲಿ, ವಿಶಿಷ್ಟ ಪ್ರಯೋಗಗಳು, ಸೂಕ್ತಿಗಳು ಮೊದಲಾದವುಗಳನ್ನು ತಿಳಿದುಕೊಂಡು ಹೊಸ ಸಂದರ್ಭಗಳಲ್ಲಿ ಪ್ರಯೋಗಿಸುವುದು.
- ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಕಂಡುಬರುವ ಜೀವನ ಮೌಲ್ಯ , ಸಂಸ್ಕೃತಿ ಮತ್ತು ಭಾಷಾಶೈಲಿಗಳನ್ನು ತಿಳಿದು ಕೊಂಡು ಸಮಾನ ಕೃತಿಗಳನ್ನು ರಚಿಸುವುದು.
- ವಿಶೇಷ ಪದಪ್ರಯೋಗಗಳು, ಗಾದೆ ಮಾತುಗಳು ಮೊದಲಾದವುಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ ಭಾಷೆ ಮತ್ತು ಸಂಸ್ಕೃತಿಗಳೊಳಗಿನ ಸಂಬಂಧವನ್ನು ತಿಳಿದುಕೊಳ್ಳುವುದು.
- ನಮ್ಮ ನಾಡಿನ ಕಲೆ, ಸಂಸ್ಕೃತಿ, ಚಾರಿತ್ರಿಕ ಸ್ಮಾರಕಗಳನ್ನು ಉಳಿಸಿಕೊಳ್ಳಬೇಕಾದುದು ಅಗತ್ಯ ಎಂಬುದನ್ನು ತಿಳಿದುಕೊಳ್ಳುವುದು.

| ಕಲಿಕಾ ಉದ್ದೇಶಗಳು | | | | ಭಾಷಾ ಸತ್ಯಾಂಶಗಳು | ಭಾಷಾ ವ್ಯವಹಾರ ರೂಪಗಳು | ಕಲಿಕೋಪಕರಣಗಳು | ಮೌಲ್ಯಮಾಪನ |
|---|---|---|---|---|---|---|---|
| ಪಾಠದ ಹೆಸರು | ಆಶಯ / ತಿಳುವಳಿಕೆಗಳು | ಭಾಷಾ ಸಾಮರ್ಥ್ಯಗಳು | ಮೌಲ್ಯಗಳು/ ಮನೋಭಾವಗಳು. | | | | |
| 1. ಮಂಗಲ ಗೀತ (ಪದ್ಯ) | ● ಕನ್ನಡ ಸಾಹಿತ್ಯದಲ್ಲಿ ಕಲೆ ಸಂಸ್ಕೃತಿಯನ್ನು ವರ್ಣಿಸುವ ಕವನಗಳಿವೆ.<br>● ತನ್ನ ನಾಡಿನ ಕಲೆ ಸಂಸ್ಕೃತಿ ಚರಿತ್ರೆಗಳನ್ನು ನಾಳೆಗಾಗಿ ಉಳಿಸಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯ ಎಂಬುದನ್ನು ಮಕ್ಕಳು ತಿಳಿದುಕೊಳ್ಳಬೇಕು. | ● ವಿವಿಧ ಭಾಷಾವ್ಯವಹಾರ ರೂಪಗಳಾದ ಕರಪತ್ರ, ಪತ್ರ ಬರವಣಿಗೆ ಇತ್ಯಾದಿಗಳ ಮೂಲಕ ತಮ್ಮ ಅನಿಸಿಕೆ, ವಿಶ್ಲೇಷಣೆ, ನಿಗಮನಗಳನ್ನು ಅಭಿವ್ಯಕ್ತ ಪಡಿಸುವುದು. | ● ಕವನಗಳನ್ನು ಓದಿ ಆಸ್ವಾದಿಸುವುದು. ಕಲೆ ಸಂಸ್ಕೃತಿಗಳನ್ನು ಉಳಿಸಿ ಬೆಳೆಸುವ ಮನೋಭಾವವನ್ನು ಮೈಗೂಡಿಸಿ-ಕೊಳ್ಳುವುದು. | | ● ಆಶಯ<br>● ಸ್ವಾರಸ್ಯ | ● ‘ಪತ್ರಪುಷ್ಪ’ ಕವನ ಸಂಕಲನ<br>● ಕಲೆ ಸಂಸ್ಕೃತಿಯನ್ನು ಪ್ರಕಟಪಡಿಸುವ ವಿವಿಧ ಕವನಗಳು<br>● ಸ್ಲೈಡ್ ಗಳು | ● ಸ್ವ ಮೌಲ್ಯಮಾಪನ<br>● ಪರಸ್ಪರ ಮೌಲ್ಯಮಾಪನ<br>● ಅಧ್ಯಾಪಕರ ಮೌಲ್ಯಮಾಪನ<br>● ಆಶಯ<br>● ಸ್ವಾರಸ್ಯ<br>● ಮಾಹಿತಿ ಸಂಗ್ರಹಣ ಟಿಪ್ಪಣಿ<br>● ತುಲನ ಟಿಪ್ಪಣಿ |
| 2. ಒಂದು ಮೂಸುಂಬಿ ಇನ್ನೊಂದು ಗೋಸುಂಬಿ (ಲಲಿತ ಪ್ರಬಂಧ) | ● ಜೀವನ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವುದು.<br>● ಆದರ್ಶ ವ್ಯಕ್ತಿಗಳ ಜೀವನ ಚರಿತ್ರೆಯನ್ನು ತಿಳಿಯುವುದು | ● ಪದಗಳ ವೈಶಿಷ್ಟ್ಯ ತಿಳಿದುಕೊಳ್ಳುವುದು .<br>● ಶೀರ್ಷಿಕೆ ನೀಡುವುದು, ಪ್ರಬಂಧ, ಲಿಖಿತ ಭಾಷಣ, ವ್ಯಕ್ತಿ ಪರಿಚಯ ಇತ್ಯಾದಿ ಭಾಷಾ ವ್ಯವಹಾರ ರೂಪಗಳನ್ನು ತನ್ನ ಅರಿವು ಹಾಗೂ ವಿಶ್ಲೇಷಣಾ ಸಾಮರ್ಥ್ಯವನ್ನು ಬಳಸಿ ಪ್ರಕಟಪಡಿಸುವುದು. | ● ಸ್ನೇಹ, ಸೌಹಾರ್ದ, ಸಹಾನುಭೂತಿ, ಪ್ರಾಮಾಣಿಕತೆ, ಮುಗ್ಧತೆ ಇತ್ಯಾದಿ ಮನೋಭಾವಗಳನ್ನು ಮೈಗೂಡಿಸಿಕೊಳ್ಳುವುದು. | ● ಸಂವಾದಿಯಾದ ಕನ್ನಡ ಪದಗಳನ್ನು ಬಳಸಿ ವಾಕ್ಯ ರಚನೆ.<br>● ಪದ ಪ್ರಯೋಗಗಳ ವೈಶಿಷ್ಟ್ಯ ಬರೆಯುವುದು. | ● ಪ್ರಬಂಧ ರಚನೆ<br>● ಲಿಖಿತ ಭಾಷಣ<br>● ವ್ಯಕ್ತಿ ಪರಿಚಯ | ● ಪ್ರಬಂಧ ಸಂಕಲನ,<br>● ಭಾಷಣಗಳು,<br>● ಗ್ರಂಥಾಲಯದಿಂದ ಮಹಾನ್ ವ್ಯಕ್ತಿಗಳ ವ್ಯಕ್ತಿಪರಿಚಯದ ಪುಸ್ತಕಗಳು | ● ಪ್ರಬಂಧ<br>● ಲಿಖಿತ ಭಾಷಣ<br>● ವ್ಯಕ್ತಿ ಪರಿಚಯ<br>ಟಿಪ್ಪಣಿ |

| ಕಲಿಕಾ ಉದ್ದೇಶಗಳು | | | | ಭಾಷಾ ಸತ್ಯಾಂಶಗಳು | ಭಾಷಾ ವ್ಯವಹಾರ ರೂಪಗಳು | ಕಲಿಕೋಪಕರಣಗಳು | ಮೌಲ್ಯಮಾಪನ |
|---|---|---|---|---|---|---|---|
| ಪಾಠದ ಹೆಸರು | ಆಶಯ / ತಿಳುವಳಿಕೆಗಳು | ಭಾಷಾ ಸಾಮರ್ಥ್ಯಗಳು | ಮೌಲ್ಯಗಳು/ ಮನೋಭಾವಗಳು. | | | | |
| 3. ಭೂಲೋಕದ ಅಮರಾವತಿ ಶಿಮ್ಲಾ | ● ಪ್ರಾಕೃತಿಕ ವೈವಿಧ್ಯವಿರುವ ಪ್ರೇಕ್ಷಣೀಯ ಸ್ಥಳಗಳ ಕುರಿತು ತಿಳಿದುಕೊಳ್ಳುವುದು.<br>● ಇಂತಹ ಪ್ರದೇಶಗಳ ಕೃಷಿ, ಜನರಜೀವನ ಕ್ರಮ ಕಸುಬು, ಶ್ರಮ ಮತ್ತು ಸಾಹಸಗಳನ್ನು ಅರಿತುಕೊಳ್ಳುವುದು ಮತ್ತು ಚಾರಣಕ್ಕೆ ಪ್ರೇರೇಪಿಸುವುದು. | ● ಪ್ರವಾಸ ಕಥನಗಳನ್ನು ಓದಿ ಆಶಯವನ್ನು ತಿಳಿದುಕೊಂಡು ವಿಶ್ಲೇಷಿಸಿ ವರ್ಣನಾ ಟಿಪ್ಪಣಿ, ಲೇಖನ, ಕರಪತ್ರ, ಸ್ಥಳ ಪರಿಚಯ ಟಿಪ್ಪಣಿ ಇತ್ಯಾದಿಗಳನ್ನು ಬರೆಯುವುದು. | ● ಪ್ರವಾಸ ಕಥನಗಳನ್ನು ಓದಿ ಆಸ್ವಾದಿಸುವುದು.<br>● ವಿವಿಧ ಪ್ರದೇಶಗಳಲ್ಲಿ ಅಲ್ಲಿಯದೇ ಆದ ಕಲೆಗಳು ಸಂಸ್ಕೃತಿಗಳು ಇವೆ ಎಂದೂ ಅವುಗಳನ್ನು ಗೌರವಿಸಬೇಕೆಂದೂ ತಿಳಿದುಕೊಳ್ಳುವುದು.<br>● ತಮ್ಮ ಪ್ರದೇಶದಲ್ಲಿರುವ ಪ್ರವಾಸಿ ತಾಣಗಳನ್ನು ಸಂರಕ್ಷಿಸುವ, ಸ್ವಚ್ಛವಾಗಿಡುವ ಮನೋಭಾವವನ್ನು ಬೆಳೆಸುವುದು.<br>● ಪ್ರವಾಸದಿಂದ ಜ್ಞಾನ ಹಾಗೂ ಮನೋರಂಜನೆ ಗಳಿಸುವುದು .<br>● ಪ್ರವಾಸಿ ತಾಣಗಳನ್ನು ಸಂದರ್ಶಿಸುವ ಆಸಕ್ತಿ ಬೆಳೆಸುವುದು. | ● ಲೇಖನ ಚಿಹ್ನೆಗಳನ್ನು ಬಳಸಿ ವಾಕ್ಯ ತಯಾರಿಸುವುದು<br>● ಸಂಯುಕ್ತ ವಾಕ್ಯ ರಚನೆ.<br>● ಸಂವಾದಿ ಪದಗಳ ಪಟ್ಟಿ ತಯಾರಿ. | ● ಲೇಖನ<br>● ಕರಪತ್ರ<br>● ಸ್ಥಳ ಪರಿಚಯ<br>● ಟಿಪ್ಪಣಿ<br>● ವರ್ಣನೆಯ ಟಿಪ್ಪಣಿ | ● ವಿವಿಧ ಪ್ರವಾಸ ಕಥನಗಳು<br>● ಪ್ರವಾಸದ ವಿಡಿಯೋಗಳು<br>● ವೈಚಾರಿಕ ಲೇಖನಗಳು<br>● ವಿವಿಧ ಮಾದರಿಯ ಕರಪತ್ರಗಳು | ● ಲೇಖನ<br>● ಕರಪತ್ರ<br>● ವೈಯಕ್ತಿಕ ಪತ್ರ<br>● ಸ್ಥಳ ಪರಿಚಯ ಟಿಪ್ಪಣಿ. |

# ಚಟುವಟಿಕೆಗಳು

- **ಸಂದೇಶ ಬರೆಯುವುದು**

ಪ್ರವೇಶ ಚಟುವಟಿಕೆಯಾಗಿ ಈ ಘಟಕದ ಆರಂಭದಲ್ಲಿ ಗುರುರಾಜ ಕರ್ಜಗಿ ಅವರು ಬರೆದ 'ಕೊಟ್ಟದ್ದು ತನಗೆ' ಎಂಬ ಆಫ್ರಿಕನ್ ಕಥೆಯನ್ನು ನೀಡಲಾಗಿದೆ ಈ ಕಥೆಯನ್ನು ವಿದ್ಯಾರ್ಥಿಗಳು ಮೌನವಾಗಿ ಓದಲಿ. ಅವರಿಗೆ ಸಂದೇಶವನ್ನು ಬರೆದು ವಿಶೇಷವಾದ ಅಂಶಗಳಿದ್ದರೆ ಗುರುತಿಸಲಿ. ಚರ್ಚೆಯ ಬಳಿಕ ಎಲ್ಲ ವಿಚಾರಗಳನ್ನು ಕ್ರೋಡೀಕರಿಸಿ ಸಂದೇಶವನ್ನು ಬರೆಯುವಂತೆ ಹೇಳುವುದು.

**ಸಂದೇಶ ಹೀಗೂ ಇರಬಹುದಲ್ಲವೇ?**

ಮನುಷ್ಯ ಸಮಾಜ ಜೀವಿ. ಸಮಾಜದ ಜನರೆಲ್ಲರೂ ಸುಖ ನೆಮ್ಮದಿಯಿಂದ ಬಾಳಬೇಕು. ನಾವು ಇತರರಿಗೆ ಏನನ್ನು ನೀಡುತ್ತೇವೆ ಅದರ ಇಮ್ಮಡಿ ನಮಗೆ ಲಭಿಸುತ್ತದೆ. ಉತ್ತಮ ಸಮಾಜವೆನಿಸಬೇಕಾದರೆ ಎಲ್ಲರೂ ಸಂತೋಷ ನೆಮ್ಮದಿಗಳಿಂದ ಇರಬೇಕು. ನಾವು ಸಂತೋಷದಿಂದಿರಬೇಕಾದರೆ ಇತರರ ಮನದಲ್ಲೂ ಸಂತೋಷವಿರಬೇಕು. ನಾವು ಇತರರನ್ನು ದ್ವೇಷಿಸದಿದ್ದರೆ ಇತರರು ನಮ್ಮನ್ನು ದ್ವೇಷಿಸುವುದಿಲ್ಲ ಬದಲಾಗಿ ಪ್ರೀತಿಸುತ್ತಾರೆ. ಸಮಾಜಕ್ಕೆ ನಾವು ಒಳಿತನ್ನು ಮಾಡಿದರೆ ನಮಗೆ ಸಮಾಜದಿಂದ ಒಳಿತೇ ದೊರೆಯುತ್ತದೆ. ಒಳಿತನ್ನು ಬಯಸುವುದು, ಒಳಿತನ್ನು ಮಾಡುವುದು ನಮ್ಮ ಸಂಸ್ಕೃತಿಯಾಗಬೇಕು ಎನ್ನುವುದು ಈ ಕಥೆಯ ಸಂದೇಶವಾಗಿದೆ.

# ಮಂಗಲ ಗೀತ

ಕವನವನ್ನು ಎಲ್ಲ ವಿದ್ಯಾರ್ಥಿಗಳಲ್ಲಿ ಮೌನವಾಗಿ ಓದಲು ಹೇಳುವುದು ವಿದ್ಯಾರ್ಥಿಗಳನ್ನು ಗುಂಪುಗಳಾಗಿ ಮಾಡಿ ಗುಂಪಿನಲ್ಲಿ ಹಾಡಲು ಸಿದ್ಧತೆಗಾಗಿ 10 ನಿಮಿಷ ಅವಕಾಶ ನೀಡುವುದು ಉತ್ತಮವಾಗಿ ಹಾಡಿದ ಗುಂಪನ್ನು ಆಯ್ಕೆ ಮಾಡಲು ಗುಂಪಿನಿಂದ ಒಬ್ಬರಂತೆ ತೀರ್ಪುಗಾರರನ್ನಾಗಿ ಮಾಡುವುದು. ಲೇಖಕರ ಪರಿಚಯ ಹಾಗೂ ಅವರ ಕೃತಿಗಳ ಪರಿಚಯಕ್ಕಾಗಿ ಪ್ರಶ್ನೆಗಳನ್ನು ಕೇಳುವುದು. ಮಕ್ಕಳು ಪುಸ್ತಕ ನೋಡಿ ಉತ್ತರಿಸಲಿ. ಬಳಿಕ ಎಲ್ಲ ಗುಂಪುಗಳಿಂದಲೂ ಪದ್ಯವನ್ನು ಹಾಡಿಸುವುದು. ತೀರ್ಪುಗಾರರು ಅಂಕಗಳನ್ನು ನೀಡುವುದು. ಉತ್ತಮವಾಗಿ ಹಾಡಿದ ಗುಂಪನ್ನು ಇತರ ಗುಂಪಿನವರು ಅಭಿನಂದಿಸಲಿ. ಹಾಡಿದ ಎಲ್ಲರನ್ನೂ ಅಧ್ಯಾಪಕರು ಅಭಿನಂದಿಸುವುದು.

ಪ್ರತಿಯೊಂದು ಗುಂಪಿಗೆ ಒಂದೊಂದು ಪದ್ಯವನ್ನು ಕೊಟ್ಟು ಆ ಪದ್ಯದಲ್ಲಿ ಬರುವ ಕಠಿಣ ಪದಗಳನ್ನು ಹಾಗೂ ಪದಗಳ ಅರ್ಥಗಳನ್ನು ಅರ್ಥಕೋಶದ ಸಹಾಯದಿಂದ ಬರೆಯಲು ಹೇಳುವುದು. ಆಯಾ ಗುಂಪಿನವರು ಮಂಡಿಸಲಿ. ಎಲ್ಲ ಮಕ್ಕಳೂ ಎಲ್ಲ ಗುಂಪಿನವರು ಬರೆದ ಪದಗಳನ್ನು ಬರೆದುಕೊಳ್ಳಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಪದಗಳನ್ನು ಬರೆಯುವುದು. ಮಕ್ಕಳಿಗೆ ಅರ್ಥ ದೊರಕದ ಮತ್ತು ಮಕ್ಕಳು ಗುರುತಿಸದ ಪದಗಳನ್ನು ಅವುಗಳ ಅರ್ಥಗಳನ್ನು ಕರಿಹಲಗೆಯಲ್ಲಿ ಅಧ್ಯಾಪಕರು ಬರೆಯುವುದು.

- **ಉತ್ತರ ಬರೆಯುವುದು**

ವಿದ್ಯಾರ್ಥಿಗಳು ಮಂಗಲ ಗೀತ ಕವನವನ್ನು ಗಮನವಿಟ್ಟು ಓದಲಿ. ಕೊಟ್ಟಿರುವ ನಾಲ್ಕು ಪ್ರಶ್ನೆಗಳಿಗೆ ಚರ್ಚಿಸಿ ಉತ್ತರವನ್ನು ಬರೆಯಲಿ. ಅದನ್ನು ತರಗತಿಯಲ್ಲಿ ಪ್ರಸ್ತುತಪಡಿಸಲಿ.

- **ರಾಗವಾಗಿ ಹಾಡುವುದು**

ಐಸಿಟಿಯ ಸಹಾಯದಿಂದ ಅಥವಾ ಅಧ್ಯಾಪಕರು ಸ್ವತಃ ರಾಗ ಸಂಯೋಜಿಸಿ ಸುಂದರವಾಗಿ ಹಾಡುವುದು. ಬಳಿಕ ಮಕ್ಕಳಿಂದ ಹಾಡಿಸುವುದು. ಇಲ್ಲಿಯೂ ಸ್ಪರ್ಧೆ ಏರ್ಪಡಿಸಬಹುದು.

- **ಸ್ವಾರಸ್ಯ ಬರೆಯುವುದು**

ವಿದ್ಯಾರ್ಥಿಗಳು ಕೊಟ್ಟಿರುವ ಸಾಲುಗಳ ಆಶಯವನ್ನು ಹೇಳಲಿ. ಬಾದಾಮಿ, ಬನವಾಸಿ ಇತ್ಯಾದಿ ಶಿಲ್ಪಕಲಾ ಕ್ಷೇತ್ರಗಳು ನಮ್ಮನ್ನು ಆಕರ್ಷಿಸುತ್ತವೆ. ಎಂಬುದನ್ನು ಪದ್ಯದ ಯಾವ ಪದಗಳು ಸೂಚಿಸುತ್ತವೆ? ಎಂಬುದಾಗಿ ಪ್ರಶ್ನಿಸುವುದು. ಇದೇ ರೀತಿ ಪದ್ಯದ ಸಾಲಿನಲ್ಲಿರುವ ವೈಶಿಷ್ಟ್ಯವನ್ನು, ಸ್ವಾರಸ್ಯವನ್ನು ಚರ್ಚಿಸಿ ಮಂಡನೆ ಮಾಡಲಿ.

**ಸ್ವಾರಸ್ಯ ಬರವಣಿಗೆಯಲ್ಲಿರಬೇಕಾದ ಅಂಶಗಳು**

- ಪದ್ಯದ ಸಾಲುಗಳಲ್ಲಿರುವ ಸ್ವಾರಸ್ಯಕರ ಅಂಶಗಳು
- ವಿಶಿಷ್ಟ ಪದ ಪ್ರಯೋಗ
- ಭಾಷಾ ಶೈಲಿ
- ವರ್ಣನೆ

...........ಇತ್ಯಾದಿ ಅಂಶಗಳು.

## ಸ್ವಾರಸ್ಯವನ್ನು ಹೀಗೂ ಬರೆಯಬಹುದು

ಶತಮಾನಗಳು ಕಳೆದರೂ ಇಂದಿಗೂ ಬಾದಾಮಿ, ಬನವಾಸಿ, ಹಂಪೆ, ಹಳೇಬೀಡು ಮುಂತಾದ ಕನ್ನಡನಾಡಿನ ಶಿಲ್ಪ ಕ್ಷೇತ್ರಗಳು ಪ್ರವಾಸಿಗನನ್ನು ಆಕರ್ಷಿಸುತ್ತಲೇ ಅಚಲವಾಗಿ ನಿಂತಿವೆ. ಇವುಗಳು ಮಾತನಾಡುವುದಿಲ್ಲ. ಆದರೆ ನಮ್ಮನ್ನು ಅವುಗಳ ಕಡೆಗೆ ಸೆಳೆಯುತ್ತವೆ. ಇದನ್ನೇ ಕವಿ ಮಾತಿಲ್ಲದ ಮಾತಿನಲ್ಲಿ ನಮಗೆ ಸ್ವಾಗತ ಕೋರುತ್ತಿವೆ ಎಂಬುದಾಗಿ ಮಾರ್ಮಿಕವಾಗಿ ಹೇಳಿದ್ದಾರೆ.

ಎಷ್ಟೆಷ್ಟೋ ಸಾಮ್ರಾಜ್ಯಗಳು ಚೆನ್ನಾಗಿ ಆಳಿಬಾಳಿದರೂ ಕೆಡುಕಾದ ಆಡಳಿತದಿಂದ ಬಿದ್ದು ಹೋದ ಸಾಮ್ರಾಜ್ಯಗಳ ಕಥೆಯನ್ನು ಹೇಳಿ ಅತ್ತು ಕರೆದರೆ ಆಯುಷ್ಯ ಮುಗಿದೀತೇ ಹೊರತು ಇನ್ನೇನು ಪ್ರಯೋಜನವಿಲ್ಲ ಎಂಬುದು ಈ ಸಾಲುಗಳ ಸ್ವಾರಸ್ಯವಾಗಿದೆ.

- ## ಆಶಯ ಬರೆಯುವುದು

ವಿದ್ಯಾರ್ಥಿಗಳು ಪದ್ಯವನ್ನು ಇನ್ನೊಮ್ಮೆ ಗಮನವಿಟ್ಟು ಓದಲಿ, ಒಂದೊಂದು ಗುಂಪಿಗೆ ಒಂದೊಂದು ಪದ್ಯವನ್ನು ನೀಡಿ ಆ ಪದ್ಯದ ಸಾಲುಗಳ ಆಶಯವನ್ನು ಗುಂಪಿನಲ್ಲಿ ಚರ್ಚಿಸಿ ಬರೆಯಲಿ. ಗುಂಪಿನಲ್ಲಿ ಒಬ್ಬರಂತೆ ಮಂಡಿಸಲಿ. ಬಿಟ್ಟು ಹೋದ ಅಂಶವಿದ್ದರೆ ಅದನ್ನು ಗುರುತಿಸಿ ಹೇಳಲಿ.

ಎಲ್ಲರ ಆಶಯವನ್ನು ಸೇರಿಸಿ ಅಧ್ಯಾಪಕರು ಉತ್ತಮಗೊಳಿಸಿದ ಆಶಯವನ್ನು ನೀಡುವುದು.

## ಪದ್ಯದ ಆಶಯವನ್ನುಹೀಗೂ ಬರೆಯಬಹುದು

ಹರಿಹಂಚಿ ಹೋಗಿದ್ದ ಮೈಸೂರು ಸಂಸ್ಥಾನವು 1956 ರಲ್ಲಿರಾಜ್ಯ ರೂಪೀಕರಣಕದ ಸಂದರ್ಭದಲ್ಲಿ ವೈಮನಸ್ಯ ಉಂಟಾದರೂ ಕೊನೆಗೆ ವಿಶಾಲವಾದ ಕರ್ನಾಟಕ ರಾಜ್ಯದ ಉದಯವಾಯಿತು . ಈ ಸಂತೋಷವನ್ನು ಕವಿ ಕಡೆಂಗೋಡ್ಲು ಶಂಕರಭಟ್ಟರು ಈ ಕವನದ ಮೂಲಕ ವ್ಯಕ್ತಪಡಿಸಿದಂತೆ ತೋರುತ್ತದೆ.

**ಪದ್ಯ 1.** ವಿಶಾಲವಾದ ಕನ್ನಡ ನಾಡು ಎಲ್ಲರಿಗೆ ಮುದವನ್ನು ನೀಡಿ, ಸಂತೋಷವೂ ಚೈತನ್ಯವೂ ತುಂಬಿಕೊಂಡು ಕನ್ನಡದ ಜೀವಕಳೆಯು ಹೊರ ಹೊಮ್ಮುತ್ತಿದೆ. ಭಿನ್ನತೆಯ ದುಃಖ ಭಾವವನ್ನು ಕಳೆದುಬಿಡು.ಪೌರುಷದ ಹೊಳೆ ಹರಿಯುತ್ತಿರುವ ಈ ಕನ್ನಡ ನಾಡಿಗೆ ಶುಭವನ್ನು ಹಾರೈಸು ಎಂಬುದಾಗಿ ಕವಿ ಹೇಳುತ್ತಾರೆ.

**ಪದ್ಯ 2.** ಸುಂದರವಾದ ಸಾಮ್ರಾಜ್ಯವಾಗಬೇಕೆಂಬ ಹಗಲುಗನಸುಗಳು ಕೈಗೂಡಿದುವೋ ನಿಜವಾದುವೋ ಎಂಬಂತೆ ಅಂದಿನ ವೈಭವವನ್ನು ಇಂದಿಗೂ ಪ್ರದರ್ಶಿಸುವ ಬಾದಾಮಿ, ಬನವಾಸಿ, ಹಂಪೆ ಮತ್ತು ಹಳೇಬೀಡುಗಳು ಮೌನವಾಗಿ ಮಾತಿಲ್ಲದ ಮಾತಿನಲ್ಲಿನಮಗೆ ಸುಸ್ವಾಗತವನ್ನು ಕೋರುವುದನ್ನುವುದನ್ನು ಕೇಳು.

**ಪದ್ಯ 3.** ತುಂಬಾ ಕಾಲ ವೈಭವದಿಂದ ಬಾಳಬೇಕಾಗಿದ್ದ ಸಾಮ್ರಾಜ್ಯಗಳು ಬಾಳದೇ ಅಳಿದು ಹೋದರ ಕಥೆಯನ್ನು ಹೇಳಿ ದುಃಖಿಸಿದರೆ ಆಯುಷ್ಯವೇ ಮುಗಿದುಹೋದಿತಷ್ಟೇ ಹೊರತು ಪ್ರಯೋಜನವಿಲ್ಲ. ಬುದ್ಧಿವಂತಿಕೆಯಿಂದ ಮುಂದೆ ಸಾಗಿದರೆ ಸಿದ್ಧಿಸಬೇಕಾದುದು ತಂತಾನೇ ಸಿದ್ಧಿಸುತ್ತದೆ. ಸಂಭ್ರಮದ ತೋರಣವನ್ನು ಕಟ್ಟಿ ಉತ್ತಮ ಭವಿಷ್ಯವು ನಮ್ಮನ್ನು ಕಾಯುತ್ತಾ ಇದೆ.

**ಪದ್ಯ 4.** ಎತ್ತರವಾದ ಭುಜದಂತೆ ಪರ್ವತಗಳು ವಿಸ್ತಾರವಾದ ಎದೆಯಂತೆ ಬಯಲುಗಳು ತುಂಬಿರುವ ಕನ್ನಡ ನಾಡಿನಲ್ಲಿ ಆರೋಗ್ಯ, ಭಾಗ್ಯ, ಧನ, ಧಾನ್ಯ ಸಂಪತ್ತುಗಳೆಲ್ಲವೂ ಇವೆ. ಇಲ್ಲಿ ಇಲ್ಲದುದು ಯಾವುದೂ ಇಲ್ಲ. ಇದು ನಮ್ಮ ಉತ್ತಮವಾದ ಆಸೆಗಳನ್ನು ಈಡೇರಿಸುವ ಬಟ್ಟಲೂ ನಮ್ಮ ಪುಣ್ಯವನ್ನು ತೂಗಿ ತೊನೆಯುವ ತೊಟ್ಟಿಲೂ ಆಗಿದೆ.

**ಪದ್ಯ 5.** ಕನ್ನಡದ ಕುಲವೂ ಇಲ್ಲಿದೆ. ಕುಲದ ದೇಗುಲವು ಇಲ್ಲಿಯೇ ಇದೆ. (ಕನ್ನಡ) ಪ್ರಾಣದೇವನ ಭವ್ಯವಾದ ಮೂರ್ತಿಯ ಪ್ರತಿಷ್ಠೆಯೂ ಇಲ್ಲಿ ಇದೆ. ಈ ಪ್ರಾಣವನ್ನು ಉಳಿಸುವ ಸಾವಿತ್ರಿಯೆ ಭಾರತ ಮಾತೆಯಾದರೆ ಕನ್ನಡವೆನ್ನುವುದೇ ಇಲ್ಲಿಯ ಗಾಯತ್ರಿ ಅಥವಾ ಪೂಜಾ ಮಂತ್ರವಾಗಿದೆ .

**ಪದ್ಯ 6.** ಕನ್ನಡ ನಾಡಿನ ಧರ್ಮವೆಂಬ ಗಂಟೆಯ ಧ್ವನಿಯು ದಿಕ್ಕು ದಿಕ್ಕುಗಳನ್ನು ರೋಮಾಂಚನಗೊಳಿಸುತ್ತಿರುವಾಗ ಸೇವೆ ಎಂಬ ಮಂಗಳಾರತಿಯನ್ನು ಎತ್ತಿ ಕರ್ತವ್ಯವೆಂಬ ಕಾಣಿಕೆಯನ್ನು ಪಾದದಲ್ಲಿ ಇರಿಸಿ ರಾಷ್ಟ್ರದ ಪೌರುಷದ ಮೂರ್ತಿಯಾದ

ಕನ್ನಡ ನಾಡನ್ನು ಆರಾಧಿಸು.

**ಪದ್ಯ 7.** ಈ ಪದ್ಯದಲ್ಲಿ ಕವಿ ತನ್ನ ಪದ್ಯವನ್ನು ಕನ್ನಡ ದೇವಿಯ ಪಾದಕ್ಕೆ ಅರ್ಪಿಸಿ ಧನ್ಯತೆಯನ್ನು ಪಡೆದುದಾಗಿ ಹೇಳುತ್ತಾರೆ. ಈ ನೆಲದಲ್ಲಿ ಹುಟ್ಟಿ ಈ ದಿನವನ್ನು ಕಂಡ ಕನ್ನಡದ ಜೀವವೇ ನಿನ್ನ ಧನ್ಯತೆಯನ್ನು ಕೊಂಡಾಡುತ್ತೇನೆ. ಭಾರತಮಾತೆಯ ಮುದ್ದು ಕುವರಿಯಾದ ಕನ್ನಡಾಂಬೆಯ ಸೇವಕನಾದ ಶಂಕರನ ಹಾಡನ್ನು ಸ್ವೀಕರಿಸಿದುದಕ್ಕೆ ಮಾತೆಯೇ ನಿನಗೆ ನಾನು ಧನ್ಯನಾಗಿದ್ದೇನೆ ಎಂಬುದಾಗಿ ಕವಿ ಹೇಳುತ್ತಾರೆ.

- **ಟಿಪ್ಪಣಿ ಬರೆಯುವುದು**

ವಿದ್ಯಾರ್ಥಿಗಳನ್ನು ನಾಲ್ಕು ಗುಂಪುಗಳಾಗಿ ಮಾಡುವುದು. ಪ್ರತಿಯೊಂದು ಗುಂಪಿಗೆ ಒಂದೊಂದು ಪ್ರೆಕ್ಷಣೀಯ ಸ್ಥಳದ ಕುರಿತು ಮಾಹಿತಿ ಸಂಗ್ರಹಿಸಲು ಹೇಳುವುದು. ಈ ಸಂದರ್ಭದಲ್ಲಿ ಆಯಾ ಸ್ಥಳವು ರಾಜ್ಯದ ಯಾವ ಭಾಗದಲ್ಲಿದೆ, ಹಾಗೂ ಆ ಪ್ರದೇಶದ ಭೌಗೋಳಿಕ ಸ್ಥಿತಿ, ಚಾರಿತ್ರಿಕ ಹಿನ್ನೆಲೆ, ಸಾಂಸ್ಕೃತಿಕ ಹಿರಿಮೆ ಇತ್ಯಾದಿ ವಿಚಾರಗಳಿರಬೇಕು ಎಂಬುದನ್ನು ಸೂಚಿಸುವುದು.

**ಟಿಪ್ಪಣಿಯನ್ನು ಹೀಗೂ ಬರೆಯಬಹುದು**

**ಬಾದಾಮಿ:** ಕರ್ನಾಟಕದ ಉತ್ತರಭಾಗದ ಬಾಗಲಕೋಟೆ ಜಿಲ್ಲೆಯಲ್ಲಿರುವ ಬಾದಾಮಿ ತಾಲೂಕಿನ ಕೇಂದ್ರವೇ ಬಾದಾಮಿ ಪಟ್ಟಣ. ಇದು ಪುರಾತನ ಕಾಲದಲ್ಲಿ ವಾತಾಪಿ ಎಂಬ ಹೆಸರಿನಿಂದ ಕರೆಯಲ್ಪಡುತ್ತಿತ್ತು. ಈ ಪ್ರದೇಶವು ಆರನೇ ಶತಮಾನದಿಂದ ಎಂಟನೇ ಶತಮಾನದವರೆಗೆ ಆಳಿದ ಚಾಲುಕ್ಯ ವಂಶದ ರಾಜಧಾನಿಯಾಗಿತ್ತು. ಮಾನವ ನಿರ್ಮಿತ ಸರೋವರದ ಪಶ್ಚಿಮ ದಂಡೆಯ ಮೇಲೆ ಚಾಲುಕ್ಯವಾಸ್ತು ಶಿಲ್ಪಪ್ರಕಾರ ಕೆಂಪು ಮರಳು ಕಲ್ಲಿನಿಂದ ನಿರ್ಮಿಸಿದ ಗೋಡೆಗಳು, ಗುಹೆಗಳಲ್ಲಿ ಕೊರೆದ 4 ದೇವಾಲಯಗಳ ಸಂಕೀರ್ಣ ಇಲ್ಲಿದೆ. 4 ದೇಗುಲಗಳಲ್ಲಿ ಮೂರು ಹಿಂದೂ ದೇಗುಲಗಳೂ ಒಂದು ಬೌದ್ಧ ದೇವಾಲಯವೂ ಆಗಿವೆ. ದೇವಾಲಯಗಳ ಗುಂಪು ಅಗಸ್ತ್ಯ ತೀರ್ಥ ಇತ್ಯಾದಿಗಳು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತವೆ. ಇದೇ ರೀತಿಯಲ್ಲಿ ಮಕ್ಕಳು ಪ್ರೇಕ್ಷಣೀಯ ಸ್ಥಳದ ಮಾಹಿತಿ ಸಂಗ್ರಹಿಸಲಿ.

- **ಸಾಲುಗಳನ್ನು ಗುರುತಿಸುವುದು**

ಮಕ್ಕಳಲ್ಲಿ ವೈಯಕ್ತಿಕವಾಗಿ ಪದ್ಯವನ್ನು ಓದಲು ಹೇಳುವುದು ಅವರಿಗೆ ಇಷ್ಟವಾದ ಸಾಲುಗಳನ್ನು ಗುರುತಿಸಿ ಅದನ್ನು ಬರೆಯಲಿ ಯಾಕೆ ಇಷ್ಟವಾಯಿತು ಎಂಬುದನ್ನು ವಿದ್ಯಾರ್ಥಿಗಳಿಂದ ಹೇಳಿಸುವುದು ಆ ಬಳಿಕ ಅವರು ಅದನ್ನು ಬರೆದು ಮಂಡಿಸಲಿ.

- **ಹೋಲಿಸಿ ಬರೆಯುವುದು**

ಕುವೆಂಪುರವರು ಬರೆದ ಕವನವನ್ನು ಮಕ್ಕಳು ಓದಲಿ, ಬಳಿಕ ಮಂಗಳ ಗೀತದ ಆಶಯವನ್ನು ಓದಲು ಹೇಳುವುದು. ಮಕ್ಕಳನ್ನು ಗುಂಪುಗಳಾಗಿ ಮಾಡಿ 'ಬಾಗಿಲೊಳು ಕೈಮುಗಿದು' ಪದ್ಯವನ್ನು ಮೌನವಾಗಿ ಓದಲು ಹೇಳುವುದು. ಗುಂಪಿನಲ್ಲಿ ಚರ್ಚಿಸಿ ಆಶಯ ಬರೆಯಲಿ. ಆಶಯವನ್ನು ಮಂಡಿಸಲಿ. ಎರಡು ಕವನಗಳಲ್ಲಿರುವ ಸಾಮ್ಯ ಮತ್ತು ಭಿನ್ನತೆಗಳನ್ನು ಬರೆಯಲಿ.

**ಹೋಲಿಕೆಯ ಟಿಪ್ಪಣಿಯನ್ನು ಹೀಗೂ ಬರೆಯಬಹುದು**

ಕಡೆಂಗೋಡ್ಲು ಶಂಕರ ಭಟ್ಟರು ತಮ್ಮ ಮಂಗಲಗೀತ ಕವನದಲ್ಲಿ ಕನ್ನಡ ನಾಡಿನ ಐಕ್ಯತೆ, ಸಂಸ್ಕೃತಿಯ ಹಿರಿಮೆಗಳನ್ನು ಬಣ್ಣಿಸಿದ್ದಾರೆ. ಬಾದಾಮಿ, ಹಂಪೆ, ಹಳೇಬೀಡುಗಳ ಶಿಲ್ಪಕಲಾ ವೈಭವ, ಎತ್ತರವಾದ ಪರ್ವತಗಳು, ವಿಸ್ತಾರವಾದ ಬಯಲುಗಳು ಧನ, ಧಾನ್ಯ ಸಂಪತ್ತಿನಿಂದ ಕೂಡಿದ ಕನ್ನಡ ನಾಡು ನಮ್ಮ ಬಯಕೆಗಳನ್ನು ಈಡೇರಿಸುವ ಬಟ್ಟಲಾಗಿದೆ ಎಂಬುದಾಗಿ ಹೇಳಿದ್ದಾರೆ ದೇಶದ ಪ್ರಾಣದೇವನನ್ನು ಉಳಿಸುವ ಸಾವಿತ್ರಿ ಭಾರತವಾದರೆ, ಈ ದೇವನನ್ನು ಆರಾಧಿಸುವ ಗಾಯತ್ರಿ ಮಂತ್ರವು ಕನ್ನಡವಾಗಿದೆ ಕನ್ನಡ ರಾಷ್ಟ್ರದ ಪೌರುಷದ ಮೂರ್ತಿಯಾದ ಕನ್ನಡ ನಾಡಿಗೆ ಸೇವೆ ಎಂಬ ಮಂಗಳಾರತಿಯನ್ನು ಬೆಳಗಿ ಕರ್ತವ್ಯವೆಂಬ ಪಾದ ಕಾಣಿಕೆ ಇಟ್ಟು ಓಲೈಸಬೇಕೆಂಬುದು ಕವಿಯ ಆಶಯವಾಗಿದೆ. ಕೊನೆಯಲ್ಲಿ ಕವಿ ಸ್ವತಹ ಕನ್ನಡ ಕವಿಯಾದುದಕ್ಕೆ ಹೆಮ್ಮೆ ಪಟ್ಟುಕೊಳ್ಳುತ್ತಾರೆ.

'ಬಾಗಿಲೊಳು ಕೈ ಮುಗಿದು' ಪದ್ಯದಲ್ಲಿ ಕನ್ನಡ ನಾಡಿನ ಶಿಲ್ಪ ಕಲಾ ವೈಭವದ ವರ್ಣನೆ ಇದೆ. ಇದು ಕೇವಲ ಶಿಲೆ ಅಲ್ಲ ಕಲೆಯ ಬಲೆಯಾಗಿದೆ. ಇದಕ್ಕೆ ಗೌರವ ಸೂಚಕವಾಗಿ ಕೈ ಮುಗಿದು ಒಳಗೆ ಬಾ ಇದರ ಹಿಂದಿರುವ ನಮ್ಮ ಪೂರ್ವಜರ ಶ್ರಮ ಕಷ್ಟಕಾರ್ಪಣ್ಯಗಳನ್ನು ನೆನೆದು ಹೊಮ್ಮಿದ ಕಂಬನಿಯ ಮಾಲೆಯನ್ನು ಮನಸ್ಸಿನಲ್ಲಿಟ್ಟು ಧನ್ಯತಾಭಾವವೆಂಬ ಕುಸುಮಗಳನ್ನು ಅರ್ಪಿಸು ಎಂಬುದಾಗಿ ಯಾತ್ರಿಕನಲ್ಲಿ ಕೇಳಿಕೊಳ್ಳುತ್ತಾರೆ.

ಇಲ್ಲಿ ಗಂಟೆಗಳ ಸದ್ದಾಗಲಿ, ಜಾಗಟೆಯಾಗಲಿ ,ಆರತಿ, ಜ್ಯೋತಿಗಳಾಗಲಿ ಇತರ ದೇವಾಲಯಗಳಲ್ಲಿರುವಂತೆ ಇಲ್ಲದಿದ್ದರೂ ಭಗವಂತನ ಆನಂದವೇ ಇಲ್ಲಿ ರೂಪುಗೊಂಡಿದೆ. ರಾಮಾಯಣವೂ ಮಹಾಭಾರತವೂ ಶಿಲ್ಪಿಯ ಕುಶಲತೆಯಲ್ಲಿ ಮೂಡಿ ಬಂದುದನ್ನು ಕಂಡು ಬೆರಗಾದ ಕಾಲವು ಸರಿಯದೆ ನಿಂತಿದೆ ಎಂಬುದಾಗಿ ಕವಿ ವರ್ಣಿಸಿದ್ದಾರೆ.

ಮಂಗಲ ಗೀತ ಕವನದಲ್ಲಿ ಕನ್ನಡ ನಾಡಿನ ಪ್ರಕೃತಿ ಶಿಲ್ಪಕಲೆ, ಚರಿತ್ರೆ ಎಲ್ಲವೂ ವರ್ಣಿಸಲ್ಪಟ್ಟಿವೆ. ಇಲ್ಲಿ ಹಿಂದಿನದನ್ನ ಯೋಚಿಸಿ ದುಃಖಿಸುವುದರ ಬದಲು ದಿಟ್ಟವಾಗಿ ಮುಂದೆ ಕಂಡ ದಾರಿಯಲ್ಲಿ ಸಾಗಿದರೆ ಉಜ್ವಲ ಭವಿಷ್ಯ ಕಾದಿದೆ ಎಂಬ ಸಂದೇಶವಿದೆ. ಇಲ್ಲಿ ಕನ್ನಡದ ಕುಲವಿದೆ. ಪ್ರಾಣದೇವನ ಮೂರ್ತಿ ಇದೆ. ಸೇವೆ ಎಂಬ ಆರತಿಯನ್ನು ಬೆಳಗಿ, ಕರ್ತವ್ಯವೆಂಬ ಪಾದ ಕಾಣಿಕೆಯನ್ನು ಇಡಬೇಕು ಎಂಬುದಾಗಿ ಕವಿ ಹೇಳುತ್ತಾರೆ. ಕವಿ ಸ್ವತಃ ತಾನು ಕನ್ನಡ ನಾಡಿನಲ್ಲಿ ಹುಟ್ಟಿದುದಕ್ಕೆ, ಈ ಹಾಡನ್ನು ಬರೆಯಲು ಸಾಧ್ಯವಾದುದಕ್ಕೆ ಹೆಮ್ಮೆಪಟ್ಟುಕೊಳ್ಳುತ್ತಾರೆ. ಆದರೆ ಬಾಗಿಲೊಳು ಕೈಮುಗಿದು ಕವನದಲ್ಲಿ ಶಿಲ್ಪಕಲೆಯ ವರ್ಣನೆ ಮಾತ್ರವೇ ಇದೆ.ಒಂದು ಸುಪ್ರಸಿದ್ಧವಾದ ಗುಡಿಯೊಳಗಿನ ಶಿಲ್ಪಕಲಾ ಸೌಂದರ್ಯವನ್ನು ಮಾತ್ರವೇ ಇಲ್ಲಿ ವರ್ಣಿಸಲಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಮಂಗಳಗೀತವು ಕನ್ನಡ ನಾಡಿನ ಚರಿತ್ರೆ ಪ್ರಕೃತಿ, ಕೃಷಿ ಸಂಪತ್ತು, ಶಿಲ್ಪಕಲೆ, ದೇಶಭಕ್ತಿ ಎಲ್ಲವನ್ನು ಒಳಗೊಂಡಿದ್ದರೆ ಬಾಗಿಲೊಳು ಕೈಮುಗಿದು ಕವನವು ಇವುಗಳಲ್ಲಿ ಒಂದು ವಿಚಾರವಾದ ಶಿಲ್ಪಕಲಾ ವೈಭವವನ್ನು ಮಾತ್ರ ವರ್ಣಿಸಲಾಗಿದೆ.

- **ಸ್ಲೈಡ್ ತಯಾರಿಸುವುದು**

ಬಾದಾಮಿ ಬನವಾಸಿ ಹಂಪೆ ಹಳೇಬೀಡುಗಳಕುರಿತು ಮಕ್ಕಳು ಈಗಾಗಲೇ ಮಾಹಿತಿ ಸಂಗ್ರಹಿಸಿದ್ದಾರೆ. ಚಿತ್ರಗಳನ್ನು ಒಳಗೊಳ್ಳುವಂತೆ ಈ ಸ್ಥಳಗಳಿಗೆ ಸಂಬಂಧಿಸಿದ ಇತರ ವಿಚಾರಗಳನ್ನು ಸಂಗ್ರಹಿಸಿ ತಂತ್ರಜ್ಞಾನದ ಸಹಾಯದಿಂದ ಸ್ಲೈಡ್ ತಯಾರಿಸುವುದು.

## ಒಂದು ಮೂಸುಂಬೆ ಇನ್ನೊಂದು ಗೋಸುಂಬೆ

ಹಿರೇಮಗಳೂರು ಕಣ್ಣನ್ ಅವರ ಪರಿಚಯವನ್ನು ನೀಡುವುದು. ಬಳಿಕ ಮಕ್ಕಳಲ್ಲಿ ಪಾಠ ಭಾಗವನ್ನು ವೈಯುಕ್ತಿಕವಾಗಿ, ಮೌನವಾಗಿ ಓದಲು ಹೇಳುವುದು. ಆಮೇಲೆ ಮಕ್ಕಳನ್ನು ಗುಂಪುಗಳಾಗಿ ಮಾಡಿ ಒಂದೊಂದು ಗುಂಪಿಗೆ ಒಂದೊಂದು ಪಾರಾವನ್ನು ಕೊಟ್ಟು ಅದರಲ್ಲಿ ಬರುವ ಕಠಿಣ ಪದಗಳನ್ನು ಗುರುತಿಸಲು ಹಾಗೂ ಅವುಗಳ ಅರ್ಥವನ್ನು ಕಂಡುಕೊಳ್ಳಲು ಹೇಳುವುದು ಅದರೊಂದಿಗೆ ಆ ಪಾಠದ ಆಶಯವನ್ನು ಆಯಾ ಗುಂಪಿನವರು ಚರ್ಚಿಸಿ ಬರೆಯಲಿ. ಗುಂಪಿನಿಂದ ಒಬ್ಬರಂತೆ ಇದನ್ನು ಮಂಡಿಸಲಿ. ಅಧ್ಯಾಪಕಿ ಆ ಪಾಠ ಭಾಗವನ್ನು ಸ್ವರಭಾರ ಪೂರ್ಣವಾಗಿ ಗಟ್ಟಿಯಾಗಿ ಓದಿ ಎಲ್ಲ ಗುಂಪಿನವರ ಆಶಯವನ್ನು ಕ್ರೋಡೀಕರಿಸಿ ಮಂಡಿಸುವುದು.

- **ಶೀರ್ಷಿಕೆ ಬರೆಯುವುದು**

ಕಥೆಯ ಆಶಯವನ್ನು ಮಕ್ಕಳಿಂದ ಹೇಳಿಸುವುದು, ಈ ಆಶಯವನ್ನು ಗಮನದಲ್ಲಿರಿಸಿ ಆಕರ್ಷಕವೂ ಸೂಕ್ತವೂ ಆದ ಶೀರ್ಷಿಕೆ ನೀಡಲು ಹೇಳುವುದು. ಶೀರ್ಷಿಕೆಯು ಸರಳವಾಗಿ ಸಂಕ್ಷಿಪ್ತವಾಗಿ ಇರಬೇಕು ಎಂಬುದಾಗಿ ಸೂಚಿಸುವುದು. ಆ ಶೀರ್ಷಿಕೆ ಕೊಡಲು ಕಾರಣವಾದ ಅಂಶವನ್ನು ಕೂಡ ಸಮರ್ಥಿಸಿ ಬರೆಯಲಿ. ಬರೆದ ಶೀರ್ಷಿಕೆಗಳನ್ನು ಮಂಡಿಸಲಿ. ಉತ್ತಮವಾದ ಶೀರ್ಷಿಕೆಗಳನ್ನು ಆರಿಸಿ ಕರಿಹಲಗೆಯಲ್ಲಿ ಬರೆಯುವುದು ಬರೆದವರನ್ನು ಅಭಿನಂದಿಸುವುದು.

### ಶೀರ್ಷಿಕೆ ಹೀಗೂ ಕೊಡಬಹುದಲ್ಲವೇ?

**ಶೀರ್ಷಿಕೆ : ಹಿರಿಮನದ ಮಹಾತ್ಮ**

ಲಾಲ್ ಬಹದ್ದೂರ್ ಶಾಸ್ತ್ರಿಯವರು ಪ್ರತಿಯೊಂದು ಸಂದರ್ಭದಲ್ಲೂ ಹಿರಿತನವನ್ನು ಮೆರೆದುದನ್ನು ಕಾಣಬಹುದು. ಆದುದರಿಂದ ಹಿರಿಮನದ ಮಹಾತ್ಮ ಎಂಬ ಶೀರ್ಷಿಕೆಯನ್ನು ನೀಡಲಾಗಿದೆ.

- **ಗಾದೆ ಮಾತನ್ನು ವಿಸ್ತರಿಸುವುದು**

ಗಾದೆಗಳು ವೇದಕ್ಕೆ ಸಮ. ಚಿಕ್ಕ ವಾಕ್ಯವು ವಿಸ್ತೃತವಾದ ಅರ್ಥವನ್ನು ನೀಡುವುದೇ ಗಾದೆ ಮಾತಿನ ವೈಶಿಷ್ಟ್ಯ. ಗಾದೆಗಳಲ್ಲಿ ವಾಚ್ಯಾರ್ಥ, ವ್ಯಂಗ್ಯಾರ್ಥ ಲಕ್ಷ್ಯಾರ್ಥಗಳು ಅಡಕವಾಗಿವೆ. ಇಲ್ಲಿ ಕೊಟ್ಟ ಗಾದೆ ಮಾತನ್ನು ಮಕ್ಕಳು ವಿಶ್ಲೇಷಿಸಿ,

ಚರ್ಚಿಸಿ ಮಂಡಿಸಲಿ. ಅಧ್ಯಾಪಕರು ಎಲ್ಲರ ವಿಚಾರಗಳನ್ನು ಕ್ರೋಡೀಕರಿಸಿ ವಿಸ್ತರಿಸಿದ ಗಾದೆ ಮಾತನ್ನು ಮಂಡಿಸಲಿ. ವಿದ್ಯಾರ್ಥಿಗಳು ಬರೆದುಕೊಳ್ಳಲಿ.

## ಗಾದೆ ಮಾತಿನ ವಿಸ್ತರಣೆ ಹೀಗೂ ಬರೆಯಬಹುದು

### ಸುತ್ತಿಗೆ ಶಬ್ದಕ್ಕೆ ಎಚ್ಚರವಾಗದ ನಾಯಿಗೆ ರೊಟ್ಟಿ ಶಬ್ದಕ್ಕೆ ಎಚ್ಚರವಾಗುತ್ತದೆ

ಜನರ ಹೊಟ್ಟೆಬಾಕ ಸಂಸ್ಕೃತಿಯನ್ನು ಈ ಗಾದೆ ಮಾತು ಸೂಚಿಸುತ್ತದೆ. ಇಂದು ಶ್ರಮವಹಿಸಿ ದುಡಿದು, ಹೊಟ್ಟೆ ತುಂಬಾ ತಿನ್ನಬೇಕು ಎಂಬುದಕ್ಕಿಂತಲೂ ಹೇಗೆ ಸುಲಭದಲ್ಲಿ ಹೊಟ್ಟೆ ತುಂಬಾ ಉಣ್ಣಬಹುದು ಎಂಬ ಚಿಂತೆಯೇ ಹೆಚ್ಚಾಗುತ್ತಿದೆ.

ಮನೆಯ ಕಾವಲುಗಾರ. ಇರುಳಿಡೀ ಸದಾ ಕಣ್ಣು ಕಿವಿ ಎಚ್ಚರವಾಗಿಟ್ಟುಕೊಂಡು ಮನೆಯನ್ನು ಕಾಯಬೇಕಾದ ಪ್ರಾಣಿ. ಬಹಳ ಸೂಕ್ಷ್ಮವಾದ ಸದ್ದು ಕೇಳಿದರೂ ಬೊಗಳಿ ಎಲ್ಲರನ್ನೂ ಎಚ್ಚರಗೊಳಿಸುವಂತಹದು. ಜನರಿಗೆ ಕೇಳದಂತಹ ಸದ್ದು ಕೂಡ ಕೇಳಬೇಕಾದ ನಾಯಿಗೆ ಸೋಮಾರಿತನದಿಂದಾಗಿ ಯಾವುದೇ ಶಬ್ದವೂ ಕೇಳಿಸುವುದಿಲ್ಲ; ಕೇಳಿದರೂ ಪ್ರತಿಕ್ರಿಯೆಸುವುದಿಲ್ಲ. ಸಣ್ಣ ಶಬ್ದವಿರಲಿ, ಸುತ್ತಿಗೆಯಿಂದ ಹೊಡೆದ ಗಟ್ಟಿಯಾದ ಶಬ್ದಕ್ಕೂ ಅದು ಎಚ್ಚರಗೊಳ್ಳುವುದಿಲ್ಲ ಬೊಗಳುವುದೂ ಇಲ್ಲ. ಆದರೆ ಸೋಮಾರಿಯಾಗಿರುವ ಇಂತಹ ನಾಯಿಯು ಆಹಾರದ ಪಾತ್ರೆಯ ಸಣ್ಣ ಸದ್ದಿಗೂ ಎಚ್ಚರಗೊಳ್ಳುತ್ತದೆ. ಆಹಾರಗಳಿಸುವುದೇ ಇದರ ಧ್ಯೇಯವಾಗಿರುತ್ತದೆ.

ಈ ಗಾದೆಯ ಸೂಚ್ಯಾರ್ಥವೇನೆಂದರೆ ಜನರಲ್ಲಿ ಇಂದು ಶ್ರಮದ ದುಡಿಮೆ ಕಡಿಮೆಯಾಗಿದೆ. ದೊರಕಿದ ಯಾವುದರಲ್ಲೂ, ತೃಪ್ತಿಪಡೆಯದೆ ಪುನಃ ಪಡೆಯಬೇಕು ಅಥವಾ ಇನ್ನೂ ಗಳಿಸಬೇಕು ಎಂಬ ಅತ್ಯಾಸೆ. ಅದರಲ್ಲೂ ಎಲ್ಲವೂ ತನಗೆ ದೊರಕಬೇಕೆಂಬ ಆಸೆಯನ್ನು ಈ ಗಾದೆ ಮಾತು ಸೂಚಿಸುತ್ತದೆ. ಬದುಕಿನಲ್ಲಿ ನಮಗೆ ಬೇಕಾದುದು ಅಶನ ವಸನ ವಸತಿ, ಇವುಗಳೆಲ್ಲವೂ ಇದ್ದಾಗ ತೃಪ್ತಿಪಡಬೇಕು. ತೃಪ್ತಿಯೇ ಸೌಭಾಗ್ಯವೆಂದು ತಿಳಿಯಬೇಕು. ಆದರೆ ಎಲ್ಲರಿಗೂ ಈ ಮನೋಭಾವ ಇಲ್ಲ. ಆಳಾಗಿ ದುಡಿದು ಅರಸನಾಗಿ ಉಣ್ಣಬೇಕು ಎನ್ನುವ ಮನೋಭಾವಕ್ಕಿಂತ ಹೇಗಾದರೂ ಮಾಡಿ ಅರಸನಂತೆ ಉಣ್ಣಬೇಕು ಅದಕ್ಕೆ ಮಾರ್ಗ ಯಾವುದಾದರೂ ಸರಿಯೇ ಎಂದು ಚಿಂತಿಸುವವರೂ ಕಡಿಮೆ ಏನಲ್ಲ.

ಈ ಗಾದೆ ಮಾತು ಮನುಷ್ಯನ ಋಣಾತ್ಮಕ ಮನೋಭಾವವನ್ನು ತಿಳಿಸುತ್ತದೆ. ಗಾದೆ ಮಾತಿನ ಅರ್ಥವನ್ನು ಮನಗಂಡು ಶ್ರಮವಹಿಸಿ ದುಡಿಯುವುದೇ ನಮ್ಮ ಧ್ಯೇಯವಾಗಿರಬೇಕು ಎಂಬುದನ್ನು ತಿಳಿಸುತ್ತದೆ.

- **ವೈಶಿಷ್ಟ್ಯ ಬರೆಯುವುದು**

ಮಕ್ಕಳಲ್ಲಿ ಕೊಟ್ಟ ಪದಗಳನ್ನು ಬರೆಯಲು ಹೇಳುವುದು ಪ್ರತಿಯೊಬ್ಬರು ಅವರವರು ಅರ್ಥ ಮಾಡಿಕೊಂಡಂತೆ ಆಯಾ ಪದಗಳ ವಿಶೇಷತೆಯನ್ನು ಆಶಯವನ್ನು ಬರೆಯಲು ಹೇಳುವುದು. ಬರೆದುದನ್ನು ಮಂಡಿಸಲಿ.

**ಕಣ್ಣು ಕಾಮಾಲೆ**

ಕಾಮಾಲೆ ರೋಗ ಬಂದವರಿಗೆ ತನ್ನ ಸುತ್ತ ಇರುವುದೆಲ್ಲವೂ ಹಳದಿಯಾಗಿ ಕಾಣಿಸುತ್ತದೆ. ಅಂದರೆ ಇತರರ ಕುರಿತಾಗಿ ತನಗೆ ಏನು ಮನೋಭಾವವಿದೆಯೋ ಅದೇ ಸರಿ ಎಂಬುದಾಗಿ ತಿಳಿಯುವುದು ಹಾಗೂ ವ್ಯವಹರಿಸುವುದಕ್ಕೆ ಇಂತಹ ಮಾತನ್ನು ಬಳಸುತ್ತಾರೆ.

**ಕಿವಿ ಹಿತ್ತಾಳೆ**

ನನಗೆ ಅಗತ್ಯವಿಲ್ಲದ ವಿಚಾರಗಳನ್ನು ಆಲಿಸುವುದು ಇತರರು ಮಾತನಾಡುವುದನ್ನು ಕೇಳಿಸಿಕೊಂಡು ತನಗೆ ಯಾವುದೇ ಲಾಭ ಇಲ್ಲದಿದ್ದರೂ ಅಥವಾ ಇತರರಿಗೆ ಹಾನಿಯಾಗುವುದೆಂದು ತಿಳಿದರು ಅದನ್ನು ಅಗತ್ಯವಿಲ್ಲದಲ್ಲಿ ಮಂಡಿಸುವುದು.

- **ವಾಕ್ಯ ರಚಿಸುವುದು**

ಮಕ್ಕಳಲ್ಲಿ ಹೋಲ್ ಸೇಲ್ ಪೊಲೀಸ್ ಈ ಪದಗಳ ಸಂವಾದಿಯಾದ ಕನ್ನಡ ಪದಗಳನ್ನು ಬರೆಯಲು ಹೇಳುವುದು ಸಾಧ್ಯವಾಗದಲ್ಲಿ ಅಧ್ಯಾಪಕಿ ಹೇಳಿಕೊಡುವುದು. ಈ ಪದಗಳನ್ನು ಬಳಸಿ ವಾಕ್ಯ ರಚಿಸಲು ಹೇಳುವುದು.

ಹೋಲ್ ಸೇಲ್ - ರಖಂ

ಪೋಲಿಸ್ - ಆರಕ್ಷಕ.

ಪುಸ್ತಕಗಳನ್ನು ರಖಂ ಆಗಿ ಖರೀದಿಸಿದಲ್ಲಿ ನಿಗದಿತ ಬೆಲೆಗಿಂತ ಕಡಿಮೆ ಬೆಲೆಗೆ ದೊರಕುತ್ತದೆ.

ರಸ್ತೆಯಲ್ಲಿ ವಾಹನ ಡಿಕ್ಕಿ ಹೊಡೆದ ಕೂಡಲೇ ಆರಕ್ಷಕರು ತಲುಪಿದರು.

- **ಪ್ರಬಂಧ ಬರೆಯುವುದು**

ಆಳಾಗಿ ದುಡಿ ಅರಸಾಗಿ ಉಣ್ಣು ಈ ಗಾದೆ ಮಾತಿನ ಆಶಯವನ್ನು ತಿಳಿಸುವುದು. ಈ ಆಶಯದ ಆಧಾರದಲ್ಲಿ ದುಡಿಮೆಯ ಮಹತ್ವ ಎಂಬ ವಿಷಯದ ಕುರಿತು ಪ್ರಬಂಧ ಬರೆಯಲು ಸೂಚಿಸುವುದು. ಮಕ್ಕಳಿಗೆ ಪ್ರಬಂಧದಲ್ಲಿ ಪೀಠಿಕೆ, ವಿಷಯ ವಿಸ್ತರಣೆ, ಉಪಸಂಹಾರವೆಂಬ ಹಂತಗಳು ಇರಬೇಕು ಭಾಷೆಯು ಸರಳವಾಗಿರಬೇಕು, ನಿಖರವಾಗಿರಬೇಕು. ವಿಷಯಗಳ ಜೋಡಣೆಯು ಅರ್ಥಪೂರ್ಣವಾಗಿರಬೇಕು ಇತ್ಯಾದಿ ವಿಚಾರಗಳನ್ನು ತಿಳಿಸುವುದು.

**ಸೂಚಕಗಳು :**

- ದುಡಿಮೆ ಎಂದರೇನು?
- ದುಡಿಮೆಯು ಹೇಗಿರಬೇಕು?

- ದುಡಿಮೆಯ ಮಹತ್ವವನ್ನು ಸೂಚಿಸುವ ಮಾತುಗಳು.
- ದುಡಿಮೆಯ ಪ್ರಯೋಜನ ಸ್ವಂತಕ್ಕೆ, ದೇಶಕ್ಕೆ ...ಇತ್ಯಾದಿ.

ಮಕ್ಕಳನ್ನು ಗುಂಪುಗಳಾಗಿ ಮಾಡಿ ಗುಂಪಿನಲ್ಲಿ ಒಬ್ಬರಂತೆ ಪ್ರಬಂಧ ಮಂಡಿಸಲು ಹೇಳುವುದು. ಸ್ಪರ್ಧೆಯಾಗಿಯೂ ನಡೆಸಬಹುದು. ಕೊನೆಯಲ್ಲಿ ಅಧ್ಯಾಪಕರು ಎಲ್ಲ ವಿಚಾರಗಳನ್ನು ಕೋಡೀಕರಿಸಿ ಭಾಷಾ ತಪ್ಪುಗಳಿಲ್ಲದ ಪ್ರಬಂಧ ನೀಡುವುದು.

## ಪ್ರಬಂಧವನ್ನು ಹೀಗೂ ಬರೆಯಬಹುದು

### ದುಡಿಮೆಯ ಮಹತ್ವ

ಒಂದು ಪ್ರದೇಶದ ಜನರೆಲ್ಲರನ್ನೂ ಒಟ್ಟಾಗಿ ಸಮಾಜ ಎನ್ನುತ್ತೇವೆ. ಉತ್ತಮ ಸುಖ ಸಂತೋಷದಿಂದ ಉತ್ತಮ ಜೀವನ ನಡೆಸಬೇಕು. ಸುಖ ಜೀವನ ನಡೆಸಬೇಕಾದರೆ ಅಶನ, ವಸನ, ವಸತಿ ಮುಂತಾದ ಅವಶ್ಯಕತೆಗಳು ನೆರವೇರಬೇಕು. ಅದಕ್ಕಾಗಿ ಹಣಬೇಕು, ಹಣ ಗಳಿಸಬೇಕಾದರೆ ದುಡಿಯಬೇಕು. ಆದುದರಿಂದಲೇ ಕೈ ಕೆಸರಾದರೆ ಬಾಯಿ ಮೊಸರು, ಆಳಾಗಿ ದುಡಿ ಅರಸಾಗಿ ಉಣ್ಣು ಇತ್ಯಾದಿ ಗಾದೆ ಮಾತುಗಳು ಹಿಂದಿನ ಕಾಲದಿಂದಲೇ ರೂಡಿಯಲ್ಲಿದ್ದವು. ಸಮಾಜದಲ್ಲಿ ಇವು ನಮಗೆ ದುಡಿಮೆಯ ಮಹತ್ವವನ್ನು ಸಾರುತ್ತವೆ.

ಎಲ್ಲ ಜೀವಿಗಳು ತಮ್ಮ ಅಗತ್ಯವನ್ನು ಪೂರೈಸಲು ದುಡಿಯಲೇ ಬೇಕು. ಪ್ರಾಣಿಗಳು ಬೇಟೆಯಾಡುವುದು, ಸಸ್ಯಗಳು ದ್ಯುತಿ ಸಂಶ್ಲೇಷಣೆ ನಡೆಸುವುದು ದುಡಿಮೆಯೇ ಅಲ್ಲವೇ? ಸಮಾಜ ಜೀವಿಯಾದ ಮಾನವನಿಗೆ ಅವಶ್ಯಕತೆಗಳು ಹೆಚ್ಚು. ಆದುದರಿಂದಲೇ ಜನರಿಗೆ ತಮ್ಮ ಬಯಕೆ ಅಥವಾ ಗುರಿ ಈಡೇರಬೇಕಾದರೆ ದುಡಿಯಲೇ ಬೇಕು.

ನಮ್ಮ ಹಿಂದಿನ ರಾಷ್ಟ್ರಪತಿ ಹಾಗೂ ಬಾಹ್ಯಾಕಾಶ ತಜ್ಞರಾದ ಡಾಕ್ಟರ್ ಎ. ಪಿ. ಜೆ ಅಬ್ದುಲ್ ಕಲಾಂರವರು ಮಕ್ಕಳಲ್ಲಿ 'ಕನಸು ಕಾಣಬೇಕು' ಎಂಬುದಾಗಿ ಹೇಳಿರುವುದು ನಮಗೆ ತಿಳಿದಿದೆ. ಈ ಕನಸು ನನಸಾಗಲು ಇರುವ ಮಾರ್ಗವೇ ದುಡಿಮೆ. ವಿದ್ಯಾರ್ಥಿಗಳು ಶ್ರದ್ಧೆಯಿಂದ 'ಶಿಸ್ತಿನಿಂದ ಕಠಿಣ ಪರಿಶ್ರಮದಿಂದ ದುಡಿದರೆ ಸಾಧಿಸಲಾಗದುದು ಯಾವುದು ಇಲ್ಲ'.

ದೇಶದ ಆರ್ಥಿಕತೆ ಉತ್ತಮಗೊಳ್ಳಬೇಕಾದರೆ ಎಲ್ಲರೂ ಶ್ರಮ ವಹಿಸಿ ದುಡಿಯಬೇಕು ಎಂಬುದನ್ನು ಮಹಾತ್ಮ ಗಾಂಧೀಜಿಯವರು ನಂಬಿದ್ದರು. ಕೃಷಿ ಹಾಗೂ ಚರಕದಿಂದ ನೂಲು ತೆಗೆಯಲು ಆರಂಭಿಸಿದದಕ್ಕೆ ಇದೇ ಕಾರಣ. ದೈಹಿಕ ದುಡಿಮೆಯಿಂದ ಜನರಲ್ಲಿ ಸ್ವಾವಲಂಬನೆ ಸ್ವಾಭಿಮಾನ ಅಲ್ಲದೆ ದೈಹಿಕ ಆರೋಗ್ಯವು ಲಭಿಸುತ್ತದೆ.

ದುಡಿಮೆಯು ಪ್ರಾಮಾಣಿಕವಾಗಿರಬೇಕು ಹಣವನ್ನು ಯಾವ ರೀತಿಯಿಂದಲೂ ಸಂಪಾದಿಸಬಹುದು. ಅದು ಇತರರಿಗೆ ತೊಂದರೆಯನ್ನು ಉಂಟು ಮಾಡಬಹುದು. ಆದರೆ ದುಡಿಮೆಯಲ್ಲಿ ಪ್ರಾಮಾಣಿಕತೆ ಇದ್ದರೆ ಮಾತ್ರ ತಕ್ಕುದಾದ ಫಲ ನಮಗೆ ಲಭಿಸಬಲ್ಲದು. ಸತ್ಯಸಂಧತೆ, ಕಠಿಣ ಪರಿಶ್ರಮ, ಶ್ರದ್ಧೆ, ಶಿಸ್ತು, ಸಮಯ ನಿಷ್ಠೆ ನಮ್ಮ ದುಡಿಮೆಯಲ್ಲಿರಬೇಕು. ಉತ್ತಮ ಕೃಷಿಕನೆಂಬ ಪ್ರಶಸ್ತಿ ದೊರಕಿದವನಾಗಲಿ ಅತ್ಯಂತ ದೊಡ್ಡ ಉದ್ಯಮಿ ಎಂದು ಹೆಸರು ಗಳಿಸಿದವನಾಗಲಿ. ಆ ಮಟ್ಟಕ್ಕೆ ತಲುಪಲು ಕಾರಣ ಆದರೆ ಅವಿಕ್ರಾಂತ ದುಡಿಮೆ ಎಂಬುದನ್ನು ವಿಶ್ಲೇಷಿಸಿ ನೋಡಿದಾಗ ತಿಳಿಯುವ ವಿಚಾರಗಳಾಗಿವೆ.

ಹಿರಿಯರು ಗಳಿಸಿಟ್ಟದು ಧಾರಾಳವಿದೆ ಎಂದು ಭಾವಿಸಿ, ಸೋಮಾರಿಯಾಗಿ ಕುಳಿತರೆ ಕೂತು ಉಂಬವನಿಗೆ ಕುಡಿಕೆ ಹಣ ಸಾಲದು ಎಂಬಂತಾಗುತ್ತದೆ. ತಾನು ದುಡಿದು ಉಣ್ಣಬೇಕು ಎಂಬ ನೀತಿಯನ್ನು ಪಾಲಿಸಿದರೆ ಎಷ್ಟೇ ಸಂಪತ್ತಿದ್ದರೂ ಆತ ಸೋಮಾರಿಯಾಗಲಾರನು. ಯಾವುದೇ ಕೆಲಸವನ್ನು ಆದರೂ ಮಾಡಬಹುದು. ಕೆಲಸದಲ್ಲಿ ಮೇಲುಕೀಳು ಸಲ್ಲದು. ಇಂದಿನ ಯುವಕರು ತನ್ನ ವಿದ್ಯಾರ್ಹತೆಗೆ ತಕ್ಕ ಉದ್ಯೋಗವಿಲ್ಲ ಎಂದು ಸೋಮಾರಿಗಳಾಗಿರುವುದನ್ನು ಕಾಣುತ್ತೇವೆ. ದುಡಿಮೆಗೆ ಪ್ರಾಧಾನ್ಯವನ್ನು ಕೊಡುವವರು ಹೀಗಲ್ಲ. ಸಿಕ್ಕಿದ ಯಾವುದೇ ಕೆಲಸವನ್ನು ಪ್ರಾಮಾಣಿಕತೆಯಿಂದ ಮಾಡಿ ಕಠಿಣ ಶ್ರಮದಿಂದ ಮೇಲ್ಮಟ್ಟಕ್ಕೆ ತಲುಪುತ್ತಾರೆ.

ಇಂದು ದುಡಿಮೆ ಎನ್ನುವುದು ಭೌತಿಕ ದುಡಿಮೆ ಮಾತ್ರವಲ್ಲ ಇಂದಿನ ತಾಂತ್ರಿಕ ಯುಗದಲ್ಲಿ ಬೌದ್ಧಿಕ ದುಡಿಮೆಗೂ ಅಷ್ಟೇ ಮಹತ್ವವಿದೆ. ಬೌದ್ಧಿಕ ದುಡಿಮೆ ಎಲ್ಲರಿಗೂ ಸಾಧ್ಯವಾಗದಿದ್ದರೂ ಆರೋಗ್ಯವುಳ್ಳ ಯಾವುದೇ ಮನುಷ್ಯನಿಗೆ ದೈಹಿಕ ದುಡಿಮೆ ಸಾಧ್ಯ. ದೈಹಿಕ ದುಡಿಮೆಗೆ ಇಂದು ಧಾರಾಳ ಅವಕಾಶವಿದ್ದರೂ ಜನರು ಸೋಮಾರಿಗಳಾಗಿರುವುದರಿಂದ ಇತರ ರಾಜ್ಯಗಳಿಂದ ನಮ್ಮ ಊರಿಗೆ ಕೆಲಸ ಮಾಡಲು ಜನರು ವಲಸೆ ಬರುತ್ತಿರುವುದನ್ನು ನಾವಿಂದು ಕಾಣುತ್ತಿದ್ದೇವೆ. ಇದು ಇಲ್ಲಿನ ಜನರ ನಿರುದ್ಯೋಗ ಸಮಸ್ಯೆಗೆ ಕಾರಣವಾಗಬಹುದು.

ಪ್ರತಿಯೊಬ್ಬ ಪ್ರಜೆಯ ದುಡಿಮೆಯು ದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುತ್ತದೆ. ಕೆಲಸ ಯಾವುದೇ ಇರಲಿ ದುಡಿಯಲು ಸಿದ್ದರಾಗಬೇಕು. ಕೆಲಸವನ್ನು ಪ್ರಾಮಾಣಿಕತೆಯಿಂದ ಮಾಡಬೇಕು. ದುಡಿಮೆಗೆ ಮೇಲು ಕೀಳು ಎಂಬುದಿಲ್ಲ. ಕೆಲಸ ಯಾವುದೇ ಇರಲಿ, ಸತ್ಯಸಂಧತೆ ಸಮಯ ನಿಷ್ಠೆ ಶಿಸ್ತುಗಳನ್ನು ಪಾಲಿಸಬೇಕು. ಕಠಿಣ ಶ್ರಮವನ್ನು ಮೈಗೂಡಿಸಿಕೊಳ್ಳಬೇಕು. ಕೆಲಸ ಮಾಡುವುದರಲ್ಲಿ ಸಂತೋಷವಿರಬೇಕು. ಮೈಮುರಿದು ದುಡಿಯುವುದರಿಂದ ಶಾರೀರಿಕ ಹಾಗೂ ಮಾನಸಿಕ ಆರೋಗ್ಯ ದೊರಕುತ್ತದೆ. ಪ್ರಗತಿಗೆ ಏರುವ ಮೆಟ್ಟಲಾಗುತ್ತದೆ. ಅರಸನಂತೆ ಉಣ್ಣಲು ಸಾಧ್ಯವಾಗುತ್ತದೆ ಎಂಬುದರಲ್ಲಿ ಸಂದೇಹವೇ ಇಲ್ಲ.

- **ಭಾಷಣ ತಯಾರಿಸುವುದು**

ಭಾಷಣ ತಯಾರಿಸುವುದಕ್ಕೆ ಮೊದಲು ಮಕ್ಕಳಿಗೆ ಭಾಷಣ ಎಂದರೇನು? ಹೇಗಿರಬೇಕು? ಇತ್ಯಾದಿ ವಿಚಾರಗಳನ್ನು ತಿಳಿಸಬೇಕು. ವಿಷಯ ಯಾವುದೇ ಇರಲಿ. ಅದನ್ನು ಉತ್ತಮವಾಗಿ ಆಲಿಸುವವರ ಮೇಲೆ ಪ್ರಭಾವ ಬೀರುವಂತೆ ಭಾಷಣ ಮಾಡುವುದು. ಒಂದು ಕಲೆ ವಿಷಯದ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸುವುದು. ಸಂಗ್ರಹಿಸಿದ ವಿಚಾರಗಳನ್ನು ಲಿಖಿತ ಭಾಷಣಕ್ಕೆ ವಿಸ್ತರಿಸುವುದು. ಲಿಖಿತ ಭಾಷಣಕ್ಕೆ ಮೊದಲು ಪ್ರಬಂಧಕ್ಕಿಂತ ಭಾಷಣವು ಹೇಗೆ ಭಿನ್ನವಾಗಿದೆ? ಎಂಬುದನ್ನು ತಿಳಿಸುವುದು. ಭಾಷಣದ ಬರವಣಿಗೆ ಉತ್ತಮ ಪುರುಷದಲ್ಲಿರಬೇಕು, ಸಂಬೋಧನೆ ಇರಬೇಕು, ಗಾದೆ ಮಾತುಗಳು, ಲೋಕೋಕ್ತಿ ಇತ್ಯಾದಿ ಅರ್ಥವ್ಯಾಪ್ತಿ ಇರುವ ಚಿಕ್ಕ ಮಾತುಗಳನ್ನು ಸಂದರ್ಭೋಚಿತವಾಗಿ ಬಳಸುವುದು. ಕೇಳುಗರನ್ನು ಚಿಂತನೆಗೊಳಪಡಿಸುವಂತೆ ಮಧ್ಯೆ ಮಧ್ಯೆ ಸೂಕ್ತವಾದ ಭಾವಸೂಚಕ ವಾಕ್ಯಗಳನ್ನು ಬಳಸಬಹುದು. ಲಿಖಿತ ಭಾಷಣಕ್ಕೆ ಮೊದಲು ಮೌಖಿಕವಾಗಿ ಮಕ್ಕಳಿಂದ ಭಾಷಣ ಮಾಡಿಸಬೇಕು.

**ಸೂಚಕಗಳು :**

- ಸಂಸ್ಕೃತಿ ಎಂದರೇನು?
- ಸಂಸ್ಕೃತಿ ಏನನ್ನು ಒಳಗೊಂಡಿವೆ?
- ದೇಶದ ಸಂಸ್ಕೃತಿ......ಇತ್ಯಾದಿ.

**ಲಿಖಿತ ಭಾಷಣ ಹೀಗೂ ಇರಬಹುದಲ್ಲವೇ?**

ಗೌರವಾನ್ವಿತ ಅಧ್ಯಕ್ಷರೇ ಅತಿಥಿಗಳೇ ಹಾಗೂ ಸಹಪಾಠಿಗಳೇ, ಎಲ್ಲರಿಗೂ ನಮಸ್ಕಾರ. ಇಂದು ನಾನು ನನ್ನ ದೃಷ್ಟಿಯಲ್ಲಿ ಸಂಸ್ಕೃತಿ ಎಂದರೇನು? ಎಂಬುದನ್ನು ನಿಮ್ಮ ಮುಂದೆ ಹಂಚಿಕೊಳ್ಳಲು ಇಚ್ಛಿಸುತ್ತೇನೆ.

ಸಂಸ್ಕೃತಿ ಅನ್ನೋದು ಇಂದು ನಿನ್ನೆಯದಲ್ಲ ಶತಶತಮಾನಗಳಿಗಿಂತ ಹಿಂದಿನದು ಗ್ರೀಕ್ ಸಂಸ್ಕೃತಿ, ಈಜಿಪ್ಟ್, ಹರಪ್ಪ, ಮಹೆಂಜದಾರೋ ಸಂಸ್ಕೃತಿ ಇವುಗಳೆಲ್ಲ ಇದಕ್ಕೆ ಉದಾಹರಣೆಗಳಲ್ಲವೇ?

ಹಾದಿ ಎಂದರೆ ಮಾನವನು ತಾನು ಜೀವಿಸಲು ತನ್ನ ತಾನು ಸಂರಕ್ಷಿಸಿಕೊಳ್ಳಲು ಹಲವು ಮಾರ್ಗಗಳನ್ನು ಹುಡುಕಿ ಅವುಗಳಲ್ಲಿ ತನಗೆ ಅನುಕೂಲವಾದವುಗಳನ್ನು ಉಳಿಸಿ ಮುಂದಿನ ತಲೆಮಾರಿಗೆ ಹಂಚಿಕೊಂಡನು. ಈ ರೀತಿಯಲ್ಲಿ ಹಿಂದಿನ ತಲೆಮಾರು ಅವರ ಆಹಾರ ಆಚಾರ ವಿಚಾರ ರೀತಿ ನೀತಿಗಳನ್ನು ಮುಂದಿನ ತಲೆಮಾರಿಗೆ ವರ್ಗಾಯಿಸಿದರು. ಇಂದು ಲೋಕದಲ್ಲಿ ಕಾಣುವ ಸಂಸ್ಕೃತಿ ಎಲ್ಲವೂ ಪೂರ್ವಜರಿಂದ ವರ್ಗಾಯಿಸಲ್ಪಟ್ಟರು ಎಂಬುದಕ್ಕೆ ಸಂಶಯವಿದೇಯೇ? ಸಂಸ್ಕೃತಿ ಎಂದರೆ ಏನು? ಇತಿಹಾಸ ಭೌಗೋಳಿಕ ರಚನೆ ವಿವಿಧ ರೀತಿಯ ಆಚಾರ ಆಹಾರ ವೇಷಭೂಷಣಾಧಿಗಳು ಭಾಷೆ ಎಲ್ಲವನ್ನೂ ಒಟ್ಟಾಗಿ ಸಂಸ್ಕೃತಿ ಎನ್ನಬಹುದು. ಆರ್ಯ ಸಂಸ್ಕೃತಿ, ಸಿಂಧೂ ನದಿ ತೀರದ ಸಂಸ್ಕೃತಿ, ಬೌದ್ಧ, ಮುಸ್ಲಿಂ ಸಂಸ್ಕೃತಿ ಹೀಗೆ ಭಾರತೀಯ ಸಂಸ್ಕೃತಿಗಳು ಇಂದು ನಾವು ಕಾಣುವ ಸಂಸ್ಕೃತಿಯ ಅಡಿಗಲ್ಲಾಗಿತ್ತು ಎಂದು ಹೇಳಬಹುದು.

ತಾನು ಬದುಕುವುದು, ಇತರರನ್ನು ಬದುಕು ಕೊಡುವುದು, ತಾನು ಸಂತೋಷಗೊಳ್ಳುವುದು, ಇತರರನ್ನು ಸಂತೋಷಗೊಳಿಸುವುದು. ಇದೇ ನನ್ನ ದೃಷ್ಟಿಯಲ್ಲಿ ಸಂಸ್ಕೃತಿ, ತಾನು ಬದುಕಿ ಇತರರನ್ನು ಬದುಕಗೊಡಬೇಕಾದರೆ ತನ್ನ ಮಾತು ಹಾಗೂ ಕೃತಿಗಳು ಇತರರನ್ನು ನೋಯಿಸಬಾರದು. ಪರಸ್ಪರ ಪ್ರೀತಿ ಸ್ನೇಹ ಸೌಹಾರ್ದ ಸೌಜನ್ಯ ಕರುಣೆ ಅನುಕಂಪ ಸಹಾನುಭೂತಿ ಗೌರವ ಇತ್ಯಾದಿ ಗುಣಗಳಿದ್ದಲ್ಲಿ ಮಾತ್ರವೇ ಸಮಾಜದ ಬದುಕು ಸುಂದರವಾಗುತ್ತದೆ. ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಣವಕ್ಕು ಎಂದು ಸರ್ವಜ್ಞನು ಶತಮಾನಗಳ ಹಿಂದೆಯೇ ಹೇಳಿದುದು ಮನಕುಲದ ಉಳಿವಿಗೆ ಈ ಮಾನವರಲ್ಲಿ ಇಂತಹ ಮನೋಭಾವ ಅಗತ್ಯವೆಂದು ಕಂಡುದರಿಂದಲೇ ಅಲ್ಲವೇ?.

ಮಾನವ ಪ್ರೀತಿ ಮಾತ್ರ ಸಂಸ್ಕೃತಿ ಎಂದು ತಿಳಿಯಬಾರದು ಪ್ರಕೃತಿಯನ್ನು ಆರಾಧಿಸುವ ಕಲೆ ಇಂದು ನಿನ್ನೆಯದಲ್ಲ. ಇಂತಹ ಆರಾಧನೆ ಇದ್ದರೆ ಮಾತ್ರ ಗುಡ್ಡ ಬೆಟ್ಟ ಕಾಡು ಪಕ್ಷಿಗಳ ಸಂರಕ್ಷಣೆ ನಡೆಯುತ್ತದೆ. ಇಂದು ಆರಾಧನಾ ದೃಷ್ಟಿ ಇಲ್ಲದೆಯೂ ಇವುಗಳನ್ನು ಸಂರಕ್ಷಿಸುತ್ತಿರುವುದು ನಮ್ಮ ಸಂಸ್ಕೃತಿ. ಚೆನ್ನಾಗಿ ದುಡಿದು ಬಾಳಬೇಕು ಪ್ರಾಮಾಣಿಕ ಪ್ರಯತ್ನದಿಂದ ಆಶನ ವಸನಗಳನ್ನುಗಿಟ್ಟಿಸಬೇಕು. ಮನಸ್ಸು ಮಲಿನವಾಗದೆ ಇತರರಲ್ಲಿ ದ್ವೇಷ ತಾಳದೆ ಬಾಳುವುದೇ ಸಂಸ್ಕೃತಿ.

ಒಂದು ನಾಡಿನ ಸಂಸ್ಕೃತಿ ಎಂದರೆ ಅಲ್ಲಿನ ಜನರು ಪಾಲಿಸುವ ಧರ್ಮ ಆಹಾರ ಪದ್ಧತಿ ಉಡುಗೆ ತೊಡುಗೆ ಸಾಹಿತ್ಯ ಕಲೆಗಳು ವಿಹಾರ ಕ್ರೀಡೆಗಳು ಆಚಾರ ವಿಚಾರಗಳು ಸಂಪ್ರದಾಯಗಳು ಎಲ್ಲವೂ ಒಳಗೊಂಡವುಗಳಾಗಿವೆ. ಇವುಗಳು ಒಂದಲ್ಲ ಒಂದು ರೀತಿಯಲ್ಲಿ ಮನುಕುಲದ ಉಳಿವಿಗಾಗಿ ಪ್ರಗತಿಗೆ ಪೂರಕವಾಗಿವೆ.

ರೈಲ್ವೆ ಸಚಿವರಾಗಿದ್ದ ಲಾಲ್ ಬಹದ್ದೂರ್ ಶಾಸ್ತ್ರಿಗಳು ತಾವು ಪ್ರಯಾಣಿಸುವಾಗ ನಡೆದ ಅಪಘಾತದ ಸಂದರ್ಭದಲ್ಲೇ ಗಾಯಗೊಂಡ ಚಾಲಕನನ್ನು ಆಸ್ಪತ್ರೆಗೆ ತಲುಪಿಸುದರೊಂದಿಗೆ ಡಿಕ್ಕಿ ಆದ ಹಸುವಿನ ಕಡೆಗೂ ಹೋದರು. ಸಾಮಾನ್ಯರಂತೆ ಪೊಲೀಸ್ ಠಾಣೆಗೂ ಹೋಗಿ ಸುದ್ದಿ ತಿಳಿಸಿದವರು. ಕಾನೂನು ಪ್ರಕಾರವೇ ನಡೆದುಕೊಂಡವರು. ತನ್ನ ಪದವಿಯನ್ನು ಎಲ್ಲಿಯೂ ಬಳಸಿಕೊಳ್ಳಲಿಲ್ಲ. ಇದು ಸಂಸ್ಕೃತಿ. ಇಂದೂ ಇಂತಹವರು ಇಲ್ಲವೆಂದಲ್ಲ. ಅಸಂಸ್ಕೃತ ಹಾದಿಯಲ್ಲಿ ಸಾಗಿದವರು. ಕಾನೂನು ಪದವಿ ಕಲಿತದ್ದೇ ಅಲ್ಲದೆ ವಿಧಾನಸಭೆಯ ಸದಸ್ಯಯಾಗಿದ್ದಾಗ ಕೋವಿಡ್ ಮಹಾಮಾರಿಯ ಸಂದರ್ಭದಲ್ಲಿ ತಲೆಹೊರೆಯಾಗಿ ಸಾಗಿಸಿ ಆಹಾರ ವಸ್ತುಗಳನ್ನು ಆದಿವಾಸಿಗಳಿಗೆ ತಲುಪಿಸಿದುದು ಮಾಧ್ಯಮಗಳಲ್ಲಿ ಎಲ್ಲರೂ ವೀಕ್ಷಿಸಿ ಇರಬಹುದು. ಇದು ಮಾದರಿ; ಇದು ಸಂಸ್ಕೃತಿ ಆದರೆ ಸುಸಂಸ್ಕೃತರು ಎಂದು ಕರೆಸಿಕೊಳ್ಳುತ್ತಿರುವವರು ಇಂದಿಗೂ ಸಂಸ್ಕೃತಿ ಇಲ್ಲದೆ ವ್ಯವಹರಿಸುತ್ತಿರುವುದು ಈ ಕಾಲದ ಶೋಚನೀಯ ಅವಸ್ಥೆಯೇ ಅಲ್ಲವೇ?

ಸಮಾಜ ಜೀವಿಗಳಾದ ನಾವು ಬಾಲ್ಯದಿಂದಲೇ ಉತ್ತಮ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಬೇಕು. ಇಂದಿನ ಮಕ್ಕಳೇ ಮುಂದಿನ ಜನಾಂಗ ಹೀಗಿರುವಾಗ ಉತ್ತಮ ಸಮಾಜದ ನಿರ್ಮಾಣಕ್ಕೆ ಸುಸಂಸ್ಕೃತರಾದ ಮಾನವರಾಗಿ ಬಾಳೋಣ ಎಲ್ಲರಿಗೂ ಮಾದರಿಯಾಗೋಣ ಎಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

- **ವ್ಯಕ್ತಿ ಪರಿಚಯ ಬರೆಯುವುದು**

ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಕುರಿತಾದ ಕೃತಿಗಳು ಇಂದು ಧಾರಾಳವಿವೆ. ಶಾಲಾ ಗ್ರಂಥಾಲಯದಲ್ಲಿದ್ದರೆ ಅದನ್ನು ಮಕ್ಕಳಿಗೆ ಒದಗಿಸಬಹುದು. ಇಲ್ಲವಾದರೆ ಅಧ್ಯಾಪಕಿ ಐಸಿಟಿ ಸಹಾಯದಿಂದ ಗಳಿಸಿಕೊಂಡು ಮಕ್ಕಳಿಗೆ ವೀಕ್ಷಿಸಲು ಹಾಗೂ ಗುರುತಿಸಲು ಅವಕಾಶ ಮಾಡಿಕೊಡುವುದು. ಬಳಿಕ ಮಕ್ಕಳಲ್ಲಿ ವೈಯಕ್ತಿಕವಾಗಿ ಬರೆದು ಮಂಡಿಸಲು ಹೇಳುವುದು. ಮಂಡಿಸೋ ಸಂದರ್ಭದಲ್ಲಿ ತಪ್ಪುಗಳಿದ್ದಲ್ಲಿ ತಿದ್ದಿ ಸರಿಪಡಿಸುವುದು.

## ಲಾಲ್ ಬಹದ್ದೂರ್ ಶಾಸ್ತ್ರಿ

ಇಂದಿನ ಉತ್ತರ ಪ್ರದೇಶದ ಉಪಾಧ್ಯಾಯ ನಗರದಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಅಕ್ಟೋಬರ್ 2 1904 ರಂದು ಜನಿಸಿದರು. ಅವರ ತಂದೆ ಶರತ್ ಪ್ರಸಾದ ಶ್ರೀನಿವಾಸ್ತವ ತಾಯಿ ರಾಮ್ದುಲಾರಿ ದೇವಿ. ಅವರು ಹರಿಶ್ಚಂದ್ರ ಹೈಸ್ಕೂಲಿನಲ್ಲಿ ಕಲಿಯುತ್ತಿರುವಾಗಲೇ ಅಸಹಕಾರಿ ಚಳವಳಿಗೆ ಧುಮುಕಿದವರು. ಹರಿಜನರ ಉದ್ಧಾರಕ್ಕಾಗಿ ದುಡಿದವರು. 1920ರಲ್ಲಿ ಭಾರತದ ಸ್ವಾತಂತ್ರ್ಯ ಚಳವಳಿಗೆ ಕೈಜೋಡಿಸಿದ್ದರು. ಸರಳ ಸಜ್ಜನಿಕೆ ವ್ಯಕ್ತಿತ್ವವನ್ನು ಹೊಂದಿದ ಇವರು ಪ್ರಥಮ ಪಾರ್ಲಿಮೆಂಟಿನಲ್ಲಿ ರೈಲ್ವೆ ಸಚಿವರಾಗಿಯೂ ಉತ್ತಮ ಸೇವೆ ಸಲ್ಲಿಸಿದರು. 1964 ರಲ್ಲಿ ಭಾರತದ ಎರಡನೇ ಪ್ರಧಾನಮಂತ್ರಿಯಾಗಿ ಆಯ್ಕೆಯಾದರೆ ಅವಧಿ ಪೂರ್ತಿ ಗೊಳಿಸುವ ಮೊದಲೇ 1966 ಜನವರಿ 11ರಂದು ನಿಧನ ಹೊಂದಿದರು.

# ಭೂಲೋಕದ ಅಮರಾವತಿ ಶಿಮ್ಲಾ

ಮಕ್ಕಳು ತಾವು ಪ್ರವಾಸ ಹೋದ ಅಥವಾ ವಿನೋದ ಸಂಚಾರ ನಡೆಸಿದ ವಿಚಾರಗಳನ್ನು ತರಗತಿಯಲ್ಲಿ ಮಂಡಿಸಲು ಹೇಳುವುದು. ಎಲ್ಲರಿಗೂ ಹೇಳಲು ಅವಕಾಶ ನೀಡುವುದು. ಪ್ರವಾಸ ಮಾಡದಿದ್ದರೆ ಅವರಿಗೆ ಅತ್ಯಂತ ಸಂತೋಷ ನೀಡಿದ ಪ್ರಯಾಣದ ಅನುಭವವನ್ನು ಹೇಳಲು ಹೇಳುವುದು.

ಕವಿ ಪರಿಚಯದ ಬಳಿಕ ರೋಮಾಂಚಕಾರಿ ಅನುಭವವನ್ನು ನೀಡುವ ಪಾಠ ಭಾಗವನ್ನು ಮಕ್ಕಳಿಂದ ಮೌನವಾಗಿ ಓದಲು ಹೇಳುವುದು. ಮಕ್ಕಳನ್ನು ಗುಂಪುಗಳಾಗಿ ಮಾಡುವುದು. ಪ್ರತಿಯೊಂದು ಗುಂಪು ಅವರವರು ಓದಿದ ಪಾಠಭಾಗದಿಂದ ಪ್ರಶ್ನೆಗಳನ್ನು ತಯಾರಿಸಿ ಮಂಡಿಸಲಿ. ಪುನಃ ಅದೇ ಗುಂಪನ್ನು ಓದಲು ಸೂಚಿಸಿ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಲು ಸೂಚಿಸುವುದು. ಈ ಸಂದರ್ಭದಲ್ಲಿ ಗುಂಪಿನ ಎಲ್ಲ ವಿದ್ಯಾರ್ಥಿಗಳಿಗೂ ಅವಕಾಶ ನೀಡಬೇಕು. ಪ್ರಶ್ನೋತ್ತರ ಓದುವ ಸಂದರ್ಭದಲ್ಲಿ ತಪ್ಪುಗಳಿದ್ದಲ್ಲಿ ತಿದ್ದಿ ಸರಿಪಡಿಸುವುದು. ಪರಸ್ಪರ ಹಂಚಿಕೊಂಡು ಎಲ್ಲ ಪ್ರಶ್ನೆಗಳನ್ನು ಉತ್ತರಗಳನ್ನು ಎಲ್ಲ ಮಕ್ಕಳು ಬರೆದುಕೊಳ್ಳಲಿ. ಅಧ್ಯಾಪಕರು ಪಾಠ ಭಾಗವನ್ನು ಗಟ್ಟಿಯಾಗಿ ಓದುವುದು. ಅಲ್ಲಿ ಬಂದ ಕಠಿಣ ಪದಗಳನ್ನು ಮಕ್ಕಳು ಗುರುತಿಸಿ, ಅರ್ಥ ಬರೆದು ಮಂಡಿಸಲಿ ಅಗತ್ಯವಿದ್ದಲ್ಲಿ ಕರಿಹಲಗೆಯಲ್ಲಿ ಬರೆಯುವುದು.

- **ಉತ್ತರಿಸುವುದು**

ಪಾಠದ ಆಶಯ ಗ್ರಹಣಕ್ಕಾಗಿ ಮಕ್ಕಳು ಪ್ರಶ್ನೆ ತಯಾರಿಸಿದಾಗ ಈ ಪ್ರಶ್ನೆಗಳು ಒಳಗೊಂಡಿರಬಹುದಲ್ಲವೇ ಇಲ್ಲವಾದರೆ ಈ ಪ್ರಶ್ನೆಗಳು ಉತ್ತರವಾಗಿ ಬರುವ ಪಾಠ ಭಾಗವನ್ನು ವಿದ್ಯಾರ್ಥಿಗಳಿಂದ ಓದಿಸಿ, ಉತ್ತರ ಬರೆಸುವುದು.

- **ಲೇಖನ ಬರೆಯುವುದು**

ಮಕ್ಕಳು ಪಾಠವನ್ನು ಓದಲಿ. ಆ ಬಳಿಕ ಶಿಮ್ಲಾವನ್ನು ಭೂಲೋಕದ ಸ್ವರ್ಗ ಎಂದು ಹೇಳಲು ಕಾರಣವಾದ ಅಂಶಗಳನ್ನು ಪಾಠಭಾಗದಿಂದ ಗುರುತಿಸಿ ಬರೆಯಲಿ. ಎಲ್ಲವನ್ನೂ ಒಟ್ಟು ಸೇರಿಸಿ ಲೇಖನವನ್ನು ತಯಾರಿಸಲಿ.

ಜಯದೇವಪ್ಪ ಜೈನ ಕೇರಿ ಅವರ ಶಿಮ್ಲಾ ಪ್ರವಾಸದ ಅನುಭವವು ಓದುಗರಾದ ನಮ್ಮನ್ನು ರೋಮಾಂಚನಗೊಳಿಸುತ್ತದೆ. ಅವರ ಕಾಲ್ಕಾನಗರದಿಂದ ಶಿಮ್ಲಾಕ್ಕೆ ಮಾಡುವ ಪ್ರಯಾಣವೇ ಅದ್ಭುತ ಅನುಭವ ನೀಡಿತ್ತು. ಪ್ರಕೃತಿ ರಮ್ಯ ದೃಶ್ಯಗಳನ್ನು ನೋಡುತ್ತಾ ಮೂರು ಗಂಟೆಗಳ ಕಾಲ ಅವರ ಪ್ರಯಾಣ ಸಾಗಿತ್ತು. ರಾತ್ರಿ ಸಿಮ್ಲಾದ ದೃಶ್ಯವೂ ಮನಮೋಹಕವಾಗಿತ್ತು. ಹಂತ ಹಂತವಾಗಿದ್ದ ಬೆಟ್ಟಗಳು, ಕಟ್ಟಡಗಳು, ದೀಪಮಾಲೆಗಳು ಆಕಾಶದ ನಕ್ಷತ್ರಗಳನ್ನೆಲ್ಲ ಭೂಮಿಗೆ ಇಳಿದು ಒಟ್ಟಿನಲ್ಲಿ ಸ್ವರ್ಗವೇ ಸಾಕ್ಷಾತ್ಕರಿಸಿದಂತೆ ಕಾಣುತ್ತಿತ್ತು. ಅಲ್ಲಿಂದ 28 ನೂರು ಅಡಿ ಎತ್ತರವಿರುವ ಕೊರ್ಫಿ ಹಿಲ್ ನ ಪ್ರಯಾಣದಲ್ಲಿ ಇಂದ್ರನ ಅಮರಾವತಿಯ ಕಲ್ಪನೆಯ 3-4 ಅಂತಸ್ತಿನ ಕಟ್ಟಡಗಳು, ಪಾವಟಿಗೆಗಳ ರಸ್ತೆಗಳು, ಬೆಟ್ಟ ಗುಡ್ಡಗಳು, ಸುಂದರವಾಗಿ ಕಂಡರೆ ಅಪಾಯಕಾರಿ ತಿರುವುಗಳು ಆತಂಕವನ್ನು ಮೂಡಿಸುತ್ತಿದ್ದುವು.

ಈ ಪ್ರಯಾಣದಲ್ಲಿ ಹಸಿರು ಬೆಟ್ಟಗಳು, ಆಳವಾದ ಕಮರಿಗಳು, ಬೆಟ್ಟದ ಸಂಧಿನಿಂದ ಇಣುಕುವ ಜಲಪಾತಗಳು, ನೀರಿನ ಝರಿಗಳು, ಫೈನ್ ಹಾಗೂ ದೇವದಾರು ವೃಕ್ಷಗಳ ವನರಾಜಿ ಕಣ್ಣಿಗೆ ತಂಪು ನೀಡುತ್ತಿದ್ದು, ಪ್ರಕೃತಿ ರಮ್ಯತೆಯ

ರಸಾನುಭವದೊಂದಿಗೆ ಇದಕ್ಕಿದ್ದಂತೆ ಬೀಸುವ ಚಳಿಗಾಳಿ ಬಳಿಕ ಬಿಸಿಲು ಮರುಕ್ಷಣವೇ ಮಂಜು ಮುಸುಕಿ ದೃಶ್ಯಗಳೆಲ್ಲ ತೇಲುವ ಮೋಡಗಳಲ್ಲಿ ಅದೃಶ್ಯವಾಗುತ್ತಿದ್ದವು.

ಸಿಮ್ಲಾದ ಫಾಗು ಪಾಯಿಂಟಿನಲ್ಲಿ ಗಾಳಿ ಚಳಿ ಬಿಸಿಲಿನ ವಾತಾವರಣದಲ್ಲಿ ಚಿಕ್ಕ ಚಿಕ್ಕ ಗ್ರಾಮಗಳು ಕೃಷಿಯ ಪ್ರದೇಶಗಳು ಸೇರಿ ಕಣ್ಣಿನ ದೃಷ್ಟಿ ಹರಿಯುವವರೆಗೂ ಪ್ರಕೃತಿ ಸೌಂದರ್ಯವನ್ನು ಸವಿಯಬಹುದಾಗಿತ್ತು. ಇಲ್ಲಿ ಹಿಮದ ಮೇಲೆ ಜಾರುವುದು ರಾಫ್ಟಿಂಗ್ ಇತ್ಯಾದಿ ಕ್ರೀಡೆಗಳು ಪ್ರವಾಸಿಗರಿಗೆ ರೋಮಾಂಚಕಾರಿ ಅನುಭವ ನೀಡುತ್ತಿದ್ದುವು. ಹಿಮಾವರಿಸಿದ ಗಿರಿ ಶಿಖರಗಳು, ದೇವದಾರು ಪೈನ್ ವೃಕ್ಷಗಳ ದಟ್ಟವಾದ ಅರಣ್ಯ, ಅಲ್ಲಲೇ ಹರಿಯುವ ನದಿಗಳು, ಜಲಪಾತಗಳು, ನಿರಂತರವಾಗಿ ಹರಿಯುತ್ತಿರುವ ಅಪರೂಪದ ನಿಸರ್ಗ ಸೌಂದರ್ಯವನ್ನು ಇಲ್ಲಿ ಆಸ್ವಾದಿಸಬಹುದು.

ಕುರ್ಫಿ ಪಾಯಿಂಟ್‌ನಿಂದ ಶಿಮ್ಲಾ ಕ್ಕೆ ಲೇಖಕರು ವಾಪಸು ಹೊರಟಾಗ ಹಿಮಪಾತ ಆರಂಭವಾಗಿತ್ತು. ಅಲ್ಲದೆ ಸುತ್ತಲ ಗಿಡಮರ ರಸ್ತೆ ಎಲ್ಲೆಡೆಗಳಲ್ಲೂ ಮಲ್ಲಿಗೆ ಸುರಿದಂತೆ ಹಿಮದ ತುಣುಕುಗಳು ಬೀಳುತ್ತಿದ್ದವು. ಇಲ್ಲಿಗೆ ಸಹಸ್ರಾರು ಪ್ರವಾಸಿಗರು ದಿನವೂ ಭೇಟಿ ನೀಡುವುದಿದ್ದರೂ ಎಲ್ಲಿಯೂ ಕಸಕಡ್ಡಿಗಳಿಲ್ಲ. ರಸ್ತೆಗಳು ಸ್ವಚ್ಛವು ಸುಂದರವಾಗಿದ್ದುವು. ಸುಂದರವಾದ ಮರದ ಕೆತ್ತನೆಯ ಬ್ರಿಟಿಷ್ ವಾಸ್ತು ಶೈಲಿಯ ಕಟ್ಟಡಗಳು ಇದ್ದುವು. ಈ ರೀತಿಯಲ್ಲಿ ಅತ್ಯಂತ ಸುಂದರವಾದ ಪ್ರಕೃತಿ ರಮಣೀಯವಾದ ಪ್ರದೇಶವು ಶಿಮ್ಲಾವಾದುದರಿಂದಲೇ ಲೇಖಕರು ಶಿಮ್ಲಾವನ್ನು ಭೂಮಿಯ ಮೇಲಿನ ಸ್ವರ್ಗ ಎಂಬುದರಲ್ಲಿ ಸಂದೇಹವಿಲ್ಲ ಎಂದು ಹೇಳಿದ್ದಾರೆ.

- **ಕರ ಪತ್ರ ರಚಿಸುವುದು**

ಕರಪತ್ರ ಎನ್ನುವುದು ಸಾರ್ವಜನಿಕರೆಲ್ಲರನ್ನು ಉದ್ದೇಶಿಸಿರುವ ಪತ್ರವಾಗಿದೆ. ಸಾಮಾನ್ಯವಾಗಿ ಕರಪತ್ರಗಳನ್ನು ಶಾಲಾ ವಿದ್ಯಾರ್ಥಿಗಳು, ಸಂಸ್ಥೆಗಳು, ಸರಕಾರವು ಪ್ರಕಟಪಡಿಸುವುದನ್ನು ಕಾಣುತ್ತೇವೆ. ಕರಪತ್ರ ಎಂಬ ಶೀರ್ಷಿಕೆ ಅಥವಾ ವಿಷಯ ಸಂಬಂಧಿ ಶೀರ್ಷಿಕೆಯನ್ನು ಕರಪತ್ರಕ್ಕೆ ನೀಡಬಹುದು. ಕರಪತ್ರದಲ್ಲಿ ತಿಳಿಸುವ ವಿಚಾರಗಳು ಸರಳವಾಗಿಯೂ, ಸಂಕ್ಷಿಪ್ತವಾಗಿಯೂ ಇರಬೇಕು. ಆಶಯವು ಓದುಗನಿಗೆ ಬೇಗ ಅರ್ಥವಾಗುವಂತಿರಬೇಕು. ಯಾರು ಪ್ರಕಟಿಸುತ್ತಾರೆ. ಅವರ ಹೆಸರು, ವಿಳಾಸವಿರಬೇಕು. ಸ್ಥಳ ತಾರೀಕು ಇರಬೇಕು. ವಿಷಯ ವಿವರಣೆಯ ಬಳಿಕ ಸಾಮಾನ್ಯ ಪತ್ರ ಕೊನೆಗೊಳಿಸುವಂತೆ ಕೊನೆಗೊಳಿಸಬೇಕು.

ಸಾವಿರಾರು ಮಂದಿ ಬರುವುದರಿಂದ ಪ್ರವಾಸಿ ತಾಣಗಳು ಸ್ವಾಭಾವಿಕವಾಗಿ ಮಲಿನವಾಗುತ್ತವೆ. ಅವುಗಳನ್ನು ಶುಚಿಯಾಗಿ ಇಡಬೇಕಾಗಿದೆ. ಈ ವಿಷಯವನ್ನು ಮಕ್ಕಳು ಗುಂಪಿನಲ್ಲಿ ಚರ್ಚಿಸಿ ಬರೆಯಲು ಹೇಳುವುದು. ಬಳಿಕ ಅವರು ಮಂಡಿಸಲಿ ಅದನ್ನು ತಿದ್ದಿ ಸರಿಪಡಿಸುವುದು.

## ಪ್ರವಾಸೀ ತಾಣವನ್ನು ನಾವು ಸುಂದರವಾಗಿರಿಸೋಣ

ರಾಣಿಪುರ ಸಂರಕ್ಷಕ ಸಮಿತಿ
ರಾಣಿಪುರ ಅಂಚೆ
ಪಾಣತ್ತೂರು.
20.3.2024

ಪ್ರಿಯರೇ,

ಪ್ರಕೃತಿ ರಮಣೀಯವಾದ ಪ್ರವಾಸಿ ತಾಣವು ನಾಡಿನ ಸಂಪತ್ತು ಇಂತಹ ತಾಣಗಳು ಮನಸ್ಸನ್ನು ಅರಳಿಸಿ ಮುದಗೊಳಿಸುತ್ತವೆ. ನಿತ್ಯದ ಜಂಜಡದ ಬದುಕಿನಿಂದ ಬೇಸತ್ತವರಿಗೆ ಇಂತಹ ತಾಣಗಳು ಸ್ವರ್ಗ ಸಮಾನ. ಆದರೆ ಈ ದಿನಗಳಲ್ಲಿ ಚಾರಣಕ್ಕಾಗಿ ಬರುವವರ ಸಂಖ್ಯೆ ವಿಪರೀತ ಹೆಚ್ಚುತ್ತಿದೆ. ಅಂತೇಯೇ ಪ್ರದೇಶದ ನೈರ್ಮಲ್ಯ ಕಡಿಮೆಯಾಗುತ್ತಿದೆ. ಆಗಮಿಸುವವರು ಪ್ಲಾಸ್ಟಿಕ್ ಲಕೋಟೆ ಆಹಾರದ ಅವಶಿಷ್ಟಗಳು ಬಾಟಲಿಗಳನ್ನು ಈ ತಾಣವನ್ನು ಮಲಿನಗೊಳಿಸುವುದು; ಮಾತ್ರವಲ್ಲ ಇಲ್ಲಿನ ಮೃಗ ಪಕ್ಷಿಗಳಿಗೂ ಹಾನಿಕರವಾಗಿ ಪರಿಣಮಿಸುವುದು.

ಇಂತಹ ತಾಣಗಳನ್ನು ಸ್ವಚ್ಛ ಸುಂದರವಾಗಿ ಉಳಿಸಬೇಕಾದದ್ದು ನಮ್ಮೆಲ್ಲರ ಕರ್ತವ್ಯ. ಮಾಲಿನ್ಯಗಳನ್ನು ನಿಕ್ಷೇಪಿಸುವ ತಾಣಗಳಲ್ಲಿ ಮಾತ್ರ ನಿಕ್ಷೇಪಿಸುವುದು. ಸಾಧ್ಯವಾದಷ್ಟು ಪ್ರಕೃತಿ ಸ್ನೇಹಿ ವಸ್ತುಗಳನ್ನು ಬಳಸುವುದು... ಇತ್ಯಾದಿ ಚಟುವಟಿಕೆಗಳಿಂದ ಪ್ರವಾಸಿ ತಾಣವನ್ನು ಸುಂದರವಾಗಿರಿಸೋಣ.

ಇತೀ ತಮ್ಮ ವಿಶ್ವಾಸಿಗಳು,

ರಾಣಿಪುರ ಸಂರಕ್ಷಕ ಸಮಿತಿ
ರಾಣಿಪುರ

- **ಕಿರುಲೇಖನ ಬರೆಯುವುದು**

ಪ್ರವಾಸದಿಂದ ದೊರಕುವ ಪ್ರಯೋಜನಗಳೇನು? ಎಂಬ ಪ್ರಶ್ನೆಯನ್ನು ಮಕ್ಕಳ ಮುಂದೆ ಇಡುವುದು. ಅವರು ಹೇಳುವ ವಿಚಾರಗಳನ್ನು ಪಟ್ಟಿಮಾಡುವುದು. ಮಕ್ಕಳನ್ನು ಗುಂಪು ಮಾಡುವುದು. ಸೂಕ್ತವಾದ ವಾಕ್ಯಗಳನ್ನು ಬಳಸಿ ಕಿರು ಲೇಖನವನ್ನು ಬರೆಯುವಂತೆ ಗುಂಪಿಗೆ ಸೂಚಿಸುವುದು. ಪ್ರತಿಯೊಂದು ಗುಂಪಿನಿಂದ ಒಬ್ಬರಂತೆ ಮಂಡಿಸಲಿ ಎಲ್ಲವನ್ನು ಕ್ರೋಡೀಕರಿಸಿ ಅಗತ್ಯದ ತಿದ್ದುಪಡಿಗಳೊಂದಿಗೆ ಅಧ್ಯಾಪಕರ ಸಹಾಯದಿಂದ ಮಕ್ಕಳು ಬರೆಯಲಿ.

## ಪ್ರವಾಸದಿಂದ ದೊರಕುವ ಪ್ರಯೋಜನಗಳು

ಪ್ರವಾಸವನ್ನು ಮೆಚ್ಚದವರು ಯಾರು ಇಲ್ಲ. ಪ್ರವಾಸವು ನಿತ್ಯದ ಬದುಕಿನ ಬೇಸರಿಕೆಯನ್ನು ಕಳೆದು ಹೊಸ ಚೈತನ್ಯವನ್ನು ತುಂಬುತ್ತದೆ. ಪ್ರವಾಸಿ ಕೇಂದ್ರಗಳಲ್ಲಿ ಮನಸ್ಸಿಗೆ ಮುದ ನೀಡುವ ಹಲವಾರು ತಾಣಗಳಿವೆ. ಎಲ್ಲವೂ ಎಲ್ಲರಿಗೂ ಇಷ್ಟವಾಗಬೇಕೆಂದಿಲ್ಲ. ಕಾಂಕ್ರೀಟ್ ಕಟ್ಟಡಗಳ ಮಧ್ಯೆ ವಾಸಿಸುವವರಿಗೆ ಎತ್ತರವಾದ ಗುಡ್ಡ ಬೆಟ್ಟಗಳನ್ನು ಏರುವುದು. ಆಸಕ್ತಿದಾಯಕವಾದರೆ ಇನ್ನು ಕೆಲವರಿಗೆ ಚಾರಿತ್ರಿಕ ತಾಣಗಳ ಸಂದರ್ಶನ ಪ್ರಿಯವಾಗುತ್ತದೆ. ಮತ್ತೆ ಕೆಲವರಿಗೆ ತೀರ್ಥಕ್ಷೇತ್ರಗಳ ದರ್ಶನವು ಪ್ರಧಾನವಾಗಿರುತ್ತದೆ. ಗುಡ್ಡಬೆಟ್ಟದ ತಪ್ಪಲುಗಳಲ್ಲಿರುವವರು ಸಮುದ್ರತಡಿಗೆ ಪ್ರವಾಸ ಹೋಗುತ್ತಾರೆ. ಜಲಪ್ರಯಾಣ ಮಾಡುವುದು. ಇವರಿಗೆ ಅತ್ಯಂತ ಪ್ರಿಯವಾಗಿರುತ್ತದೆ. ಇಂದು ನಮ್ಮ ಊರಿನಲ್ಲೂ ದೇಶವಿದೇಶಗಳಿಗೆ ಪ್ರವಾಸ ಕೈಗೊಳ್ಳಲು ಪ್ರವಾಸ ನಿರ್ವಹಣಾ ತಂಡಗಳು ಕಾರ್ಯವೆಸಗುತ್ತಿದೆ. ಇದರಿಂದ ದೂರದ ಊರುಗಳಿಗೆ ಪ್ರಯಾಣವು ಸುಗಮವಾಗುತ್ತದೆ. ದೂರದ ಪ್ರದೇಶಗಳಿಗೆ ಒಂಟಿಯಾಗಿ ಪ್ರಯಾಣಿಸಲು ಭಯವಿರುವವರಿಗೆ ಈ ರೀತಿಯಲ್ಲಿ ಪ್ರವಾಸ ನಡೆಸಬಹುದು.

ಬೇರೆ ಊರಿನ ಭೌಗೋಳಿಕ ಸ್ಥಿತಿ ಜನರ ನಡೆ ನುಡಿ, ಆಚಾರ ವಿಚಾರ, ವೇಷಭೂಷಣಗಳನ್ನು ತಿಳಿಯಲು ಪ್ರವಾಸ ಸಹಕಾರಿಯಾಗಿದೆ. ತಂಡದ ಪ್ರವಾಸದ ಆರಂಭದಲ್ಲಿ ತೀರಾ ಅಪರಿಚಿತರಾಗಿದ್ದವರು ಕೊನೆಯಲ್ಲಿ ಆತ್ಮೀಯ ಮಿತ್ರರಾಗುತ್ತಾರೆ. ಅಂದರೆ ಪರಸ್ಪರ ಪ್ರೀತಿ ಸಹಕಾರ ಗುಣಗಳು ಬೆಳೆಯುತ್ತವೆ. ಗುಡ್ಡ ಕಾಡುಗಳಲ್ಲಿ ಪ್ರವಾಸ ನಡೆಸುವ ಚಾರಣಿಗರಿಗೆ ವಿವಿಧ ಪಕ್ಷಿ ಮೃಗಾದಿಗಳನ್ನು ಸಮೀಪದಿಂದ ಕಾಣುವ ರೋಮಾಂಚಕರಿ ಅನುಭವ ಲಭಿಸುತ್ತದೆ. ಚಾರಿತ್ರಿಕ ಸ್ಥಳಗಳ ಸಂದರ್ಶನವು ಪ್ರವಾಸಿಗರಲ್ಲಿ ಕುತೂಹಲ ಮೂಡಿಸುತ್ತದೆ. ಮಾತ್ರವಲ್ಲ ಇಂತಹ ಪ್ರದೇಶಗಳ ಕುರಿತು ಹೆಚ್ಚಿನ ಅರಿವನ್ನು ಪಡೆಯಲು ಪ್ರೇರೇಪಿಸುತ್ತದೆ. ತಮ್ಮ ಜ್ಞಾನದ ಪ್ರಪಂಚ ವಿಸ್ತಾರವಾಗುತ್ತದೆ. ತಮ್ಮ ಪ್ರವಾಸದ ವಿವರಣೆಯನ್ನು ಶಬ್ದ ಚಿತ್ರಗಳೊಂದಿಗೆ ದಾಖಲಿಸಿ ನವ ಮಾಧ್ಯಮಗಳಿಗೆ ನೀಡುವವರು ಇದ್ದಾರೆ. ಇದನ್ನೇ ಉದ್ಯೋಗವಾಗಿ ಮಾಡಿಕೊಂಡವರನ್ನೂ ನಾವಿಂದು ಕಾಣುತ್ತೇವೆ.

ಉತ್ತರ ಭಾರತದ ಪ್ರವಾಸವು ಮನೋರಂಜನೆಯೊಂದಿಗೆ ರೋಮಾಂಚಕಾರಿ ಅನುಭವವನ್ನು ನೀಡುತ್ತದೆ. ಕೆಲವೊಮ್ಮೆ ಪ್ರವಾಸದ ಮಧ್ಯೆ ಘಟಿಸುವ ಅಹಿತಕರ ಅನುಭವಗಳು ನಮಗೆ ಮುಂಜಾಗ್ರತೆ ಕೈಗೊಳ್ಳಬೇಕಾದ ಪಾಠವನ್ನು ಕಲಿಸುತ್ತವೆ. ಪ್ರವಾಸವು ಮನವನ್ನು ಮುದಗೊಳಿಸುವುದರೊಂದಿಗೆ ಹೊಸ ಹುರುಪನ್ನು ನೀಡುತ್ತದೆ. ಅನುಭವವನ್ನು ವಿಸ್ತರಿಸುತ್ತದೆ.

- **ಪತ್ರ ಬರೆಯುವುದು**

ಮಕ್ಕಳಲ್ಲಿ ಅವರು ನೋಡಿದ ಯಾವುದಾದರೂ ಪ್ರೇಕ್ಷಣೀಯ ಸ್ಥಳದ ಕುರಿತು ವೈಯಕ್ತಿಕವಾಗಿ ಬರೆದು ಮಂಡಿಸಲು ಸೂಚಿಸುವುದು. ಬಳಿಕ ಈ ವಿಚಾರವನ್ನು ಪತ್ರದ ಮೂಲಕ ಗೆಳೆಯ ಅಥವಾ ಗೆಳತಿಗೆ ತಿಳಿಸುವುದು ಹೇಗೆ? ಎಂಬುದನ್ನು ವಿಶ್ಲೇಷಿಸುವುದು. ವೈಯಕ್ತಿಕ ಪತ್ರದ ಸ್ವರೂಪವನ್ನು ತಿಳಿಸುವುದು.

## ಪತ್ರ ಹೀಗೂ ಇರಬಹುದಲ್ಲವೇ?

ಕಾಸರಗೋಡು

25.7.2024

ಪ್ರೀತಿಯ ಗೆಳತಿ ಸ್ವಪ್ನನಿಗೆ,

ನಿನ್ನ ಗೆಳತಿ ರಜತ ಮಾಡುವ ವಂದನೆಗಳು. ನಾನು ಕ್ಷೇಮ ನೀನು ಕ್ಷೇಮವೆಂದು ಭಾವಿಸಿದ್ದೇನೆ. ನಿನ್ನ ಮನೆಯಲ್ಲಿ ಎಲ್ಲರೂ ಕ್ಷೇಮವಲ್ಲವೇ? ಮತ್ತೇನು ವಿಶೇಷಗಳು?

ನಾನು ಕಳೆದ ರಜೆಯಲ್ಲಿ ಊಟಿಗೆ ಪ್ರವಾಸ ಹೋಗಿದ್ದೆ. ಅದರ ವಿವರಗಳನ್ನು ನಿನ್ನೊಂದಿಗೆ ಹಂಚಿಕೊಳ್ಳಬೇಕೆಂದು ತುಂಬಾ ಆಸೆ ಇದೆ. ರಜೆಯಲ್ಲಿ ನಿನ್ನನ್ನು ಕಾಣಲು ಸಾಧ್ಯವಾಗಲಿಲ್ಲ. ಹಾಗಾಗಿ ಈ ಪತ್ರವನ್ನು ಬರೆಯುತ್ತಿದ್ದೇನೆ.

ನಾವು ಕಾಸರಗೋಡಿನಿಂದ ಬೆಳಗ್ಗೆ ಐದು ಗಂಟೆಯ ರೈಲುಗಾಡಿಯನ್ನು ಏರಿದೆವು. ನಮ್ಮ ಮನೆಯವರಲ್ಲದೆ ನೆರೆಮನೆಯವರು ನಮ್ಮ ಜೊತೆಗಿದ್ದರು. 10 ಗಂಟೆಯ ಸುಮಾರಿಗೆ ಕೋಝಿಕೋಡಿನಲ್ಲಿ ಇಳಿದೆವು. ಕಾಫಿ ತಿಂಡಿಯ ಬಳಿಕ ಅಲ್ಲಿಂದ ಬೇರೊಂದು ವಾಹನದಲ್ಲಿ ಹೊರಟೆವು. ಮಲಪುರಂ ಜಿಲ್ಲೆಯ ಮೂಲಕ ಸಾಗಿ ಊಟಿಗೆ ತಲುಪಬಹುದು. ಈ ಮಧ್ಯೆ ನೀಲಂಬೂರ್ ಎಂಬಲ್ಲಿನ ಪ್ರಸಿದ್ಧವಾದ ತೇಗಿನ ಮರದ ತೋಟವನ್ನು ನೋಡಿದೆವು. ಬಳಿಕ ನಮ್ಮ ಪ್ರಯಾಣ ಮುಂದುವರೆಯಿತು. ಹಲವಾರು ಮೂಲಕ ಗಾಡಿ ಸಾಗುತ್ತಿರುವಾಗ ಹೃದಯವೇ ಬಾಯಿಗೆ ಬಂದಂತೆ ಆಯಿತು. ಆದರೂ ಸುತ್ತಲಿನ ಪ್ರಕೃತಿಯ ರಮಣೀಯ ದೃಶ್ಯ ಮರೆಯುವಂತಹದ್ದಲ್ಲ. ಮುಂದಕ್ಕೆ ಸಾಗಿದಂತೆಲ್ಲ ರಸ್ತೆ ಕೆಲವು ವಿಶಾಲವಾದ ಚಹಾತೋಟಗಳು ಗೋಚರಿಸಿದೆವು. ಕುರಿ ಮಂದೆಗಳ ಗುಂಪಿನಂತೆ ಎಷ್ಟು ಚಂದವಾಗಿ ಹಸಿರು ಬಣ್ಣದ ತೋಟಗಳು ಗೋಚರಿಸುತ್ತವೆ ಗೊತ್ತಾ? ಅಲ್ಲಿಂದ ಮುಂದೆ ಸಾಗಿದಾಗ ಹುಲ್ಲ ಮೈದಾನದಂತಿರುವ ಒಂದು ಸಣ್ಣ ಬೆಟ್ಟದಂತಹ ಪ್ರದೇಶವನ್ನು ಕಂಡೆವು. ಅಲ್ಲಿ ನಮ್ಮಂತೆ ಬಂದಂತಹ ಹಲವು ಪ್ರವಾಸಿಗರ ವಾಹನಗಳು ನಿಂತಿದ್ದವು. ನಾವು ಅಲ್ಲಿ ಹಿಡಿದು ಆ ಹುಲ್ಲು ಪ್ರದೇಶದಲ್ಲಿ ನಡೆದಾಡಿದೆವು. ಇದು ಹಲವಾರು ಸಿನೆಮಾಗಳ ಶೂಟಿಂಗ್ ನಡೆದ ಪ್ರದೇಶವೆಂದು ಯಾರೋ ಹೇಳಿದುದು ಕೇಳಿಸಿತು. ಮಧ್ಯಾಹ್ನದ ಬಿಸಿಲಿದ್ದರೂ ಹವೆ ತುಂಬಾ ತಂಪಾಗಿತ್ತು.

ನಮ್ಮ ಪ್ರಯಾಣ ಮುಂದುವರಿದಂತೆ ತಂಪು ಹೆಚ್ಚಾಗುತ್ತಾ ಬಂತು. ದೂರದಲ್ಲಿ ಹಿಮ ಆವರಿಸಿದ ಬೆಟ್ಟವೂ ತಪ್ಪಲುಗಳಲ್ಲಿ ಕಾಲಿಫ್ಲವರ್, ಕ್ಯಾರೆಟ್ ಮುಂತಾದ ತರಕಾರಿ ತೋಟಗಳನ್ನೂ ಕಂಡೆವು. ಸ್ವಲ್ಪ ಹೊತ್ತಿನಲ್ಲೇ ನಾವು ಊಟಿಯನ್ನು ತಲುಪಿದೆವು. ಎಂತಹ ಸುಂದರ ನೋಟ? ಆಕಾಶದಿಂದ ಬಿಳಿ ಮುಗಿಲು ಭೂಮಿಯನ್ನು ಚುಂಬಿಸುತ್ತಿದೆಯೋ ಎಂಬಂತೆ ಮಂಜು ಆವರಿಸಲು ಪ್ರಾರಂಭಿಸುತ್ತಿತ್ತು. ಬೆಟ್ಟದ ತಪ್ಪಲಿನಲ್ಲಿ ಪೆಟ್ಟಿಗೆಗಳನ್ನು ಜೋಡಿಸಿಟ್ಟಂತೆ ಕಟ್ಟಡಗಳು ಗೋಚರಿಸುತ್ತಿದ್ದುವು. ಅಂದು ರಾತ್ರಿ ಅಲ್ಲಿ ಒಂದು ವಸತಿಗೃಹದಲ್ಲಿ ತಂಗಿದೆವು.

ಮಾರನೇ ದಿನ ಬೆಳಗ್ಗೆ ರೋಜ್ ಗಾರ್ಡನ್ ಬೊಟಾನಿಕಲ್ ಗಾರ್ಡನ್ ಸಂದರ್ಶಿಸಿದೆವು. ರೋಸ್ ಗಾರ್ಡನಲ್ಲಿ ಅದೆಷ್ಟು ವಿಧದ ಬಣ್ಣದ ಗಾತ್ರದ ಗುಲಾಬಿ ಹೂಗಳು! ಅಬ್ಬಬ್ಬಾ ನನಗೆ ಅಲ್ಲಿಂದ ಹೊರಡಲೇ ಮನಸು ಬರಲಿಲ್ಲ. ಅಲ್ಲಿಂದ ಹೊರಟು ಬಟಾನಿಕಲ್ ಗಾರ್ಡನ್‌ಗೆ ಹೋದೆವು. ಅಲ್ಲಿ ದೊಡ್ಡ ಗಾತ್ರದ ಹಲವಾರು ಮರಗಳಿದ್ದುವು. ಎಲ್ಲ ಮರಗಳಿಗೂ ಹೆಸರುಗಳಿದ್ದು, ಅವುಗಳ ಜಾತಿ ವರ್ಗವನ್ನು ಸೂಚಿಸಿದ ಹೆಸರುಗಳು ಇದ್ದ ಬೋರ್ಡನ್ನು ತೂಗಿ ಹಾಕಿದ್ದರು. ಸಸ್ಯಶಾಸ್ತ್ರ ಕಲಿಯುವ ನನ್ನ ಅಕ್ಕ ಎಲ್ಲವನ್ನು ಆಸಕ್ತಿಯಿಂದ ವೀಕ್ಷಿಸುತ್ತಿದ್ದಳು. ನನಗೆ ಅಷ್ಟು ಇಷ್ಟವಾಗಲಿಲ್ಲ.

ಅಲ್ಲಿಂದ ಹೊರಟು ಮಧ್ಯಾಹ್ನದ ಊಟ ಮುಗಿಸಿ ದೋಣಿ ವಿಹಾರಕ್ಕಾಗಿ ಹೋದೆವು. ಈವರೆಗೆ ನೀರಿನಲ್ಲಿ ಪ್ರಯಾಣಿಸದ ನನಗೆ ಅದೊಂದು ರೋಮಾಂಚಕಾರಿ ಅನುಭವವಾಯಿತು. ಆ ಸಂಜೆಯೇ ನಮಗೆ ಅಲ್ಲಿಂದ ಹೊರಡಬೇಕಿತ್ತು. ದೋಣಿ ವಿಹಾರದ ಬಳಿಕ ನಾವು ಅಲ್ಲಿಂದ ಹಿಂದಿರುಗಿ ಹೊರಟೆವು. ಹಿಂತಿರುಗುವಾಗ ಸಂಜೆಯ ಬಿಸಿಲಿಗೆ ಹಿಂದಿನ ದಿನ ಕಂಡ ಪ್ರಕೃತಿಯ ದೃಶ್ಯವು ಬೇರೆಯೇ ರೀತಿಯದಾಗಿತ್ತು. ಓ! ಅದೆಷ್ಟು ಮನೋಹರ ?ನೋಡಿ ಆನಂದಿಸಬೇಕು.

ನಮ್ಮ ಪ್ರಯಾಣವನ್ನು ಮುಂದುವರಿಸಿದೆವು. ರಾತ್ರಿ 9:00ಗೆ ಕೋಝಿಕೋಡ್ ತಲುಪಿದೆವು. ಊಟದ ಬಳಿಕ ರಾತ್ರಿಯ ರೈಲುಗಾಡಿಯನ್ನೇರಿದೆವು. ಬೆಳಗ್ಗೆ ನಾಲ್ಕು ಗಂಟೆಗೆ ಕಾಸರಗೋಡು ತಲುಪಿದೆವು. ನಾನಾದರೋ ಮನೆಗೆ ತಲುಪಿ ಊಟಿಯ ದೃಶ್ಯಗಳನ್ನು ಮನಸ್ಸಿನಲ್ಲಿ ನೆನಪಿಸಿಕೊಳ್ಳುತ ನಿದ್ದೆ ಮಾಡಿದೆನು.

ಊಟಿಯ ಪ್ರವಾಸವನ್ನು ನಾನು ಎಂದಿಗೂ ಮರೆಯಲಾರೆ, ನೀನು ಊಟಿಗೆ ಹೋಗಿದ್ದೀಯಾ? ಇಲ್ಲವಾದರೆ ಖಂಡಿತ ಹೋಗಬೇಕು. ನಿನ್ನ ಅಪ್ಪ ಅಮ್ಮ ಅಣ್ಣ ಅಕ್ಕ ಎಲ್ಲರಿಗೂ ನನ್ನ ವಂದನೆಗಳನ್ನು ತಿಳಿಸುವೆ ಅಲ್ಲವೇ? ಬೇರೇನೂ ವಿಶೇಷವಿಲ್ಲ. ನಿನ್ನ ಪತ್ರಕ್ಕಾಗಿ ಕಾಯುತ್ತಿರುವ.

ನಿನ್ನ ಪ್ರೀತಿಯ ಗೆಳತಿ

ರಜತ

ವಿಳಾಸ:-

ಸಪ್ನ ಕೆ ಎಸ್<br>
ಸ್ನೇಹನಿಲಯ, ತೊಕ್ಕೊಟ್ಟು<br>
ಅಂಚೆ ತೊಕ್ಕೊಟ್ಟು<br>
ದಕ್ಷಿಣ ಕನ್ನಡ ಜಿಲ್ಲೆ.<br>
570432.

- **ಲೇಖನ ಚಿಹ್ನೆಗಳನ್ನು ಬಳಸುವುದು**

ವಿದ್ಯಾರ್ಥಿಗಳಿಗೆ ಪರಿಚಿತವಾದ ಲೇಖನ ಚಿಹ್ನೆಗಳನ್ನು ಪಟ್ಟಿ ಮಾಡಲಿ. ಹಾಗೂ ಅವುಗಳ ವ್ಯಕ್ತಪಡಿಸುವ ಭಾವಗಳನ್ನು ಪರಿಚಯಿಸಿ ಕೊಡುವುದು. ಮಕ್ಕಳಲ್ಲಿ ಈ ಭಾವವ್ಯಕ್ತಪಡಿಸುವ ವಾಕ್ಯ ಯಾ ಪದಗಳನ್ನು ಚಿಹ್ನೆಯೊಂದಿಗೆ ಬರೆಯಲು ಸೂಚಿಸುವುದು. ನಂತರ ಪಾಠಪುಸ್ತಕದಲ್ಲಿ ಕೊಟ್ಟ ವಾಕ್ಯಗಳಿಗೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಅಳವಡಿಸಿ ಬರೆಯಲು ಸೂಚಿಸುವುದು. ಅಧ್ಯಾಪಕರು ಅಗತ್ಯವಿರುವ ಮಾರ್ಗದರ್ಶನ ನೀಡುವುದು.

### ಲೇಖನ ಚಿಹ್ನೆ ಬಳಸಿ ಹೀಗೆ ಬರೆಯಬಹುದಲ್ಲವೇ?

'ದೇಶ ಸುತ್ತು ಕೋಶ ಓದು' ಎನ್ನುವ ಗಾದೆ ಮಾತನ್ನು ಕೇಳಿದ್ದೀರಲ್ಲವೇ? ಪ್ರವಾಸದ ಅನುಭವಗಳನ್ನು ಹಂಚಿಕೊಳ್ಳುವುದು ಒಂದು ಕಲೆ. ಪ್ರವಾಸದಿಂದ ಜ್ಞಾನ, ಮನೋರಂಜನೆ, ಸಂತೋಷ ಲಭಿಸುತ್ತವೆ.

- **ಸಂಯುಕ್ತವಾಕ್ಯ ರಚಿಸುವುದು**

ಪಠ್ಯದಲ್ಲಿ ಕೊಟ್ಟ ಮಾದರಿಯನ್ನು ಮಕ್ಕಳು ಓದಲಿ. ಬಳಿಕ ಪಾಠದಲ್ಲಿ ಬಂದಿರುವ ಸರಳ ವಾಕ್ಯಗಳನ್ನು ಗುರುತಿಸಲಿ. ಈ ವಾಕ್ಯಗಳನ್ನು ಸಂಯುಕ್ತ ವಾಕ್ಯಗಳಾಗಿ ಬರೆಯಲು ಹೇಳುವುದು. ಅದನ್ನು ಮಂಡಿಸಲಿ. ತಪ್ಪುಗಳಿದ್ದರೆ ಅಧ್ಯಾಪಕರು ಮಾರ್ಗದರ್ಶನ ನೀಡುವುದು.

- **ಸಂವಾದಿ ಪದಗಳ ಪಟ್ಟಿ ರಚಿಸುವುದು**

ಕನ್ನಡ ಪದಗಳ ಬಳಕೆಯು ಕನ್ನಡ ಭಾಷೆಯ ಬೆಳವಣಿಗೆಗೆ ಸಹಾಯಕವಾಗಿದೆ. ಕನ್ನಡ ಕಲಿಯುವ ಮಕ್ಕಳು ಅನ್ಯದೇಶಿಯ ಪದಕ್ಕೆ ಸಂವಾದಿಯಾದ ಪದಗಳನ್ನು ತಿಳಿದಿರಬೇಕು. ಅದಕ್ಕಾಗಿ ಮಕ್ಕಳಲ್ಲಿ ಅನ್ಯದೇಶಿಯ ಪದಗಳನ್ನು ಗುರುತಿಸಲು ಸೂಚಿಸುವುದು. ಮಕ್ಕಳು ಹೇಳಿದ ಪದಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಸಂವಾದಿ ಪದಗಳನ್ನು ಮಕ್ಕಳೇ ಯೋಚಿಸಿ ಹೇಳಲಿ. ತಪ್ಪಿದಲ್ಲಿ ಅಧ್ಯಾಪಕರು ಸರಿಪಡಿಸಿ ಕೊಡುವುದು.

ಟೈಲ್ಸ್ - ಹಂಚುಗಳು

ಬಲ್ಬ್ - ವಿದ್ಯುದ್ದೀಪ

ಇನ್ಸ್‌ಪೆಕ್ಟರ್- ನಿರೀಕ್ಷಕರು

ಹಿಲ್ ಸ್ಟೇಷನ್ - ಗುಡ್ಡತಾಣ

ಬಜಾರು - ಪೇಟೆ

ಕಾಂಕ್ರೀಟ್- ಗಾರೆ

ಉಲ್ಲನ್ - ಉಣ್ಣೆ

ರೋಡು - ರಸ್ತೆ

ಘಾಟ್ - ಗಟ್ಟ

…………..

- **ಸ್ಥಳ ಪರಿಚಯ ಸಂಚಿಕೆ ತಯಾರಿಸುವುದು**

ಮಕ್ಕಳಿಗೆ ಪರಿಚಿತವಿರುವ ಪ್ರಸಿದ್ಧ ಸ್ಥಳಗಳನ್ನು ಗುರುತಿಸಿ ಸ್ಥಳದ ಪರಿಚಯ ಬರೆಯಲಿ. ಸ್ಥಳದ ವಿವರಣೆ ಆ ಸ್ಥಳಕ್ಕೆ ಪ್ರಧಾನ ಪಟ್ಟಣದಿಂದ ಇರುವ ದೂರ ತಲುಪಬಹುದಾದ ರೀತಿ ವಿವರಿಸಲಿ. ಮಕ್ಕಳು ಬರೆದ ಸ್ಥಳ ಪರಿಚಯಗಳನ್ನು ಒಟ್ಟುಗೂಡಿಸಿ ಸಂಚಿಕೆ ತಯಾರಿಸುವುದು. ಸಂಚಿಕೆಗೆ ಯೋಗ್ಯವಾದ ಶೀರ್ಷಿಕೆ ನೀಡುವುದು.

## ಸ್ಥಳ ಪರಿಚಯ

ಕಾಸರಗೋಡು ಜಿಲ್ಲೆಯ ಮಂಜೇಶ್ವರ ತಾಲೂಕಿನ ಮಂಜೇಶ್ವರ ರಾಷ್ಟ್ರಕವಿ ಗೋವಿಂದ ಪೈ ಅವರ ಜನ್ಮಭೂಮಿ. ಇಲ್ಲಿ ಗೋವಿಂದಪ್ಪ ಅವರು ಬಾಳಿ ಬದುಕಿದ ಮನೆ ಇದೆ. ಇದು ಕೇರಳ ಕರ್ನಾಟಕದ ಬರಹಗಾರರ ಪ್ರೀತಿಯ ತಾಣವಾದ ಗಿಳಿವಿಂಡು ಎಂಬ ಹೆಸರಿನಿಂದ ಕರೆಯಲ್ಪಡುತ್ತಿದೆ. ಪಶ್ಚಿಮ ಭಾಗದಲ್ಲಿ ಸಮುದ್ರ ಸಮೀಪದಲ್ಲೇ ಇರುವ ಈಗ ಅರ್ಜಿ ಇವುಗಳೆಲ್ಲವೂ ಪೈಯವರ ಬರಹಗಳಲ್ಲಿ ಪ್ರಭಾವ ಬೀರಿವೆ.

ಇಂದು ಗಿಳಿವಿಂಡುವಿನಲ್ಲಿ ವಿಶಾಲವಾದ ಪುಸ್ತಕಾಲಯವಿದೆ. ಮತ್ತು ಯಕ್ಷಗಾನದ ವೇಷಭೂಷಣ ಭೂಷಣಗಳು, ಹಿಮ್ಮೇಳಗಳಲ್ಲಿ ಬಳಸುವ ಸಂಗೀತ ಉಪಕರಣಗಳು ಇರುವ ಒಂದು ಉತ್ತಮ ವಸ್ತುಸಂಗ್ರಹಾಲಯವಿದೆ. ಉತ್ತಮ ವಾತಾಯನ ವ್ಯವಸ್ಥೆ ಇರುವ ಹಳೆಯ ಮಾದರಿಯ ಮನೆಯು ನೋಡುಗರ ಕಣ್ಣಿಗೆ ಕುತೂಹಲ ಮೂಡಿಸುತ್ತದೆ. ಇಲ್ಲೇ ಗೋವಿಂದ ಪೈ ಅವರು ಬಳಸಿದ ಇಂದು ಎಲ್ಲಿಯೂ ಕಂಡುಬರದಂತಹ ಪೀಠೋಪಕರಣಗಳಿವೆ. ಹಾಗೆಯೇ ಅಂದು ಅಡುಗೆ ಮನೆಯಲ್ಲಿ ಬಳಸಿಕೊಂಡಿದ್ದ ಪಾತ್ರೆ ಹಾಗೂ ಇನ್ನಿತರ ಪರಿಕರಗಳ ಸಂಗ್ರಹವು ಇಲ್ಲಿದೆ.

ಕಾಸರಗೋಡಿನಿಂದ ಉತ್ತರಕ್ಕೆ 27ಕಿ.ಮೀ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾಗಿದಾಗ ಹೊಸಂಗಡಿ ತಲುಪಬಹುದು. ಅಲ್ಲಿಂದ ಪಶ್ಚಿಮ ಭಾಗದ ರಸ್ತೆಯಲ್ಲಿ ರೈಲ್ವೆ ಮಾರ್ಗದಾಟಿ ನಾಲ್ಕು ಕಿಲೋಮೀಟರ್ ಸಾಗಿದಾಗ ರಸ್ತೆಯ ಬಲಬದಿಯಲ್ಲಿ ನಿಮ್ಮನ್ನು ಗಿಳಿವಿಂಡು ಸ್ವಾಗತಿಸುತ್ತದೆ.

- **ಮಾಹಿತಿ ತಂತ್ರಜ್ಞಾನ ಬಳಸುವುದು**

ಪಾಠದಲ್ಲಿ ಬಂದಂತಹ ಅಥವಾ ನಾವು ಸಂದರ್ಶನ ಮಾಡದ ಪ್ರವಾಸೀ ತಾಣಗಳನ್ನು ಇಂದು ನವ ಮಾಧ್ಯಮಗಳ ಮೂಲಕ ವೀಕ್ಷಿಸಲು ಸಾಧ್ಯವಿದೆ. ಮಕ್ಕಳಿಗೆ ಮಾಹಿತಿ ತಂತ್ರಜ್ಞಾನದ ಸಹಾಯದಿಂದ ವಿವಿಧ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಲು ಅನುಕೂಲ ಮಾಡಿಕೊಡುವುದು.

www.dimension.org.in

* * *

# 2. ಸಾಮರಸ್ಯದ ಬೆಳಕು

## ಮುನ್ನುಡಿ

ಇಡೀ ಜಗತ್ತು ಇಂದು ತಲ್ಲಣಿಸುತ್ತಿದೆ ಧರ್ಮದ , ಜಾತಿಯ , ಭಾಷೆಯ, ದೇಶಗಳ, ಜನಾಂಗಗಳ, ಮನುಷ್ಯರ ಬಣ್ಣದ, ಗಂಡು- ಹೆಣ್ಣಿನ ನಡುವಿನ ತಾರತಮ್ಯದ ಗೆರೆಗಳು ಮತ್ತು ನಿಸರ್ಗ ವಿರೋಧಿಯಾದ ಪೊಳ್ಳು ತತ್ವ ಇಂದಿನ ಬಹುಪಾಲು ಸಂಕಟಗಳಿಗೆ ಕಾರಣವಾಗಿವೆ. ಈ ಎಲ್ಲಾ ಸಂಕಷ್ಟಗಳಿಂದ ದೂರವಿರಬೇಕಾದರೆ ಸಮಾಜದಲ್ಲಿ ಸಾಮರಸ್ಯದ ಬೆಳಕು ನೆಲೆ ನಿಲ್ಲಬೇಕು. ಸಮಾನತೆ, ಭ್ರಾತೃತ್ವದಿಂದ ನವ ಸಮಾಜದ ಸೃಷ್ಟಿ ಸಾಧ್ಯ. ಅಸಮಾನತೆ ತೊಡೆದು ಹಾಕಿ ಸಾಮರಸ್ಯ ಬಿತ್ತುವ ನಿಟ್ಟಿನಲ್ಲಿ ನಾವೆಲ್ಲರೂ ಸಣ್ಣಪುಟ್ಟ ಪ್ರಯತ್ನಗಳನ್ನು ನಡೆಸಬೇಕು. ಸಾಮರಸ್ಯದ ಬದುಕು ಎಂದರೆ ವ್ಯಕ್ತಿಯು ತನ್ನ ಸುತ್ತಲೂ ಇರುವ ಸಮಾಜದಲ್ಲಿ ಸಹಜವಾಗಿ ಹೊಂದಿಕೊಳ್ಳುವ ಸ್ಥಿತಿ. ಶಾಂತಿಯುತ ಮನಸ್ಸು ಸಹಾನುಭೂತಿ ಮತ್ತು ಸಹಾಯದ ಬೆಂಬಲವು ಸಮಾಜದಲ್ಲಿ ಸಾಮರಸ್ಯವನ್ನುಂಟು ಮಾಡುತ್ತವೆ.

ಸಾಮಾಜಿಕ ಸಾಮರಸ್ಯವು ಸಮಾಜದೊಳಗಿನ ವ್ಯಕ್ತಿಗಳು ಮತ್ತು ಸಮುದಾಯಗಳ ಶಾಂತಿಯುತ ಹಾಗೂ ಗೌರವಯುತ ಸಹಬಾಳ್ವೆಯನ್ನು ಸೂಚಿಸುತ್ತದೆ. ಯಾವುದೇ ಸಮಾಜವು ಒಟ್ಟಾರೆಯಾಗಿ ಅಭಿವೃದ್ಧಿ ಹೊಂದಲು ವಿವಿಧ ಗುಂಪುಗಳ ನಡುವಿನ ಸಾಮಾಜಿಕ ಸಂಬಂಧಗಳು ಪ್ರಮುಖ ಪಾತ್ರ ವಹಿಸುತ್ತವೆ. 'ಸುತ್ತಿಗೆಗಳು ಕಬ್ಬಿಣವನ್ನು ರೂಪಿಸುವಂತೆ, ಆಲೋಚನೆಗಳು ವ್ಯಕ್ತಿಯ ಮನಸ್ಸನ್ನು ರೂಪಿಸುತ್ತವೆ'ಎಂಬ ಮಾತಿನಂತೆ ಉತ್ತಮ ಸಮಾಜದ ನಿರ್ಮಾಣಕ್ಕಾಗಿ ಪ್ರತಿಯೊಬ್ಬ ಮಗುವಿನಲ್ಲೂ ಮಹಾನ್ ಸಾಧಕರ ಉದಾತ್ತವಾದ ನೈತಿಕ ಚಿಂತನೆಗಳನ್ನು ಬಿತ್ತುವುದರ ಮೂಲಕ ಶ್ರೇಷ್ಠ ರಾಷ್ಟ್ರ ನಿರ್ಮಾಣ ಕಾರ್ಯ ಸಾಧ್ಯವೆನಿಸುವುದು.

ಘಟಕದ ಆರಂಭದಲ್ಲಿ ಪ್ರವೇಶ ಚಟುವಟಿಕೆಯಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳೆಯರ ಭಾವಚಿತ್ರಗಳನ್ನು ನೀಡಲಾಗಿದೆ. ಸಮಾಜದಲ್ಲಿ ತೃತೀಯ ಲಿಂಗಿಗಳನ್ನು ನೋಡುವ ದೃಷ್ಟಿಕೋನ ಬದಲಾಗಬೇಕು. ತಮ್ಮದಲ್ಲದ ತಪ್ಪಿಗೆ ತೃತೀಯ ಲಿಂಗಿಗಳು ಸಮಾಜದಲ್ಲಿ ನಿರಂತರ ಶೋಷಣೆ ದೌರ್ಜನ್ಯಕ್ಕೆ ಒಳಗಾಗುತ್ತಲೇ ಇರುವರು. ಅವರಿಗೂ ಎಲ್ಲರಂತೆ ಬದುಕುವ ಅವಕಾಶ ಕಲ್ಪಿಸುವುದು ಅಗತ್ಯ. ಸರಕಾರವು ಹೆಚ್ಚಿನ ಸೌಲಭ್ಯ ಕಲ್ಪಿಸುವ ಮೂಲಕ ಅವರನ್ನು ಮುಖ್ಯ ವಾಹಿನಿಗೆ ತರಬೇಕು. ಈ ನಿಟ್ಟಿನಲ್ಲಿ ಘಟಕದ ಮೊದಲ ಪಾಠವಾಗಿ ಮಾನವಿ ಬಂದೋಪಾಧ್ಯಾಯ ಅವರ ಆತ್ಮಕಥೆಯ ಭಾಗವಾದ 'ಗಂಡು ಜೀವ ಹೆಣ್ಣು ಭಾವ' ಎಂಬ ಪಾಠವನ್ನು ನೀಡಲಾಗಿದೆ.

ಘಟಕದ ಎರಡನೆಯ ಪಾಠವಾಗಿ ಇಂದು ನಮ್ಮ ಸುತ್ತಮುತ್ತ ನಿರಂತರವಾಗಿ ನಡೆಯುತ್ತಿರುವ ಅನ್ಯಾಯ, ಅನಾಚಾರ, ಶೋಷಣೆ, ದೌರ್ಜನ್ಯಗಳನ್ನು ಕವಿಯಾದವನು ಧೈರ್ಯವಾಗಿ, ಮುಕ್ತವಾಗಿ ತನ್ನ ಸಾಹಿತ್ಯದ ಮೂಲಕ ಜನರಿಗೆ ತೋರಿಸಿ ಕೊಡುವ ಮಹತ್ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂಬುದನ್ನು ಕವಿ ಕೆ ಎಸ್ ನಿಸಾರ್ ಅಹಮದ್ ಅವರ 'ಹಾಡು, ಕವಿಯೆ ಹಾಡು' ಎಂಬ ಕವನವು ಧ್ವನಿಸುತ್ತದೆ.

ಈ ಘಟಕದ ಕೊನೆಯಲ್ಲಿ ಧೈರ್ಯ ಸಾಧನೆಯಲ್ಲಿ ಸ್ತ್ರೀ ಯು ಪುರುಷನಷ್ಟೇ ಸಾಮರ್ಥ್ಯವುಳ್ಳವಳು ಎಂಬುದನ್ನು ತಿಳಿಸಲಾಗಿದೆ. ಎಂತಹ ಕಠಿಣ ಪರಿಸ್ಥಿತಿಯಲ್ಲೂ ತನ್ನ ಸೂಕ್ಷ್ಮ ಬುದ್ಧಿಮತ್ತೆಯಿಂದ, ಚಾಣಾಕ್ಷತನದಿಂದ ಪೊಲೀಸರಿಗೆ ಮಂಕುಬೂದಿ ಎರಚಿದ ಕುಖ್ಯಾತ ದರೋಡೆಕೋರನಾದ ಕಿಕ್ಕೇರಿ ನಂಜನನ್ನು ಪುಟ್ಟಮ್ಮ ಬಂಧಿಸಿದ ರೀತಿಯನ್ನು ಎಂ .ಕೆ. ಇಂದಿರಾರವರು 'ಪೊಲೀಸ್ ಪುಟ್ಟಮ್ಮ' ಕಥೆಯಲ್ಲಿ ಅತಿ ಮನೋಹರವಾಗಿ ನಿರೂಪಿಸಿದ್ದಾರೆ.

## ಸಿಲೆಬಸ್ ಗ್ರಿಡ್

| | | |
|---|---|---|
| ವಿಷಯ | : | ಕನ್ನಡ ಮೂಲಪಠ್ಯ ಘಟಕದ ಹೆಸರು : ಸಾಮರಸ್ಯದ ಬೆಳಕು |
| ತರಗತಿ | : | 9 |
| ಸಮಯ | : | 8 ಗಂಟೆಗಳು |
| ಆಶಯ | : | ಲಿಂಗ ಸಮಾನತೆ |

### ಉಪ ಆಶಯಗಳು :

- ಕುಟುಂಬ
- ಮಾತೃ ಹೃದಯದ ಭಾವ ಸಂಪನ್ನತೆ
- ಸ್ತ್ರೀ ಸಮಾನತೆ/ತೃತೀಯ ಲಿಂಗಿಗಳು
- ಜಾತಿ, ಮತ ಆಧಾರಿತವಾದ ಮೌಢ್ಯಗಳು

### ಸಾಹಿತ್ಯ ಪ್ರಕಾರಗಳು

- ಆತ್ಮಕಥೆಯ ಭಾಗ (ಗಂಡು ಜೀವ ಹೆಣ್ಣು ಭಾವ)
- ಕವನ (ಹಾಡು, ಕವಿಯೆ, ಹಾಡು)
- ಕಥೆ (ಪೊಲೀಸ್ ಪುಟ್ಟಮ್ಮ)

### ಕಲಿಕಾ ಉದ್ದೇಶಗಳು:

- ಕುಟುಂಬ ಜೀವನದಲ್ಲಿ ಸ್ತ್ರೀಯು ಮಾತೃ ಹೃದಯವಾಗಿ ಆದ್ರತೆಯಿಂದ ಎಲ್ಲರನ್ನು ಪ್ರೀತಿಸುವ ಯಜಮಾನಿಯಾಗಿ ಕುಟುಂಬದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿ ಸಮಾಜದ ಉನ್ನತಿಗೆ ಪುರುಷರಂತೆ ಸ್ತ್ರೀಯರು ಕೊಡುಗೆಗಳನ್ನು ನೀಡುತ್ತಾಳೆ.
- ಸ್ತ್ರೀಯರಿಗೂ ಈ ಸಮಾಜದಲ್ಲಿ ಸಮಾನತೆ ಮತ್ತು ಸ್ವಾತಂತ್ರ್ಯದ ಹಕ್ಕು ಇದೆ ಎಂಬುದನ್ನು ತಿಳಿಯುವುದು.
- ಜಾತಿ ಮತ ಧರ್ಮದ ಹೆಸರಿನಲ್ಲಿ ಹೇರಲಾಗುವ ಮೌಢ್ಯವನ್ನು ನಿರ್ಬಂಧಗಳನ್ನು ಪ್ರತಿಭಟಿಸುವ ಪ್ರತಿಕ್ರಿಯಿಸುವ ತಿಳುವಳಿಕೆಗಳನ್ನು ಬೆಳೆಸುವುದು.
- ಲಿಂಗ ಆಧಾರಿತ ಶೋಷಣೆಯನ್ನು ತಡೆಯುವ ಪ್ರಜ್ಞೆಯನ್ನು ಬೆಳೆಸುವುದು.

| ಕಲಿಕಾ ಉದ್ದೇಶಗಳು | | | | ಭಾಷಾ ಸತ್ಯಾಂಶಗಳು | ಭಾಷಾ ವ್ಯವಹಾರ ರೂಪಗಳು | ಕಲಿಕೋಪಕರಣಗಳು | ಮೌಲ್ಯಮಾಪನ |
|---|---|---|---|---|---|---|---|
| ಪಾಠದ ಹೆಸರು | ಆಶಯ / ತಿಳುವಳಿಕೆಗಳು | ಭಾಷಾ ಸಾಮರ್ಥ್ಯಗಳು | ಮೌಲ್ಯಗಳು/ ಮನೋಭಾವಗಳು. | | | | |
| 1. ಗಂಡು ಜೀವ ಹೆಣ್ಣು ಭಾವ (ಆತ್ಮಕಥೆಯ ಭಾಗ)<br><br>2. ಹಾಡು, ಕವಿಯೆ, ಹಾಡು (ಕವನ )<br><br>3. ಪೊಲೀಸ್ ಪುಟ್ಟಮ್ಮ (ಕಥೆ) | ● ತೃತೀಯ ಲಿಂಗಿಗಳಾದ ಜನರನ್ನು ಎಲ್ಲರಂತೆ ಕಾಣುವುದು ಮತ್ತು ಸಮಾನ ಅವಕಾಶಗಳಿವೆ ಎಂಬುದನ್ನು ತಿಳಿಯುವುದು.<br>● ಜಾತಿ ಧರ್ಮ ಮತಗಳ ಆಧಾರಿತ ಮೂಲಭೂತವಾದ ಹೆಸರಿನಲ್ಲಿ ಮೌಢ್ಯಗಳನ್ನು ಹೇರಲಾಗುತ್ತಿದೆ.<br>● ಮೌಢ್ಯಗಳ ಕಾರಣದಿಂದ ಸ್ವಾತಂತ್ರ್ಯಕ್ಕೆ ಹಲವು ರೀತಿಯ ನಿರ್ಬಂಧಗಳನ್ನು ಹೇರಲಾಗುತ್ತದೆ.<br>● ಕುಟುಂಬ ಜೀವನದಲ್ಲಿ ಇಂದಿಗೂ ತಾಯಿಗೆ ಮಹತ್ವದ ಸ್ಥಾನವಿದೆ.<br>● ಹಲವಾರು ಕಾರಣಗಳಿಂದ ಸ್ತ್ರೀಯರನ್ನು ಸಮಾಜದ ಮುಖ್ಯವಾಹಿನಿಯಿಂದ ದೂರವಿರಿಸಿದುದು ಅಭಿವೃದ್ಧಿಗೆ ಮಾರಕವಾಗಿದೆ.<br>● ಮನೆಗಳಲ್ಲಿ ಕೆಲಸದ ಸ್ಥಳಗಳಲ್ಲಿ ಶೋಷಣೆ. | ● ವಿವಿಧ ಸಾಹಿತ್ಯ ಪ್ರಕಾರ ಕಥೆ ನವ್ಯ ಕವನ ಆತ್ಮಕಥೆ ಇತ್ಯಾದಿ ಗಳನ್ನು ಓದಿ ಆಸ್ವಾದಿಸುವ ಸಾಮರ್ಥ್ಯ.<br>● ಲೇಖನ, ಪ್ರಬಂಧ, ಸನ್ಮಾನ ಪತ್ರ, ಸಂದರ್ಶನ ಪ್ರಶ್ನಾವಳಿ, ಪತ್ರ ರಚನೆ ಮುಂತಾದ ಭಾಷಾ ವ್ಯವಹಾರ ರೂಪಗಳಲ್ಲಿ ಸ್ವಂತ ದೃಷ್ಟಿಕೋನಗಳಿಂದ ಅಭಿವ್ಯಕ್ತಗೊಳಿಸುವ ಸಾಮರ್ಥ್ಯ.<br>● ಆಶಯ, ಸಂಕ್ಷೇಪಿಸಿ ಬರವಣಿಗೆ. | ● ನಾವೆಲ್ಲರೂ ಸಮಾನರು.<br>● ಸಮಾನತೆ / ಸ್ವಾತಂತ್ರ್ಯಕ್ಕೆ ಸ್ತ್ರೀ/ ಪುರುಷ ಎನ್ನುವುದು ಅಡ್ಡಿಯಾಗಬಾರದು.<br>● ಸ್ತ್ರೀ ಶೋಷಣೆಯನ್ನು ವಿರೋಧಿಸುವ ಮನೋಭಾವಗಳು.<br>● ಸನ್ನಿವೇಶಕ್ಕೆ ತಕ್ಕಂತೆ ಸಮಯಪ್ರಜ್ಞೆಯಿಂದ ವರ್ತಿಸಿ ತನ್ನ ಮನೆಯ ರಾಜ್ಯದ ಗೌರವವನ್ನು ರಕ್ಷಿಸಿದ ಧೀರೋದ್ಧಾತರಾದ ಮಹಿಳೆಯರ ಉದಾಹರಣೆಗಳು ನಮಗೆ ಚರಿತ್ರೆಯಲ್ಲಿ ಕಾಣಸಿಗುತ್ತವೆ. ಇವುಗಳನ್ನು ಓದುವುದರ ಮೂಲಕ ಸ್ತ್ರೀಯರ ಮೇಲೆ ಗೌರವ ಮನೋಭಾವವನ್ನು ತಾಳುವುದು. | ● ವಾಕ್ಯ/ ಸಂಯುಕ್ತ ವಾಕ್ಯದಲ್ಲಿ ಪ್ರಯೋಗ.<br>● ಪರ್ಯಾಯ ಪದ<br>● ಸಂವಾದಿ ಪದ<br>● ಶಿಷ್ಟ ರೂಪ<br>● ಲೇಖನ ಚಿಹ್ನೆಗಳು | ● ಕಥೆ<br>● ಆಶಯ<br>● ಸ್ವಾರಸ್ಯ<br>● ಶೀರ್ಷಿಕೆ ನೀಡಿ ಸಮರ್ಥನೆ<br>● ಸನ್ಮಾನ ಪತ್ರ<br>● ಲೇಖನ<br>● ಸಂಭಾಷಣೆ<br>● ವ್ಯವಹಾರಿಕ ಪತ್ರ<br>● ಪಾತ್ರ ಚಿತ್ರಣ<br>● ಸಂದರ್ಶನ ಪ್ರಶ್ನಾವಳಿ<br>● ಟಿಪ್ಪಣಿ<br>● ಪ್ರಬಂಧ | ● ಸ್ತ್ರೀಯರ ಮಾತೃ ಹೃದಯದ ಕಥೆ ಕವನಗಳು<br>● ಐ ಸಿ ಟಿಯ ಬಳಕೆ<br>● ಆಕರಗ್ರಂಥಗಳು.<br>● ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡಿದ ಮಹಿಳೆಯರ ಮಾಹಿತಿ ಸಂಗ್ರಹಿಸಿ ಆಕರ್ಷಕವಾದ ಸ್ಲೈಡ್ . | ● ಸ್ವ ಮೌಲ್ಯಮಾಪನ ಪರಸ್ಪರ /ನಿರಂತರ ಮೌಲ್ಯಮಾಪನ<br>● ಪಾತ್ರ ಚಿತ್ರಣ<br>● ಸನ್ಮಾನ ಪತ್ರ<br>● ಅಭಿಪ್ರಾಯ ಟಿಪ್ಪಣಿ<br>● ಕತೆ<br>● ಕವನ<br>● ಲೇಖನ<br>● ಸಂಭಾಷಣ ರೂಪ<br>● ಪ್ರಬಂಧ<br>● ವ್ಯವಹಾರಿಕ ಪತ್ರ |

# ಚಟುವಟಿಕೆಗಳು

## <u>ಪ್ರವೇಶ ಚಟುವಟಿಕೆ</u>

- **ಅಭಿಪ್ರಾಯ ಬರೆಯುವುದು**

ಘಟಕದ ಆರಂಭದಲ್ಲಿ ಘಟಕಕ್ಕೆ ಪ್ರವೇಶಿಸಲು ಅನುಕೂಲವಾಗುವಂತೆ ಚಿತ್ರವೊಂದನ್ನು ಕೊಡಲಾಗಿದೆ. ಅದನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ತಮ್ಮ ಮನದಲ್ಲಿ ಮೂಡುವ ಅಭಿಪ್ರಾಯಗಳನ್ನು ವಿದ್ಯಾರ್ಥಿಗಳು ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಮಕ್ಕಳ ಚಿಂತನೆಗೆ ಪೂರಕವಾದ ಪ್ರಶ್ನೆಗಳನ್ನು ಅಧ್ಯಾಪಕರು ಕೇಳಬಹುದು.

- ಪ್ರವೇಶ ಚಟುವಟಿಕೆಯಾಗಿ ನೀಡಿದ ಚಿತ್ರವು ಯಾವುದಕ್ಕೆ ಸಂಬಂಧಿಸಿದುದಾಗಿದೆ?
- ಚಿತ್ರದಲ್ಲಿರುವ ಮಹಿಳೆಯರು ಯಾವೆಲ್ಲ ಕ್ಷೇತ್ರಗಳಲ್ಲಿ/ ಉದ್ಯೋಗಗಳಲ್ಲಿ ತೊಡಗಿಕೊಂಡಿದ್ದಾರೆ?
- ಚಿತ್ರಕ್ಕಿಂತ ಹೊರತಾಗಿ ಇಂದು ಮಹಿಳೆಯರು ಬೇರೆ ಯಾವೆಲ್ಲಾ ಉದ್ಯೋಗಗಳಲ್ಲಿ ತಮ್ಮ ಸಾಮರ್ಥ್ಯವನ್ನು ಮೆರೆದಿದ್ದಾರೆ?
- ಮಕ್ಕಳು ಹೇಳಿದ ಉತ್ತರಗಳನ್ನು ಪಟ್ಟಿಮಾಡಿ ಕರಿಹಲಗೆಯಲ್ಲಿ ಬರೆಯುವುದು
- ಹಾಗಾದರೆ ಹಿಂದಿನ ಕಾಲದ ಮಹಿಳೆಯರ ಸ್ಥಿತಿಗತಿಗೂ ಇಂದಿನ ಕಾಲದ ಮಹಿಳೆಯರ ಸ್ಥಿತಿಗತಿಗೂ ಇರುವ ವ್ಯತ್ಯಾಸಗಳೇನು?
- ಚರ್ಚಿಸಿ ಅಭಿಪ್ರಾಯಗಳನ್ನು ಬರೆಯಲು ಹೇಳುವುದು.

# ಗಂಡು ಜೀವ ಹೆಣ್ಣು ಭಾವ

- **ಉತ್ತರಿಸುವುದು**

'ಗಂಡು ಜೀವ ಹೆಣ್ಣು ಭಾವ' ಪಾಠವನ್ನು ಮಕ್ಕಳು ಸರಣಿ ಓದಿನ ಮೂಲಕ ಗಟ್ಟಿಯಾಗಿ ಓದಲಿ. ಪಾಠದ ಆಶಯವನ್ನು ಸರಿಯಾಗಿ ಮನದಟ್ಟು ಮಾಡಿಕೊಳ್ಳುವ ಉದ್ದೇಶದಿಂದ ಮತ್ತೊಮ್ಮೆ ಮೌನವಾಗಿ ಓದಲು ಹೇಳುವುದು. ಬಳಿಕ ಪಾಠದ ಕೊನೆಯಲ್ಲಿ ನೀಡಿರುವ ಆಶಯ ಗ್ರಹಣ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಂಡು ಬಾಯ್ದೆರೆಯಾಗಿ ಹೇಳಲಿ. ನಂತರ ಸರಿಯಾದ ಉತ್ತರವನ್ನು ಚಟುವಟಿಕೆ ಪುಸ್ತಕದಲ್ಲಿ ಬರೆದು ಮಂಡಿಸಲಿ.

- **ಸಂವಾದಿ ಪದ ಬರೆಯುವುದು**

ವಿದ್ಯಾರ್ಥಿಗಳು ಪಾಠ ಭಾಗದಲ್ಲಿ ಬಂದಿರುವ ಆಂಗ್ಲ ಪದಗಳನ್ನು ಗುರುತಿಸಿ ಪಟ್ಟಿ ಮಾಡಲಿ. ಬಳಿಕ ಅವುಗಳಿಗೆ ಸಂವಾದಿಯಾದ ಕನ್ನಡ ಪದಗಳನ್ನು ಕಂಡುಕೊಳ್ಳಲಿ. ನಂತರ ಅವುಗಳನ್ನು ಬಳಸಿಕೊಂಡು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಲಿ. ಚಟುವಟಿಕೆ ಪುಸ್ತಕದಲ್ಲಿ ಬರೆದು ಮಂಡಿಸಲಿ.

**ಉದಾಹರಣೆಗೆ :**

ಟ್ರಾಫಿಕ್ ಸಿಗ್ನಲ್ - ರಸ್ತೆ ಸಂಚಾರ ಸಂಕೇತ

- ನಾವಿಂದು ವಾಹನಗಳಲ್ಲಿ ತೆರಳುವಾಗ ರಸ್ತೆ ಸಂಚಾರ ಸಂಕೇತಗಳನ್ನು ಕಡ್ಡಾಯವಾಗಿ ಅನುಸರಿಸಬೇಕು.

- **ಸಂದರ್ಶನ ಪ್ರಶ್ನಾವಳಿ ತಯಾರಿಸುವುದು**

'ಗಂಡು ಜೀವ ಹೆಣ್ಣು ಭಾವ' ಎಂಬ ಆತ್ಮಕಥೆಯ ಭಾಗದಲ್ಲಿ ಮಾನವಿ ಬಂದೋಪಾಧ್ಯಾಯರವರ ಬದುಕು ಮತ್ತು ಸಾಧನೆಯ ಕುರಿತು ವಿದ್ಯಾರ್ಥಿಗಳು ಓದಿ ತಿಳಿದಿರುವರು. ಇದರ ಆಧಾರದಲ್ಲಿ ಮಾನವಿ ಬಂದೋಪಾಧ್ಯಾಯರವರನ್ನು ಸಂದರ್ಶಿಸಲು ಬೇಕಾದ ಸಂದರ್ಶನ ಪ್ರಶ್ನಾವಳಿಯನ್ನು ತಯಾರಿಸಲಿ. ವಿದ್ಯಾರ್ಥಿಗಳನ್ನು ಗುಂಪಿನಲ್ಲಿ ಕುಳ್ಳಿರಿಸಿ ಪ್ರಶ್ನಾವಳಿಯನ್ನು ತಯಾರಿಸಲು ಸೂಚಿಸುವುದು. ಬಳಿಕ ಗುಂಪಿನಿಂದ ಒಬ್ಬರಂತೆ ಮಂಡಿಸಲಿ. ಉಳಿದ ಗುಂಪುಗಳು ಅದನ್ನು ಗಮನಿಸಲಿ. ಬಿಟ್ಟು ಹೋದ ವಿಚಾರಗಳಿದ್ದಲ್ಲಿ ಅಧ್ಯಾಪಕರು ಸಲಹೆ ನೀಡುವುದು. ಪೂರ್ಣಗೊಂಡ ಪ್ರಶ್ನೆಯನ್ನು ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ.

**ಪ್ರಶ್ನಾವಳಿಗಳನ್ನು ಹೀಗೂ ಬರೆಯಬಹುದು**

- ನೀವು ಆರಂಭಿಸಿದ ಅಭೋಮಾನವ್ ಪತ್ರಿಕೆಯ ಉದ್ದೇಶ ಮತ್ತು ವಿಶೇಷತೆಗಳೇನು?
- ತೃತೀಯ ಲಿಂಗಿಗಳ ಕಲ್ಯಾಣಕ್ಕಾಗಿ ನೀವು ಕೈಗೊಂಡಿರುವ ಯೋಜನೆಗಳೇನು?
- ತೃತೀಯ ಲಿಂಗಿಗಳನ್ನು ಸಂಘಟಿಸುವಲ್ಲಿ ನೀವು ಎದುರಿಸಿದ ಸಮಸ್ಯೆಗಳು ಯಾವುವು? ಅವುಗಳನ್ನು ಹೇಗೆ ಪರಿಹರಿಸಿದಿರಿ?
- ತೃತೀಯ ಲಿಂಗಿಗಳು ಸ್ವಾವಲಂಬಿಗಳಾಗುವುದಕ್ಕೆ ನೀವು ನೀಡುವ ಸಲಹೆಗಳೇನು?
- ತೃತೀಯ ಲಿಂಗಿಗಳನ್ನು ಸಮಾಜದ ಮುಖ್ಯವಾಹಿನಿಗೆ ತರಲು ನೀವು ಕೈಗೊಂಡ ಪ್ರಯತ್ನಗಳೇನು?

- **ರೂಪಾಂತರಿಸಿ ಬರೆಯುವುದು**

ಆತ್ಮಕಥೆಯ ಭಾಗವನ್ನು ಜೀವನ ಚರಿತ್ರೆಯಾಗಿ ರೂಪಾಂತರಿಸಿ ಬರೆಯುವುದು. ಆತ್ಮಕಥೆ ಮತ್ತು ಜೀವನ ಚರಿತ್ರೆಗಳ ಕುರಿತಾದ ಚರ್ಚೆಯನ್ನು ತರಗತಿಯಲ್ಲಿ ನಡೆಸುವುದು. ಅದಕ್ಕಾಗಿ ಮಕ್ಕಳಲ್ಲಿ ಕೆಲವು ಪ್ರಶ್ನೆಗಳನ್ನು ಕೇಳುವುದು.

- ಆತ್ಮಕಥೆ ಎಂದರೇನು?
- ಜೀವನ ಚರಿತ್ರೆ ಎಂದರೇನು?
- ಆತ್ಮಕಥೆ ಮತ್ತು ಜೀವನ ಚರಿತ್ರೆ ಗಿರುವ ವ್ಯತ್ಯಾಸವೇನು?
- ..........................
- ..........................

ಈ ರೀತಿಯ ಪ್ರಶ್ನೆಗಳನ್ನು ಕೇಳುವುದರ ಮೂಲಕ ಆತ್ಮಕಥೆ ಮತ್ತು ಜೀವನ ಚರಿತ್ರೆಗಳಿಗಿರುವ ವ್ಯತ್ಯಾಸಗಳನ್ನು ಸ್ಪಷ್ಟಪಡಿಸುವುದು. ಆ ಬಳಿಕ ಚಟುವಟಿಕೆಯಲ್ಲಿ ನೀಡಲಾದ ಮಾಳವಿಕಾ ಅಯ್ಯರ್ ಅವರ ಆತ್ಮಕಥೆಯ ಭಾಗವನ್ನು ಗುಂಪಿನಲ್ಲಿ ಕುಳಿತು ಜೀವನ ಚರಿತ್ರೆಯಾಗಿ ರೂಪಾಂತರಿಸಿ ಬರೆಯಲು ಹೇಳುವುದು. ನಿರ್ದಿಷ್ಟ ಸಮಯದ ಬಳಿಕ ಗುಂಪಿನಿಂದ ಒಬ್ಬರಲ್ಲಿ ಮಂಡಿಸಲು ಹೇಳುವುದು. ಉಳಿದ ಗುಂಪಿನವರಲ್ಲಿ ಗಮನಿಸಿಕೊಳ್ಳುವಂತೆ ತಿಳಿಸುವುದು. ಮಕ್ಕಳು ಬರೆದು ಮಂಡಿಸಿದ ಚಟುವಟಿಕೆಯಲ್ಲಿ ಬಿಟ್ಟುಹೋದ ಅಂಶಗಳಿದ್ದಲ್ಲಿ ಅಧ್ಯಾಪಕರು ಸರಿಪಡಿಸುವುದು. ಬಳಿಕ ಅಧ್ಯಾಪಕರು ತಾವು ಬರೆದ ಜೀವನ ಚರಿತ್ರೆಯ ಭಾಗವನ್ನು ಪ್ರೊಜೆಕ್ಟರ್ ನಲ್ಲಿ ಪ್ರದರ್ಶಿಸುವುದು.

**ಜೀವನ ಚರಿತ್ರೆಯನ್ನು ಹೀಗೆ ಬರೆಯಬಹುದು**

ತಮಿಳುನಾಡಿನ ಕುಂಭಕೋಣಂ ಮಾಳವಿಕಾ ಅಯ್ಯರ್ ಅವರ ಹುಟ್ಟೂರು. ಅವರ ತಂದೆಯ ಹೆಸರು ಪಿ ಕೃಷ್ಣನ್. ಅವರು ನೀರಾವರಿ ಇಲಾಖೆಯಲ್ಲಿ ಚೀಫ್ ಎಂಜಿನಿಯರ್. ಅವರ ತಾಯಿಯ ಹೆಸರು ಹೇಮ. ಅವರಿಗೊಬ್ಬರು ಅಕ್ಕ ಇದ್ದಾರೆ. ೧೨ನೇ ವರ್ಷದವರೆಗೂ ಅವರು ಜಸ್ಟ್ ಪಾಸ್ ಅಂಕಗಳನ್ನು ಮಾತ್ರ ಪಡೆಯುವ ಆವರೇಜ್ ಬುದ್ಧಿವಂತಿಕೆಯ ವಿದ್ಯಾರ್ಥಿಯಾಗಿದ್ದರು. ಗಾಳಿಪಟ ಹಾರಿಸುವುದು, ಮರಕೋತಿ ಆಟವಾಡುವುದು ಅವರ ಮೆಚ್ಚಿನ ಹವ್ಯಾಸವಾಗಿತ್ತು. ಭವಿಷ್ಯದಲ್ಲಿ ಹೆಸರಾಂತ ಡ್ಯಾನ್ಸ್ ಆಗಬೇಕು ಎಂಬ ಆಸೆ ಅವರದಾಗಿತ್ತು.

- **ಸನ್ಮಾನ ಪತ್ರ ಬರೆಯುವುದು**

ಸನ್ಮಾನ ಪತ್ರದ ಕೆಲವು ಮಾದರಿಗಳನ್ನು ಗುಂಪಿನಲ್ಲಿ ಹಂಚುವುದು. ಅವುಗಳಲ್ಲಿ ಅಡಕವಾಗಿರುವ ಅಂಶಗಳನ್ನು ಗುರುತಿಸಿ ಲಘು ಚರ್ಚೆ ನಡೆಸುವುದು. ವಿದ್ಯಾರ್ಥಿಗಳು ಹೇಳಿದ ಅಂಶಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಬಿಟ್ಟು ಹೋದ ಅಂಶಗಳಿದ್ದರೆ ಸೇರಿಸಿ ಬರೆಯುವುದು. ನಿಮ್ಮೂರಿನಲ್ಲಿ ವಿಶೇಷ ಸಾಧನೆ ಮಾಡಿದ ಮಹಿಳೆಯರಿದ್ದಾರೆಯೇ?

ಎಂದು ಪ್ರಶ್ನಿಸುವುದು. ವಿದ್ಯಾರ್ಥಿಗಳು ಹೇಳಿದ ಹೆಸರುಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಆ ಬಳಿಕ ವಿದ್ಯಾರ್ಥಿಗಳು ಗುಂಪಿನಲ್ಲಿ ಕುಳಿತು ತಾವು ಆಯ್ಕೆ ಮಾಡಿದ ಸಾಧಕಿಯೊಬ್ಬರಿಗೆ ಸನ್ಮಾನ ಪತ್ರ ಬರೆಯಲಿ. ಆಕರ್ಷಕ ರೀತಿಯಲ್ಲಿ ಬರೆದು ಮಂಡಿಸಿದ ಸನ್ಮಾನ ಪತ್ರವನ್ನು ತರಗತಿಯ ಭಿತ್ತಿ ಪತ್ರಿಕೆಯಲ್ಲಿ ಪ್ರದರ್ಶಿಸುವುದು. ಉತ್ತಮವಾಗಿ ಬರೆದು ಮಂಡಿಸಿದ ಗುಂಪಿನ ಸದಸ್ಯರನ್ನು ಅಭಿನಂದಿಸುವುದು.

**ಸನ್ಮಾನ ಪತ್ರದ ಸ್ವರೂಪ :**

- ಶೀರ್ಷಿಕೆ
- ಸಂಬೋಧನೆ
- ವಿದ್ಯಾಭ್ಯಾಸ
- ಉದ್ಯೋಗ
- ಸಾಧನೆ
- ಗೌರವ
- ಪ್ರಶಸ್ತಿ
- ಅಭಿನಂದನೆ .....

ಇತ್ಯಾದಿ ವಿಚಾರಗಳಿಂದ ಆಕರ್ಷಕವಾದ ಬರವಣಿಗೆಯ ಶೈಲಿಯನ್ನು ಹೊಂದಿರಬೇಕು.

## ಸನ್ಮಾನ ಪತ್ರ ಹೀಗೂ ಬರೆಯಬಹುದು

**ಅಪೂರ್ವ ಮಹಿಳಾ ವೇದಿಕೆ ಮಂಜೇಶ್ವರ**

ಇದರ ಬೆಳ್ಳಿ ಹಬ್ಬದ ಶುಭ ಸಂದರ್ಭದಲ್ಲಿ

ರಾಷ್ಟ್ರ ಮಟ್ಟದಲ್ಲಿ ಮಹತ್ತರ ಸಾಧನೆಗೈದ

**ಮಂಜೇಶ್ವರದ ಗಾನಕೋಗಿಲೆ ವಿದುಷಿ ಶ್ರೀಮತಿ ವಿದ್ಯಾ ಸರಸ್ವತಿ**

ಇವರಿಗೆ ಸಮರ್ಪಿಸುವ

# ಸನ್ಮಾನ

ಸನ್ಮಾನ್ಯರೇ,

ಕಾಸರಗೋಡು ಜಿಲ್ಲೆಯ ಮಂಜೇಶ್ವರದಲ್ಲಿ ವಿದ್ಯಾಶಂಕರ, ವಿದ್ಯಾ ಲಕ್ಷ್ಮೀ ದಂಪತಿಗಳ ಸುಪುತ್ರಿಯಾಗಿ ಜನಿಸಿದ ತಾವು ಎಳವೆಯಿಂದಲೇ ಕಡುಬಡತನದಲ್ಲೇ ಬೆಳೆದು ಬಂದವರು. ಆದರೂ ಬಾಲ್ಯದಲ್ಲೇ ಸಂಗೀತದ ಅಭಿರುಚಿಯನ್ನು ಬೆಳೆಸಿಕೊಂಡವರು. ಚಿಕ್ಕಂದಿನಿಂದಲೇ ತಮಗೆದುರಾದ ಎಲ್ಲಾ ಸಂಕಷ್ಟಗಳನ್ನು ಮೆಟ್ಟಿನಿಂತು ತಂದೆಯಿಂದಲೇ ಸಂಗೀತ ಅಭ್ಯಾಸವನ್ನು ಮಾಡಿ ತಾವು ಭದ್ರಬುನಾದಿ ಹಾಕಿಕೊಂಡವರು. ತದನಂತರ ಪ್ರಸಿದ್ಧ ಕರ್ನಾಟಕ ಸಂಗೀತ ವಿದ್ವಾಂಸರಾದ ಶ್ರೀ ಕೇಶವ ಆಚಾರ್ ಅವರ ಬಳಿ ಸಂಗೀತದ ಪರಿಪೂರ್ಣ ಶಿಕ್ಷಣವನ್ನು ಗಳಿಸಿದವರು. ಇಂದು ರಾಷ್ಟ್ರದಾದ್ಯಂತ ಹಲವು ಕಾರ್ಯಕ್ರಮಗಳನ್ನು ನೀಡಿ ಅಪೂರ್ವ ಸಾಧನೆಯನು ಮಾಡಿ ತಾಯ್ನಾಡಿಗೆ ಹೆಮ್ಮೆ ಎನಿಸಿರುವಿರಿ. ತಮ್ಮ ಹೆಸರಿನಲ್ಲಿರುವಂತೆ ಕಲಾ ಸರಸ್ವತಿ ಒಲಿದು ಬಂದಿರುವಳು. ತಮ್ಮ ಸಾಧನೆಯಿಂದ 'ಗಾನಕೋಗಿಲೆ'ಎಂದೇ ಪ್ರಸಿದ್ಧರಾಗಿರುವಿರಿ.

ತಮ್ಮ ಅದ್ಭುತ ಪ್ರತಿಭೆಯನ್ನು ಗುರುತಿಸಿದ ಹಲವಾರು ಸಂಘ ಸಂಸ್ಥೆಗಳು ತಮ್ಮನ್ನು ಆದರ ಪೂರ್ವಕವಾಗಿ ಗೌರವಿಸಿವೆ. ಅದ್ಭುತ ಕಂಠದ ವಿಶಿಷ್ಟ ಗಾಯನದಿಂದ ಅದೆಷ್ಟೋ ಮಂದಿ ಸಂಗೀತದಲ್ಲಿ ಆಸಕ್ತಿ ಹೊಂದಿ ತಮ್ಮ ಶಿಷ್ಯರೆನಿಸಿರುವರು. ರಾಜ್ಯ ರಾಷ್ಟ್ರಮಟ್ಟದ ಹಲವು ಪುರಸ್ಕಾರಗಳಿಗೆ ತಾವು ಭಾಜನರಾಗಿರುವಿರಿ. ತಮ್ಮ ವಿಶಿಷ್ಟವಾದ ಈ ಪ್ರತಿಭೆಯನ್ನು ಗೌರವಿಸಿ ಹುಟ್ಟೂರಲ್ಲಿಂದು ತಮ್ಮನ್ನು ಸನ್ಮಾನಿಸುವ ಸುಯೋಗ ನಮಗೆ ದೊರೆತದ್ದು ಬಹಳ ಸಂತೋಷದ ವಿಚಾರವಾಗಿದೆ. ದೇವರು ತಮಗೆ ಆಯುರಾರೋಗ್ಯ ಸುಖ ಶಾಂತಿ ನೆಮ್ಮದಿಯನ್ನು ಕರುಣಿಸಲಿ. ಕಲಾ ಕ್ಷೇತ್ರದಲ್ಲಿ ಮತ್ತಷ್ಟು ವಿಶೇಷ ಸಾಧನೆಗಳು ತಮ್ಮ ಮುಡಿಗೇರಲಿ ಎಂಬುದೇ ನಮ್ಮೆಲ್ಲರ ಹಾರೈಕೆ. ನಮ್ಮ ಈ ಮಹಿಳಾ ವೇದಿಕೆಯ ಬೆಳ್ಳಿ ಹಬ್ಬದ ಈ ಶುಭ ಸಮಾರಂಭದಲ್ಲಿ ಈ ಸನ್ಮಾನ ಪತ್ರವನ್ನು ಗೌರವ ಪೂರ್ವಕವಾಗಿ ಅರ್ಪಿಸಲು ಸಂತೋಷಪಡುತ್ತೇವೆ.

ವಂದನೆಗಳೊಂದಿಗೆ,

ಅಧ್ಯಕ್ಷರು ಹಾಗೂ ಸರ್ವ ಸದಸ್ಯರು
ಅಪೂರ್ವ ಮಹಿಳಾ ವೇದಿಕೆ
ಮಂಜೇಶ್ವರ.

ದಿನಾಂಕ: 28.03.2024

ಸ್ಥಳ : ಮಂಜೇಶ್ವರ

- **ಲೇಖನ ಬರೆಯುವುದು**

ಮಾನವಿ ಬಂದೋಪಾಧ್ಯಾಯರವರ ಆತ್ಮಕಥೆಯ ಭಾಗವಾದ 'ಗಂಡು ಜೀವ ಹೆಣ್ಣು ಭಾವ' ಪಾಠದಲ್ಲಿ ತೃತೀಯ ಲಿಂಗಿಗಳು ಎದುರಿಸುವ ಸಮಸ್ಯೆಗಳೇನು? ಎಂಬ ವಿಚಾರದ ಬಗ್ಗೆ ಓದಿ ತಿಳಿದಿರುವಿರಲ್ಲವೇ? ಮತ್ತೊಮ್ಮೆ ವಿದ್ಯಾರ್ಥಿಗಳು ಗುಂಪಿನಲ್ಲಿ ಈ ವಿಷಯದ ಕುರಿತು ಚರ್ಚಿಸಿ ಅಧ್ಯಾಪಕರ ನೆರವಿನೊಂದಿಗೆ ಚಟುವಟಿಕೆಯಲ್ಲಿ ನೀಡಲಾದ ವಿಷಯಕ್ಕೆ ಸಂಬಂಧಿಸಿದ ಲೇಖನವೊಂದನ್ನು ಸಿದ್ಧಪಡಿಸಲಿ.

**ಲೇಖನವನ್ನು ಹೀಗೂ ಬರೆಯಬಹುದು**

## ತೃತೀಯ ಲಿಂಗಿಗಳು ಸಮಾಜದ ಮುಖ್ಯ ವಾಹಿನಿಗೆ ಸೇರದಿರಲು ಕಾರಣವಾದ ಅಂಶಗಳು ಮತ್ತು ಪರಿಹಾರೋಪಾಯಗಳು

ಜನನ ಕಾಲದಲ್ಲಿ ಹೆಣ್ಣಾಗಿದ್ದವರು ಗಂಡಾಗಿಯೂ ಗಂಡಾಗಿದ್ದವರು ಹೆಣ್ಣಾಗಿಯೂ ಬೆಳೆಯುತ್ತಲೇ ಬದಲಾಗುವ ವಿಶಿಷ್ಟ ದೈಹಿಕ ಸ್ಥಿತಿ ಹೊಂದಿದವರನ್ನು ತೃತೀಯ ಲಿಂಗಿಗಳೆನ್ನುವರು. ಶಿಕ್ಷಣ, ಕೆಲಸ ಸಾಮಾಜಿಕ ರಕ್ಷಣೆ, ಉತ್ತರಾಧಿಕಾರ, ಆರ್ಥಿಕ ಸ್ವತ್ತುಗಳು, ಉತ್ಪಾದಕ ಸಂಪನ್ಮೂಲಗಳು, ನಿರ್ಧಾರ ಮಾಡುವಿಕೆ ಮತ್ತು ಸಮಾಜದ ಭಾಗವಹಿಸುವಿಕೆಯಲ್ಲಿ ಅವರು ನಿರಂತರವಾಗಿ ತಾರತಮ್ಯವನ್ನು ಎದುರಿಸುತ್ತಲೇ ಬಂದಿರುತ್ತಾರೆ.

ಧಾರ್ಮಿಕ ಮತೀಯ ಭಾವನೆಗಳು ತೃತೀಯ ಲಿಂಗಿಗಳ ಸಮಾಜದಲ್ಲಿ ಅಪಹಾಸ್ಯ ಮತ್ತು ವಿರೋಧಾಭಾಸಗಳ ಪರಿಣಾಮವನ್ನು ಉಂಟುಮಾಡಬಹುದು. ಸಾಮಾಜಿಕ ಪ್ರತಿಷ್ಠೆಯ ಅಭಾವವು ಈ ಜನಾಂಗದ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರುತ್ತದೆ. ಹಣದ ಹಂಚಿಕೆ, ಉದ್ಯೋಗ ಸಾಧನೆ ಮತ್ತು ವೃತ್ತಿ ಕ್ಷೇತ್ರಗಳಲ್ಲಿ ಇವರಿಗೆ ನ್ಯಾಯಯುತವಾದ ಅವಕಾಶಗಳಿಲ್ಲದೆ ಅಸಮಾನತೆ ಎದ್ದು ಕಾಣುತ್ತಿದೆ.

ತೃತೀಯ ಲಿಂಗಿಗಳಿಗೆ ಖಾಯಂ ವಾಸಸ್ಥಾನ ಎಂಬುದಿಲ್ಲ. ನಗರ ಪ್ರದೇಶಗಳಲ್ಲಿ ಅವರು ಗುಂಪಾಗಿ ತಾತ್ಕಾಲಿಕ ವಸತಿಗೃಹಗಳಲ್ಲಿ ವಾಸಿಸುತ್ತಾರೆ. ಮತ್ತು ಅದನ್ನು ಆಗಾಗ ಬದಲಾಯಿಸುತ್ತಿರುತ್ತಾರೆ. ಇದರಿಂದ ಅವರ ವಿಳಾಸ ದೃಢೀಕರಣವೇ ಅಧಿಕಾರಿಗಳಿಗೆ ಒಂದು ದೊಡ್ಡ ಸಮಸ್ಯೆ ಆಗಿತ್ತು.

ಭಾರತೀಯ ಸಮಾಜದಲ್ಲಿ ತೃತೀಯ ಲಿಂಗಿಗಳು ಎಂದರೆ ಸಾಮಾನ್ಯವಾಗಿ ನಗೆ ಪಾಟಲಿನ ವಸ್ತು. ಹೀಗೊಂದು ಅಲಿಖಿತ ನಿಯಮ ನಮ್ಮ ಸಮಾಜದಲ್ಲಿ ಇಂದಿಗೂ ಚಾಲ್ತಿಯಲ್ಲಿದೆ. ಇನ್ನು ಅಂಥವರನ್ನು ಕಂಡರೆ ಮುಖ ಸಿಂಡರಿಸಿ ಮಾರು ದೂರ ಓಡುವ ಜನರು ನಮ್ಮ ನಡುವೆ ಇದ್ದಾರೆ. ಆದರೆ ಅವರಿಗೂ ಒಂದು ಮನಸ್ಸಿದೆ ಅವರೊಳಗೂ ಭಾವನೆಗಳ ಸೆಳೆತವೊಂದಿದೆ ಎಂಬುದನ್ನು ನಾವು ಊಹಿಸುವುದೇ ಇಲ್ಲ.

ತೃತೀಯ ಲಿಂಗಿ ಸಮುದಾಯವು ದೇಶದ ಅತ್ಯಂತ ಅಂಚಿನಲ್ಲಿರುವ ಸಮುದಾಯಗಳಲ್ಲಿ ಒಂದಾಗಿದೆ. ಏಕೆಂದರೆ ಅವರು ಸಾಮಾನ್ಯವಾಗಿ ಸ್ತ್ರೀ ಪುರುಷ ವರ್ಗಗಳಿಗೆ ಹೊಂದಿಕೊಳ್ಳುವುದಿಲ್ಲ. ಪರಿಣಾಮವಾಗಿ ಅವರು ಸಾಮಾಜಿಕ ಬಹಿಷ್ಕಾರದಿಂದ ತಾರತಮ್ಯ, ಶಿಕ್ಷಣ ಸೌಲಭ್ಯಗಳ ಕೊರತೆ, ನಿರುದ್ಯೋಗ, ವೈದ್ಯಕೀಯ ಸೌಲಭ್ಯಗಳ ಕೊರತೆ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಾರೆ.

ಆಧುನಿಕ ಸಮಾಜದಲ್ಲೂ ಆಳಕ್ಕೆ ಬೇರೂರಿವ ಇಂತಹ ಮನಸ್ಥಿತಿಗಳನ್ನು ಅಪಮಾನಗಳ ಅಗ್ನಿಕುಂಡದಲ್ಲಿ ಬೆಂದು ಸಮಾಜದ ಮುಖ್ಯವಾಹಿನಿಗೆ ಬಂದ ತೃತೀಯ ಲಿಂಗಿಗಳ ಸಂಖ್ಯೆ ಇಡೀ ದೇಶದಲ್ಲಿ ಅಧಿಕವಾಗಿಲ್ಲದಿದ್ದರೂ, ಹೀಗೆ ಜಯಿಸಿ ಸಮಾಜದಲ್ಲಿ ಮುಂದೆ ಬಂದಿದ್ದಾರೆ ಎಂಬುದು ತುಸು ಸಮಾಧಾನಕರ ವಿಚಾರ.

ಶಿಕ್ಷಣದಿಂದ ವಂಚಿತರಾದ ಇವರಿಗೆ ಸೂಕ್ತ ಉದ್ಯೋಗವು ಕನಸಿನ ಮಾತಾಗಿದ್ದ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಅವರಿಗೆ ಶಿಕ್ಷಣ ಹಾಗೂ ವೃತ್ತಿ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ನೀಡುವ ಮೂಲಕ ಈ ವರ್ಗದ ಜನರ ಅಭಿವೃದ್ಧಿಗೆ ಮುನ್ನುಡಿ ಹಾಡುವ ಮಹತ್ವದ ತೀರ್ಪನ್ನು ತೆಗೆದುಕೊಂಡಿತು. ಇದರ ಪರಿಣಾಮವಾಗಿ ಇಂದು ಬಹುತೇಕ ರಾಜ್ಯಗಳು ಈ ಬಗ್ಗೆ ಹೆಚ್ಚಿನ ನಿಗಾವಹಿಸಿದ್ದು ತೃತೀಯ ಲಿಂಗಿಗಳನ್ನು ಮುಖ್ಯ ವಾಹಿನಿಗೆ ತರುವಲ್ಲಿ ಶ್ರಮಿಸಿವೆ. ಇದರಿಂದಾಗಿ ಇಂದು ಹಲವು ಕ್ಷೇತ್ರಗಳಲ್ಲಿ ಇವರ ಸಾಧನೆ ಗಮನಾರ್ಹವಾಗಿರುವುದನ್ನು ಕಾಣಬಹುದಾಗಿದೆ.

ಇದೀಗ ತೃತೀಯ ಲಿಂಗಿಗಳಿಗಾಗಿ ಸರಕಾರವು ಮಸೂದೆಯೆಂದನ್ನು ಜಾರಿಗೊಳಿಸಿದ್ದು ಆ ಮೂಲಕ ಅವರ ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕ ಸಬಲೀಕರಣಕ್ಕೆ ಒಂದು ವ್ಯವಸ್ಥೆಯನ್ನು ಒದಗಿಸುತ್ತದೆ. ಸರಕಾರವು ಮತದಾನದ ಪಟ್ಟಿಯಲ್ಲಿ ಅವರ ಹೆಸರು ನೋಂದಾಯಿಸುವುದರೊಂದಿಗೆ ಮತ ಚಲಾವಣೆಯ ಹಕ್ಕನ್ನು ನೀಡಿದೆ. ಅವರು ಸ್ವ ಉದ್ಯೋಗ ನಡೆಸಲು ಆರ್ಥಿಕವಾಗಿ ಉದಾರ ಸಾಲ ಸೌಲಭ್ಯಗಳನ್ನು ದೊರಕಿಸುವಲ್ಲಿ ನೆರವಾಗುವುದು. ಆರೋಗ್ಯ ಸಂರಕ್ಷಣೆಗೆ ಸಂಬಂಧಿಸಿದಂತೆ ಸೂಕ್ತ ಶಸ್ತ್ರಚಿಕಿತ್ಸೆಯನ್ನು ಉಚಿತವಾಗಿ ಲಭಿಸುವಂತೆ ಮಾಡುವುದು. ಸಾರ್ವಜನಿಕ ಸಂಘ ಸಂಸ್ಥೆಗಳಲ್ಲಿ ಇವರಿಗಾಗಿ ಪ್ರತ್ಯೇಕ ನಿಯಮಗಳನ್ನು ಜಾರಿಗೊಳಿಸಿ ಅವರನ್ನು ಸಮಾಜದಲ್ಲಿ ಸದೃಢರನ್ನಾಗಿಸುವುದು.

- **ಸರಳ ವಾಕ್ಯ ರಚಿಸುವುದು**

ವಿದ್ಯಾರ್ಥಿಗಳು ಸಂಯುಕ್ತ ವಾಕ್ಯ ಮತ್ತು ಸರಳ ವಾಕ್ಯದ ಬಗ್ಗೆ ಹಿಂದಿನ ತರಗತಿಗಳಲ್ಲಿ ಓದಿ ತಿಳಿದಿರುವರು. ಅದರಂತೆ ಪಠ್ಯಪುಸ್ತಕದ ಚಟುವಟಿಕೆಯಲ್ಲಿ ಕೊಡಲಾದ ವಾಕ್ಯಗಳನ್ನು ಮೌನವಾಗಿ ಓದಿದ ಬಳಿಕ ಪ್ರತಿಯೊಬ್ಬರು ಅವುಗಳನ್ನು ಸರಳ ವಾಕ್ಯಗಳಾಗಿ ಬರೆಯಲಿ. ಆಯ್ದ ವಿದ್ಯಾರ್ಥಿಗಳು ಮಂಡಿಸಲಿ. ಉಳಿದವರು ತಾವು ಬರೆದ ವಾಕ್ಯಗಳಲ್ಲಿ ತಪ್ಪಿದ್ದಲ್ಲಿ ಪುನಃ ಪರಿಷ್ಕರಿಸಿ ಬರೆಯಲಿ.

**ಉದಾಹರಣೆಗೆ :**

ಗೀತಾ ಚಂದ್ ಅವರು ಚಿಕ್ಕವಳಿದ್ದಾಗಲೇ ತಂದೆಯವರಿಗೆ ವರ್ಗಾವಣೆಯಾಯಿತು.

ಆದುದರಿಂದ ಕುಟುಂಬದವರೆಲ್ಲರೂ ಇಂದೂರಿಗೆ ಶಿಫ್ಟ್ ಆದರು.

ಈ ರೀತಿಯಲ್ಲಿ ಪಾಠಭಾಗದಿಂದ ಇನ್ನಷ್ಟು ಸಂಯುಕ್ತ ವಾಕ್ಯಗಳನ್ನು ಆಯ್ದು ಸರಳ ವಾಕ್ಯಗಳಾಗಿ ವಿಭಜಿಸಿ ಬರೆಯಿರಿ.

- **ಸ್ಲೈಡ್ ತಯಾರಿಸುವುದು**

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡಿದ ಮಹಿಳೆಯರ ಕುರಿತಾಗಿ ಅಂತರ್ಜಾಲದ ಸಹಾಯದಿಂದ

ಮಾಹಿತಿ ಸಂಗ್ರಹಿಸಿ ಆಕರ್ಷಕವಾದ ಸ್ಲೈಡ್ ಗಳನ್ನು ತಯಾರಿಸುವುದು. ಆಕರ್ಷಕವಾದ ರೀತಿಯಲ್ಲಿ ಸ್ಲೈಡ್‌ಗಳನ್ನು ತಯಾರಿಸಿ ಪ್ರದರ್ಶಿಸಿದ ವಿದ್ಯಾರ್ಥಿಯನ್ನು ಅಭಿನಂದಿಸುವುದು.

## ಹಾಡು, ಕವಿಯೆ, ಹಾಡು

ಹಾಡು, ಕವಿಯೆ, ಹಾಡು ಕವನವನ್ನು ವಿದ್ಯಾರ್ಥಿಗಳು ಮೌನವಾಗಿ ಓದಲಿ. ಓದುವ ಸಂದರ್ಭದಲ್ಲಿ ಕವನದಲ್ಲಿರುವ ನವೀನ ಪದಗಳಿಗೆ ಅರ್ಥ ಬರೆಯಲಿ. ವಿಶೇಷಾರ್ಥ ಪದಗಳನ್ನು ಗುರುತಿಸಲಿ. ಬಳಿಕ ರಾಗ ಸಂಯೋಜಿಸಿ ಹಾಡುವಂತೆ ಸೂಚಿಸುವುದು. ಆಯ್ದ ಕೆಲವರಿಂದ ಹಾಡಲು ಹೇಳುವುದು. ಉತ್ತಮವಾಗಿ ಹಾಡಿದವರನ್ನು ಅಭಿನಂದಿಸುವುದು.

- **ಉತ್ತರ ಬರೆಯುವುದು**

ವಿದ್ಯಾರ್ಥಿಗಳು ಹಾಡು, ಕವಿಯೆ, ಹಾಡು ಕವನವನ್ನು ಗಮನವಿಟ್ಟು ಓದಲಿ. ಕವನದ ಆಶಯವನ್ನು ಗ್ರಹಿಸಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಚರ್ಚಿಸಿ ಉತ್ತರವನ್ನು ಬರೆಯಲಿ. ಅದನ್ನು ತರಗತಿಯಲ್ಲಿ ಪ್ರಸ್ತುತಪಡಿಸಲಿ.

- **ಆಶಯ ಬರೆಯುವುದು**

ವಿದ್ಯಾರ್ಥಿಗಳು ಪದ್ಯವನ್ನು ಇನ್ನೊಮ್ಮೆ ಗಮನವಿಟ್ಟು ಓದಲಿ, ಒಂದೊಂದು ಗುಂಪಿಗೆ ಒಂದೊಂದು ಪದ್ಯವನ್ನು ನೀಡಿ ಆ ಪದ್ಯದ ಸಾಲುಗಳ ಆಶಯವನ್ನು ಗುಂಪಿನಲ್ಲಿ ಚರ್ಚಿಸಿ ಬರೆಯಲಿ. ಗುಂಪಿನಲ್ಲಿ ಒಬ್ಬರಂತೆ ಮಂಡಿಸಲಿ. ಬಿಟ್ಟು ಹೋದ ಅಂಶವಿದ್ದರೆ ಅದನ್ನು ಅಧ್ಯಾಪಕರ ಸಲಹೆಗಳೊಂದಿಗೆ ಪರಿಷ್ಕರಿಸಲಿ. ಉತ್ತಮವಾಗಿ ಆಶಯವನ್ನು ಬರೆದು ಮಂಡಿಸಿದ ಗುಂಪನ್ನು ಅಭಿನಂದಿಸುವುದು.

### ಕವನದ ಆಶಯವನ್ನು ಹೀಗೂ ಬರೆಯಬಹುದು

ಕವಿ ಕೆ.ಎಸ್. ನಿಸಾರ್ ಅಹಮದ್ ಅವರು ಹಾಡು, ಕವಿಯೆ, ಹಾಡು ಎಂಬ ಕವನದಲ್ಲಿ ಆಧುನಿಕ ಸಮಾಜದ ವಿವಿಧ ಮಜಲುಗಳ ಮೇಲೆ ಕ್ಷ - ಕಿರಣವನ್ನು ಬೀರಿದ್ದಾರೆ. ಕವಿಯ ಹಾಡು ಹೇಗೆ ಸಮಾಜಮುಖಿಯಾಗಿದ್ದು ಸಾಮಾಜಿಕ ಅಂಕುಡೊಂಕುಗಳ ಬಗ್ಗೆ ಪ್ರತಿ ಸ್ಪಂದಿಸಬೇಕು ಎಂಬುದನ್ನು ಮಾರ್ಮಿಕವಾಗಿ ಈ ಕವನದಲ್ಲಿ ಪಡಿ ಮೂಡಿಸಿದ್ದಾರೆ.

ಕವಿಯ ಬಾಳನ್ನು ಈ ಕವನದಲ್ಲಿ ಹಕ್ಕಿಗೆ ಹೋಲಿಸಿಕೊಂಡು ಬಹಳ ವೈಶಿಷ್ಟ ಪೂರ್ಣವಾಗಿ ಚಿತ್ರಿಸಿದ್ದಾರೆ. ಕವಿಯಾದವನು ತನ್ನ ಸ್ವಂತ ನೋವು, ನಲಿವು, ಹಿತಾಸಕ್ತಿಗಳು ಕಟ್ಟುಪಾಡುಗಳನ್ನೆಲ್ಲಾ ಬದಿಗೊತ್ತಿ ಸಮಾಜದ ನೋವನ್ನು ತನ್ನ ನೋವೆಂದು ಸಮಾಜದ ಹಿತ ತನ್ನ ಹಿತವೆಂದು ತಿಳಿದು ಅದಕ್ಕೆ ಪ್ರತಿಸ್ಪಂದಿಸಬೇಕು. ತನ್ನೆಲ್ಲ ಬಯಕೆಗಳನ್ನು ಪೂರೈಸುವ ಗೂಡಿನ ಬೆಚ್ಚನೆಯ ರಕ್ಷಾ ಕವಚದಿಂದ ಹೊರಬಂದು ಸ್ವಚ್ಛಂದವಾಗಿ ಗರುಡನಂತೆ ವಿಶಾಲ ದೃಷ್ಟಿಯಿಂದ ನಾಡಿ ನುದ್ದಗಲಕ್ಕೂ ಸಂಚರಿಸಿ ಜನರ ನೋವು ನಲಿವಿಗೆ ದನಿಗೂಡಿಸಬೇಕೆಂದು ಕರೆನೀಡಿದ್ದಾರೆ.

ಆಧುನಿಕ ಸಮಾಜದ ಮನುಷ್ಯನಲ್ಲಿ ತುಂಬಿರುವ ಸ್ವಾರ್ಥ, ದುರಾಸೆ, ಪರಸ್ಪರ ಕಿತ್ತು ತಿನ್ನುವ ವಿಕೃತ ಮನೋಭಾವ ಅನಾಗರಿಕತೆಯನ್ನು ಜಗತ್ತಿಗೆ ಸಾರಿ ಹೇಳುವ ಹಾಡನ್ನು ಹಾಡು ಎಂದು ಕವಿ ಇಲ್ಲಿ ಉಲ್ಲೇಖಿಸಿದ್ದಾರೆ.

ತಲತಲಾಂತರಗಳಿಂದ ಹೆಣ್ಣಿನ ಮೇಲೆ ನಡೆಯುತ್ತಿರುವ ನಿರಂತರವಾದ ಶೋಷಣೆಯನ್ನು ಮಾಡುವ ಪಾತಕಿಗಳನ್ನು ಬಯಲಿಗೆಳೆಯುವ ತಂತ್ರವನ್ನು ಹೂಡಬೇಕೆಂದು ಬಹಳ ಸೊಗಸಾಗಿ ವರ್ಣಿಸಿದ್ದಾರೆ. ಸಮಾಜದ ಹಿತವನ್ನು ಕೆಡಿಸುವ ಜಾತಿ ಮತದ ಹೆಸರಿನಲ್ಲಿ ಅಮಾಯಕ ಜನರನ್ನು ಬಲಿಯಾಗಿಸಿ ಅಜ್ಞಾನದ ಅಂಧಕಾರದಲ್ಲಿ ಮೆರೆಯುತ್ತಿರುವ ಸ್ವಾರ್ಥಪರ ಜನತೆಗೆ ನಿನ್ನ ಹಾಡು ಮದ್ದು ಗುಂಡಾಗಿ ಪರಿಣಮಿಸಲಿ ಎಂದು ಹಾರೈಸುತ್ತಾರೆ. ಸಾಮಾಜಿಕ ಸ್ವಸ್ಥತೆಗೆ ಧಕ್ಕೆ ತರುವ ದುಷ್ಟ ಶಕ್ತಿಗಳ ಕೋಡು ಮುರಿಯಬೇಕೆನ್ನುವ ಕ್ರಾಂತಿಕಾರಿ ಮನೋಭಾವಕ್ಕೆ ಒತ್ತು ನೀಡುತ್ತಾರೆ.

ಕವಿ ಈ ಹಾಡಿನ ಮೂಲಕ ಸತ್ಯ, ನ್ಯಾಯ - ನೀತಿಗೆ ಒತ್ತನ್ನು ನೀಡುತ್ತಾ ಸುಳ್ಳು, ಅನ್ಯಾಯ, ಅನೀತಿಗಳ ವಿರುದ್ಧ ಪ್ರತಿಭಟಿಸುತ್ತಾ ಸಮಾಜದಲ್ಲಿ ತುಂಬಿರುವ ದುಷ್ಟರನ್ನು ನಿಗ್ರಹಿಸಲು ಹೋರಾಟದ ಹಾದಿ ಹಿಡಿಯುವ ಮೂಲಕ ಪಾಪದ ಕೊಡವನ್ನು ತೊಡೆದುಹಾಕುವ ಮಹಾಕಾರ್ಯದಲ್ಲಿ ತೊಡಗಬೇಕೆಂದು ಬಹಳ ಕಳಕಳಿಯಿಂದ ಕರೆ ನೀಡಿದ್ದಾರೆ.

ಒಟ್ಟಿನಲ್ಲಿ ಒಬ್ಬ ಕವಿಯಾದವನಿಗೆ ಇರಬೇಕಾದ ಸಾಮಾಜಿಕ, ನೈತಿಕ ಜವಾಬ್ದಾರಿಗಳನ್ನು ಈ ಕವನದ ಮೂಲಕ ಕವಿಯು ನೆನಪಿಸಿಕೊಳ್ಳುವಂತೆ ಮಾಡಿದ್ದಾರೆ.

- **ಸ್ವಾರಸ್ಯ ಬರೆಯುವುದು**

ವಿದ್ಯಾರ್ಥಿಗಳು ಹಾಡು, ಕವಿಯೆ, ಹಾಡು ಕವನದಲ್ಲಿ ಬಂದಿರುವ ಸ್ವಾರಸ್ಯಕರವಾದ ಸಾಲುಗಳನ್ನು ಗುರುತಿಸಲಿ. ಆ ಸಾಲುಗಳು ನೀಡುವ ವಿಶೇಷ ಅರ್ಥವನ್ನು ಹೇಳಲಿ. ಪೂರಕ ಅಂಶಗಳನ್ನು ಅಧ್ಯಾಪಕರು ನೀಡುವುದು. ಅನಂತರ ಆ ಸಾಲುಗಳನ್ನು ಬರೆದು ಅವುಗಳ ಸ್ವಾರಸ್ಯ ಬರೆಯಲು ಹೇಳುವುದು.

ಜಗ ಕಳೆಯಲಿ ಖಳರ ಹೊರೆ;

ಮೊರೆದುಕ್ಕಿಸು ಕ್ರಾಂತಿ ನೆರೆ.

ಕವಿ ಕೆ.ಎಸ್.ನಿಸಾರ್ ಅಹಮದ್ ಅವರ ಹಾಡು, ಕವಿಯೆ, ಹಾಡು ಎಂಬ ಕವನದ ಈ ಸಾಲುಗಳಲ್ಲಿ ಸಮಾಜದಲ್ಲಿ ನಿರಂತರವಾಗಿ ನಡೆಯುತ್ತಿರುವ ಅನ್ಯಾಯ, ಅನಾಚಾರಗಳ ವಿರುದ್ಧ ಪ್ರತಿಭಟಿಸುತ್ತಾ, ಕವಿ ಜಗತ್ತಿನಲ್ಲಿ ತುಂಬಿರುವ ಈ ರೀತಿಯ ಕೆಟ್ಟ ಗುಣಗಳನ್ನು ತೊಡೆದು ಹಾಕಬೇಕು ಎನ್ನುವುದನ್ನು ಬಹಳ ಸ್ವಾರಸ್ಯಪೂರ್ಣವಾಗಿ ತಿಳಿಸಿದ್ದಾರೆ. ಸಮಾಜದಲ್ಲಿ ತುಂಬಿರುವ ಖಳರು ಎಂದರೆ ದುಷ್ಟರನ್ನು ನಿಗ್ರಹಿಸಲು ಹೋರಾಟದ ಹಾದಿಯನ್ನು ಹಿಡಿಯುವ ಮಹತ್ಕಾರ್ಯದಲ್ಲಿ ತೊಡಗಬೇಕು. ಆ ಮೂಲಕ ಜಗತ್ತಿನ ಪಾಪದ ಕೊಡವನ್ನು ತೊಳೆಯಲು ಸಾಧ್ಯ ಎಂಬುದನ್ನು ಕವಿ ಈ ಸಾಲುಗಳಲ್ಲಿ ಬಹಳ ಮಾರ್ಮಿಕವಾಗಿ ತಿಳಿಸುತ್ತಾರೆ.

- **ಸಮರ್ಥಿಸಿ ಬರೆಯುವುದು**

ಕಥೆ, ಕವನ, ಪ್ರಬಂಧ ಮುಂತಾದವುಗಳ ಶೀರ್ಷಿಕೆಗಳ ಔಚಿತ್ಯ ಕುರಿತು ವಿದ್ಯಾರ್ಥಿಗಳು ತಿಳಿದಿರುವರು. ಅದೇ ರೀತಿ ಹಾಡು, ಕವಿಯೆ, ಹಾಡು ಎನ್ನುವ ಶೀರ್ಷಿಕೆಯು ಈ ಕವನಕ್ಕೆ ಎಷ್ಟರ ಮಟ್ಟಿಗೆ ಒಪ್ಪುತ್ತದೆ? ಎಂದು ಗುಂಪಿನಲ್ಲಿ ಚರ್ಚಿಸಲಿ. ನಂತರ ತಮ್ಮ ಪುಸ್ತಕದಲ್ಲಿ ಬರೆದು ಮಂಡಿಸಲಿ. ಉತ್ತಮವಾಗಿ ಬರೆದವರನ್ನು ಅಭಿನಂದಿಸುವುದು.

**ಸಮರ್ಥಿಸಿ ಹೀಗೂ ಬರೆಯಬಹುದು**

ಹಾಡು, ಕವಿಯೆ, ಹಾಡು ಎಂಬ ಕವನಕ್ಕೆ 'ಸಂಕ್ರಾಂತಿ' ಎಂಬ ಶೀರ್ಷಿಕೆ ಸರಿ ಹೊಂದುತ್ತದೆ. ಸಂಕ್ರಾಂತಿ ಎಂದರೆ ಒಳ್ಳೆಯ ಬದಲಾವಣೆ ಎಂದರ್ಥ. ಕವಿ ಈ ಕವನದುದ್ದಕ್ಕೂ ಸ್ತ್ರೀ ದೌರ್ಜನ್ಯದಿಂದ ಮೊದಲುಗೊಂಡು ಸಮಾಜದಲ್ಲಿರುವ ವಿವಿಧ ಪಿಡುಗುಗಳ ವಿರುದ್ಧ ಧ್ವನಿ ಎತ್ತಿದ್ದಾರೆ. ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ಬಯಸುತ್ತಿದ್ದಾರೆ. ಆದುದರಿಂದ ಈ ಕವನಕ್ಕೆ ಸಂಕ್ರಾಂತಿ ಎಂಬ ಶೀರ್ಷಿಕೆ ಸೂಕ್ತವೆನಿಸುತ್ತದೆ.

ಮತ್ತೊಂದು ಶೀರ್ಷಿಕೆ: **ಪ್ರತಿಧ್ವನಿ**

ಈ ರೀತಿಯಲ್ಲಿ ಸೂಕ್ತವಾದ ಬೇರೆ ಬೇರೆ ಶೀರ್ಷಿಕೆಗಳನ್ನು ನೀಡಿ ಸಮರ್ಥಿಸಿ ಬರೆಯಲಿ.

- **ಪದ ಬದಲಾಯಿಸಿ ಬರೆಯುವುದು**

ಮಕ್ಕಳು ಚಟುವಟಿಕೆಯಲ್ಲಿ ನೀಡಲಾದ ಕವನದ ಸಾಲುಗಳನ್ನು ಓದಲಿ. ಬಳಿಕ ಅಡಿಗೆರೆ ಎಳೆದ ಪದಗಳಿಗೆ ಸಮಾನಾರ್ಥ ಪದಗಳನ್ನು ಬರೆಯಲು ಹೇಳುವುದು. ಅತಿ ಹೆಚ್ಚು ಸಮಾನಾರ್ಥ ಪದಗಳನ್ನು ಬರೆದ ವಿದ್ಯಾರ್ಥಿಯನ್ನು ಅಭಿನಂದಿಸುವುದು. ಬಳಿಕ ಅಧ್ಯಾಪಕರ ಮೇಲ್ನೋಟದಲ್ಲಿ ಸೂಕ್ತವಾದ ಪದಗಳನ್ನು ಆಯ್ದುಕೊಂಡು ಕವನವನ್ನು ಪುನಃ ರಚಿಸುವುದು.

**ಉದಾಹರಣೆಗೆ :**

ಕಣಜ - ಪತ್ತಾಯ, ಕದಿಕೆ......

ಮನುಜ - ಮನುಷ್ಯ, ಮಾನವ....

ಪರಿ - ರೀತಿ , ಬಗೆ.....

ಕಾಡು - ವನ, ಬನ.....

- **ಪ್ರಬಂಧ ಬರೆಯುವುದು**

ಆಧುನಿಕ ಸಮಾಜದಲ್ಲಿ ಮಹಿಳೆಯರ ಸಾಧನೆ ಎಂಬ ವಿಚಾರವಾಗಿ ವಿದ್ಯಾರ್ಥಿಗಳು ಚರ್ಚಿಸಲಿ. ಘಟಕದ ಆರಂಭದ ಪ್ರವೇಶ ಚಟುವಟಿಕೆಯಲ್ಲಿ ನೀಡಿರುವಂತೆ ಮಹಿಳೆ ಎಂದು ನಾನಾ ಕ್ಷೇತ್ರಗಳಲ್ಲಿ ಮಹತ್ತರ ಸಾಧನೆಯನ್ನು ಮಾಡಿದ್ದಾಳೆ. ಈ ವಿಚಾರವಾಗಿ ವಿದ್ಯಾರ್ಥಿಗಳು ಗುಂಪಿನಲ್ಲಿ ಕುಳಿತು ಪ್ರಬಂಧವನ್ನು ತಯಾರಿಸಲಿ. ಬಿಟ್ಟು ಹೋದ ಅಂಶಗಳಿದ್ದಲ್ಲಿ ಅಧ್ಯಾಪಕರ ನೆರವಿನೊಂದಿಗೆ ಪುನಃ ಪರಿಷ್ಕರಿಸಿ ಬರೆಯಲಿ. ಉತ್ತಮವಾಗಿ ಪ್ರಬಂಧ ಬರೆದು ಮಂಡಿಸಿದ ಗುಂಪನ್ನು ಅಭಿನಂದಿಸುವುದು.

ಪ್ರಬಂಧದ ಸ್ವರೂಪವನ್ನು ಒಳಗೊಂಡಿರಲಿ.

- ಶೀರ್ಷಿಕೆ
- ಪೀಠಿಕೆ
- ವಿಷಯ ವಿಸ್ತಾರ
- ಭಾಷಾ ಶೈಲಿ
- ಸಮಗ್ರತೆ
- ಮುಕ್ತಾಯ

.....ಇತ್ಯಾದಿ ಅಂಶಗಳನ್ನು ಒಳಗೊಂಡಿರಲಿ .

## ಪ್ರಬಂಧವನ್ನು ಹೀಗೂ ಬರೆಯಬಹುದು

### ಆಧುನಿಕ ಸಮಾಜದಲ್ಲಿ ಮಹಿಳೆಯರ ಸಾಧನೆ

ಸೃಷ್ಟಿಯ ಮೂಲ ಸ್ತ್ರೀಯಾಗಿದ್ದಾಳೆ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಗೆ ಮಹತ್ತರವಾದ ಗೌರವ ಸ್ಥಾನಮಾನಗಳಿರುವುದನ್ನು ಗುರುತಿಸಬಹುದಾಗಿದೆ. ಹೆಣ್ಣು ಎಂದರೆ ವಿಶಿಷ್ಟ ಶಕ್ತಿಗಳ ಸಂಗಮ. ಮಮತೆ, ಕರುಣೆ, ವಾತ್ಸಲ್ಯ, ಅಕ್ಕರೆ ಮತ್ತು ಭೂಮಿ ತೂಕದ ತಾಳ್ಮೆಯುಳ್ಳ ಸ್ತ್ರೀ ಒಂದು ಪ್ರಬಲ ಶಕ್ತಿ ಎನ್ನುವುದರಲ್ಲಿ ಎರಡು ಮಾತಿಲ್ಲ.

ನಮ್ಮ ಸಮಾಜದಲ್ಲಿ ಮಹಿಳೆಯರು ತಮ್ಮ ಹುಟ್ಟಿನಿಂದ ಜೀವನದ ಕೊನೆಯವರೆಗೂ ವಿವಿಧ ಮಹತ್ವದ ಪಾತ್ರಗಳನ್ನು ನಿರ್ವಹಿಸುತ್ತಾರೆ. ಅದರಲ್ಲೂ ಪ್ರಮುಖವಾಗಿ ಸಹೋದರಿಯಾಗಿ, ಮಡದಿಯಾಗಿ ಮತ್ತು ತಾಯಿಯಾಗಿ ಮಹತ್ತರ ಜವಾಬ್ದಾರಿಗಳನ್ನು ಸಮಯೋಚಿತವಾಗಿ ಹಾಗೂ ಸಮರ್ಥವಾಗಿ ನಿಭಾಯಿಸುತ್ತಾಳೆ. ಇದೀಗ ಭಾರತ ಸರಕಾರವು ಹಲವಾರು ನಿಯಮಗಳು ಮತ್ತು ನಿಬಂಧನೆಗಳನ್ನು ಜಾರಿಗೊಳಿಸುವ ಮೂಲಕ ಮಹಿಳಾ ಸಬಲೀಕರಣದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಹೆಣ್ಣು ಭ್ರೂಣಹತ್ಯೆ, ವರದಕ್ಷಿಣೆ ಸಾವು, ಬಾಲ್ಯ ವಿವಾಹ, ಕೌಟುಂಬಿಕ ದೌರ್ಜನ್ಯ, ಬಾಲಕಾರ್ಮಿಕತೆ, ಲೈಂಗಿಕ ಕಿರುಕಳ ಇತ್ಯಾದಿ ಪುರಾತನ ಕಾಲದ ಪ್ರವೃತ್ತಿಗಳನ್ನು ಸರಕಾರವು ನಿಷೇಧಿಸಿದ್ದರಿಂದ ಇಂದು ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ ನಿಜವಾಗಿಯೂ ಸುಧಾರಿಸಿದೆ.

ಭಾರತದಲ್ಲಿ ಮಹಿಳೆಯು ಪುರುಷರಷ್ಟೇ ಸಮರ್ಥವಾಗಿ ಹಿಂದಿಗಿಂತಲೂ ಇಂದು ಹೆಮ್ಮರವಾಗಿ ಬೆಳೆದು ನಿಂತಿದ್ದಾಳೆ. ಇಂದು ಜಾಗತಿಕ ಮಟ್ಟದಲ್ಲಿ ಮಹಿಳೆ ಒಂದು ರತ್ನವಾಗಿ ಹೊಳೆಯುತ್ತಿದ್ದಾಳೆ. ಪುರುಷರೇ ಅಧ್ಯಕ್ಷ ಗಾದಿ ಏರುತ್ತಿದ್ದ ದೇಶಗಳಲ್ಲಿ ನಾವು ಪುರುಷರಿಗಿಂತ ಏನು ಕಮ್ಮಿ ಇಲ್ಲ ಎಂದು ಅಧ್ಯಕ್ಷ ಸ್ಥಾನವನ್ನು ಏರಿ ತೋರಿಸಿ ಉತ್ತಮವಾದ ಆಡಳಿತ ನಡೆಸಿದ್ದಾರೆ. ಪ್ರಾಚೀನ ಕಾಲದಲ್ಲಿ ಬರೀ ಅಡುಗೆ ಮನೆಗೆ ಮೀಸಲಾಗಿ ತನ್ನ ಸರ್ವಸ್ವವನ್ನೆಲ್ಲ ನಾಲ್ಕು ಗೋಡೆಗಳ ನಡುವೆಯೇ ಜೀವಿಸುತ್ತಿದ್ದವಳು ಇಂದು ಆಕಾಶದಲ್ಲಿ ಹಾರಾಡುತ್ತಿದ್ದಾಳೆ. ಗಡಿಯಲ್ಲಿ ಶತ್ರುಗಳ ಜೊತೆ ಕಾದಾಡುತ್ತಿದ್ದಾಳೆ.

ಪ್ರಕೃತಿಗೂ ಸ್ತ್ರೀಗೂ ಅವಿನಾಭಾವ ಸಂಬಂಧವಿದೆ. ಈಕೆ ಭೂಮಿಯಾಗಿ, ಮುಗಿಲಾಗಿ, ಮೇರು ಪರ್ವತವಾಗಿ ಬೆಳೆದು ನಿಂತಿದ್ದಾಳೆ. ಹಾಗಾಗಿ ಸ್ತ್ರೀಯನ್ನು ಸಮೃದ್ಧಿಯ ಸಂಕೇತವೆಂದು ಪರಿಭಾವಿಸಲಾಗಿದೆ. ಮಹಿಳೆ ಇಂದು ಇಷ್ಟು ಯಶಸ್ವಿಯಾಗಲು ಮುಖ್ಯ ಕಾರಣ ಶಿಕ್ಷಣ. ಇದರಿಂದಾಗಿ ಹೆಣ್ಣೊಬ್ಬಳು ಕಲಿತು ತನ್ನ ಸ್ವಂತ ಬಲದಿಂದ ಬದುಕುವಂತವಳಾಗಿದ್ದಾಳೆ. ಇಂದು ಮಹಿಳೆ ಕೈಯಾಡಿಸದ ಕ್ಷೇತ್ರಗಳೇ ವಿರಳ. ಮಾತೆಯಾಗಿ, ರಾಣಿಯಾಗಿ, ರಾಜಕಾರಣಿಯಾಗಿ, ಅಧ್ಯಕ್ಷೆಯಾಗಿ, ಗಗನಯಾತ್ರಿಕಳಾಗಿ, ಶಿಕ್ಷಕಿಯಾಗಿ, ವೈದ್ಯಯಾಗಿ, ವಿಜ್ಞಾನಿಯಾಗಿ ಪೊಲೀಸಾಗಿ, ಸಾಹಿತಿಯಾಗಿ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ತನ್ನದೇ ಆದ ಸಾಧನೆಯನ್ನು ಮೆರೆದಿದ್ದಾಳೆ. ಆ ಮೂಲಕ ಸಮಾಜದ ಮುಖ್ಯ ವಾಹಿನಿಯಲ್ಲಿ ಪ್ರಬಲ ಶಕ್ತಿಯಾಗಿ ಬೆಳೆದು ನಿಂತಿದ್ದಾಳೆ.

ಒಟ್ಟಿನಲ್ಲಿ ಹೇಳುವುದಾದರೆ ಹೆಣ್ಣೊಬ್ಬಳು ಕಲಿತರೆ ಇಡೀ ಸಮಾಜವೇ ಕಲಿತಂತೆ. ಆಧುನಿಕತೆಯ ಮಗ್ಗುಲಲ್ಲಿ ನಿಲ್ಲುವುದಾದರೆ ಇಂದಿನ ಸಮಾಜದಲ್ಲಿ ರಾಜಕೀಯವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸ್ತ್ರೀಯರು ಹೆಚ್ಚು ಸಬಲರಾಗಿದ್ದಾರೆ. ಸ್ತ್ರೀ 'ಅಬಲೆಯಲ್ಲ ಸಬಲೇ' ಎಂದು ಜಗತ್ತಿಗೆ ತೋರಿಸಿಕೊಟ್ಟಿದ್ದಾಳೆ.

- **ಟಿಪ್ಪಣಿ ಬರೆಯುವುದು**

ವಿದ್ಯಾರ್ಥಿಗಳನ್ನು ನಾಲ್ಕು ಗುಂಪುಗಳಾಗಿ ಮಾಡುವುದು. ಪ್ರತಿಯೊಂದು ಗುಂಪಿನವರು ಆಕೆ ಎಂಬ ಕವನವನ್ನೊದಿ ಅದರ ಆಶಯವನ್ನು ಮನದಟ್ಟಾಗಿಸಿಕೊಂಡು ತಮ್ಮ ಅಭಿಪ್ರಾಯಗಳೊಂದಿಗೆ ಟಿಪ್ಪಣಿ ಬರೆಯಲಿ. ತರಗತಿಯಲ್ಲಿ ಮಂಡಿಸುವುದು. ಬಿಟ್ಟು ಹೋದ ಅಂಶಗಳನ್ನು ಅಧ್ಯಾಪಕರ ನೆರವಿನೊಂದಿಗೆ ಪರಿಷ್ಕರಿಸಿ ಬರೆಯುವುದು. ಉತ್ತಮ ರೀತಿಯಲ್ಲಿ ಬರೆದು ಮಂಡಿಸಿದ ಗುಂಪನ್ನು ಅಭಿನಂದಿಸುವುದು.

'ಆಕೆ' ಎಂಬ ಕವನದಲ್ಲಿ ಸ್ತ್ರೀ ಮಹತ್ವವನ್ನು ಹೇಗೆ ವರ್ಣಿಸಲಾಗಿದೆ? ವಿಶ್ಲೇಷಿಸಿ ತಮ್ಮ ಅಭಿಪ್ರಾಯಗಳೊಂದಿಗೆ ಟಿಪ್ಪಣಿ ಬರೆಯಲಿ.

ಅನಂತ ಕುಣಿಗಲ್ ಅವರ 'ಆಕೆ' ಎಂಬ ಕವನವು ತಾಯಿಯ ಸುಂದರ ಚಿತ್ರಣವನ್ನು ನಮ್ಮ ಮುಂದಿಡುತ್ತದೆ. ತಾಯಿಯಾದವಳು ಅಕ್ಕರೆಯಿಂದ ಎಲ್ಲವನ್ನೂ, ಎಲ್ಲರನ್ನೂ ಸಾಕಿ ಸಲಹುತ್ತಾಳೆ. ಮಮತಾ ಪೂರ್ಣವಾದ ಹೃದಯ ಆಕೆಯದ್ದು. ಅಮ್ಮ ತನ್ನ ಕರುಳಿನ ಕುಡಿಯನ್ನು ಬಹಳ ನಯನಾಜೂಕಿನಿಂದ 9 ತಿಂಗಳುಗಳ ಕಾಲ ಎಡೆಬಿಡದೆ

ಕಾಯುತ್ತಾಳೆ. ತನ್ನೆಲ್ಲಾ ನೋವನ್ನು ಬದಿಗೊತ್ತಿ ತನ್ನ ಕುಡಿಯನ್ನು ಬೆಳೆಸುವಲ್ಲಿ ತನ್ನನ್ನು ತಾನೇ ಮರೆಯುತ್ತಾಳೆ. ವಾತ್ಸಲ್ಯಮಯಿಯಾದ ಹೆಣ್ಣು ಅಕ್ಕ-ತಂಗಿಯಾಗಿ, ಸ್ನೇಹಿತೆಯಾಗಿ, ಪ್ರಿಯತಮೆಯಾಗಿ ವಿವಿಧ ಪಾತ್ರಗಳನ್ನು ನಿಭಾಯಿಸುತ್ತಾಳೆ. ಕೊನೆಗೆ ಎಲ್ಲವನ್ನೂ ನಿಭಾಯಿಸುವ ಮಾತೆಯಾಗಿ ತೋರುವಳು. ಅಮ್ಮನ ಮಡಿಲೇ ಹಾಗೆ, ಎಲ್ಲಾ ನೋವನ್ನೂ ಮರೆಸುವ ವಿಶಿಷ್ಟ ಶಕ್ತಿಯಾಗಿ ಜೀವನದುದ್ದಕ್ಕೂ ಕಂಗೊಳಿಸುವಳು.ಎಲ್ಲರ ಮನದಲ್ಲೂ ಸದಾ ಕಾಲ ಅಚ್ಚೊತ್ತಿ ನೆಲೆನಿಲ್ಲುವಳು.

## ಪೊಲೀಸ್ ಪುಟ್ಟಮ್ಮ

'ಪೊಲೀಸ್ ಪುಟ್ಟಮ್ಮ' ಕಥೆಯನ್ನು ವಿದ್ಯಾರ್ಥಿಗಳು ಸರದಿ ಪ್ರಕಾರ ಗಟ್ಟಿಯಾಗಿ ಓದಲಿ. ಅನಂತರ ಮೌನ ಓದಿನ ಮೂಲಕ ಪಾಠವನ್ನು ಅರ್ಥಮಾಡಿಕೊಳ್ಳಲು ಅವಕಾಶ ಕೊಡುವುದು. ಓದುವಾಗ ಕ್ಲಿಷ್ಟವೆನಿಸುವ ಪದಗಳನ್ನು ಗುರುತಿಸಿ, ಅರ್ಥಕೋಶದ ಸಹಾಯದಿಂದ ನವೀನ ಪದಗಳಿಗೆ ಅರ್ಥವನ್ನು ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ತಪ್ಪಿಲ್ಲದೆ ಬರೆದು ಮಂಡಿಸಿದವರನ್ನು ಅಧ್ಯಾಪಕರು ಅಭಿನಂದಿಸುವುದು.

- **ಉತ್ತರಿಸುವುದು**

ಪೊಲೀಸ್ ಪುಟ್ಟಮ್ಮ ಪಾಠ ಭಾಗವನ್ನು ಮಕ್ಕಳು ಓದಿ ಆಶಯಗ್ರಹಿಸಿಕೊಂಡ ಅನಂತರ ಕೊಟ್ಟಿರುವ ಪ್ರಶ್ನೆಗಳಿಗೆ ಪ್ರತಿಯೊಬ್ಬರೂ ಉತ್ತರ ಬರೆಯಲಿ. ಆ ಬಳಿಕ ಗುಂಪಿನಲ್ಲಿ ಕುಳಿತು ಪರಿಷ್ಕರಿಸಲಿ. ಗುಂಪಿನಿಂದ ಒಬ್ಬರಂತೆ ತರಗತಿಯಲ್ಲಿ ಮಂಡಿಸಲಿ. ಉತ್ತಮವಾಗಿ ಬರೆದು ಮಂಡಿಸಿದ ಗುಂಪನ್ನು ಅಭಿನಂದಿಸುವುದು.

- **ಪಾತ್ರ ಚಿತ್ರಣ ಮಾಡುವುದು**

ಪೊಲೀಸ್ ಪುಟ್ಟಮ್ಮ ಕಥೆಯಲ್ಲಿ ಬರುವ ಪ್ರಮುಖ ಪಾತ್ರಗಳು ಯಾವುವು? ಎಂಬುದಾಗಿ ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವುದು. ಆ ಪಾತ್ರಗಳಲ್ಲಿ ನಿಮಗಿಷ್ಟವಾದ ಪಾತ್ರ ಯಾವುದು? ಆ ಪಾತ್ರ ಯಾಕೆ ಇಷ್ಟವಾಯಿತು? ಎಂದು ಕೇಳುವುದು. ಅನಂತರ ಆ ಪಾತ್ರದ ವ್ಯಕ್ತಿತ್ವವು ಕಥೆಯಲ್ಲಿ ಹೇಗೆ ಮೂಡಿ ಬಂದಿದೆ ಎಂಬುದಾಗಿ ಅಧ್ಯಾಪಕರು ತಿಳಿಸುವುದು. ಬಳಿಕ ಗುಂಪಿನಲ್ಲಿ ಪಾತ್ರ ಚಿತ್ರಣವನ್ನು ಬರೆದು ಮಂಡಿಸಲು ಹೇಳುವುದು. ವಿದ್ಯಾರ್ಥಿಗಳು ಮಂಡಿಸಿದ ನಂತರ ಅಧ್ಯಾಪಕರ ನೆರವಿನೊಂದಿಗೆ ಬಿಟ್ಟುಹೋದ ಅಂಶಗಳನ್ನು ಸೇರಿಸಿ ತಮ್ಮ ಬರಹಗಳನ್ನು ಪರಿಷ್ಕರಿಸಿ ಬರೆಯಲಿ. ಪಾತ್ರ ಚಿತ್ರಣದ ಸ್ವರೂಪವನ್ನು ಒಳಗೊಂಡಿರಲಿ.

( ಪಾತ್ರದ ಗುಣ, ಸ್ವಭಾವ, ಭಾಷಾ ಶೈಲಿ ವಿಷಯ)

**ಪಾತ್ರ ಚಿತ್ರಣ ಹೀಗೂ ಬರೆಯಬಹುದು**

ಎಂ. ಕೆ. ಇಂದಿರಾರವರು ಬರೆದ 'ಪೊಲೀಸ್ ಪುಟ್ಟಮ್ಮ' ಎಂಬ ಕತೆಯಲ್ಲಿ ಬರುವ ಪ್ರಧಾನ ಪಾತ್ರವೇ ಪುಟ್ಟಮ್ಮ. ಪೊಲೀಸ್ ಇನ್ಸ್ಪೆಕ್ಟರ್ ನರಸಿಂಗರಾಯರ ಧರ್ಮಪತ್ನಿ. ಅರಶಿನ ಕುಂಕುಮಗಳ ಜೊತೆಗೆ ಧಾರಾಳವಾಗಿ ಒಡವೆಗಳನ್ನೂ ಹಾಕಿಕೊಂಡ ಲಕ್ಷಣದ ಮುತ್ತೈದೆ. ಸದಾ ಕ್ರಿಯಾಶೀಲಳಾದ ಪುಟ್ಟಮ್ಮ ಸಾಕಷ್ಟು ತಿಂಡಿ ತಿನಿಸುಗಳನ್ನು ಬಿಡುವಿಲ್ಲದೆ ಮಾಡುತ್ತಿದ್ದಳಲ್ಲದೆ ಪ್ರೀತಿಯಿಂದ ಇತರರಿಗೂ ನೀಡುತ್ತಿದ್ದಳು. ಅವಳು ಓರ್ವ ಧೀರ ಮಹಿಳೆ ಎಂಬುದಕ್ಕೆ ಪೊಲೀಸ್ ಇಲಾಖೆಗೆ ಸವಾಲಾಗಿದ್ದ ಕಿಕ್ಕೇರಿ ನಂಜನನ್ನು ಆಕೆ ತನ್ನ ಚಾಣಾಕ್ಷತನದಿಂದ ಬಂಧಿಸಿದ ರೀತಿ ಒಂದು ಉತ್ತಮ ನಿದರ್ಶನವಾಗಿದೆ. ತನ್ನ ಮನೆಗೆ ನುಗ್ಗಿದ ಕಳ್ಳರನ್ನು ಉಪಚರಿಸಿದ ಬಗೆ ಆಕೆಯ ಹೃದಯ ಶ್ರೀಮಂತಿಕೆಯನ್ನು ವ್ಯಕ್ತಪಡಿಸುತ್ತದೆ. ಕುಖ್ಯಾತ ದರೋಡೆಕೋರನಾದ ಕಿಕ್ಕೇರಿ ನಂಜನಿಗೆ ಗಲ್ಲು ಶಿಕ್ಷೆಯಾದಾಗ ಪುಟ್ಟಮ್ಮ ಬೇಜಾರು ಪಟ್ಟುಕೊಳ್ಳುತ್ತಾಳೆ. "ಪಾಪ, ನಾನೇ ಹೊಟ್ಟೆ ತುಂಬ ತಿಂಡಿ ಕೊಟ್ಟು, ನಾನೇ ಅವನ ಕಣ್ಣಿಗೆ ಮೆಣಸಿನ ಪುಡಿ ಹಾಕಿದೆ, ನಾನೇ ಅವನ್ನ ಸಾಯಿಸಿದ ಹಾಗಾಯ್ತು!" ಇದು ಪುಟ್ಟಮ್ಮನಲ್ಲಿ ಅಂತರ್ಗತವಾಗಿರುವ ಮಾನವೀಯ ಗುಣಗಳ ದ್ಯೋತಕವಾಗಿದೆ.

ಕಳ್ಳರನ್ನು ಹಿಡಿಯಬೇಕಾದದ್ದು ಪೊಲೀಸರ ಕರ್ತವ್ಯ. ಕುಖ್ಯಾತ ಕಳ್ಳನಾದ ಕಿಕ್ಕೇರಿ ನಂಜನನ್ನು ಹಿಡಿದು ಕೊಡುವುದರ ಮೂಲಕ ಪುಟ್ಟಮ್ಮ ಪೊಲೀಸ್ ಕರ್ತವ್ಯವನ್ನು ಮಾಡಿರುತ್ತಾಳೆ. ಆದ್ದರಿಂದ ಆಕೆ ಪೊಲೀಸ್ ಪುಟ್ಟಮ್ಮನೆಂದೇ ಖ್ಯಾತಿ ಪಡೆದಳು. ಒಟ್ಟಿನಲ್ಲಿ ಹೇಳುವುದಾದರೆ ಪುಟ್ಟಮ್ಮನ ಸಮಯಪ್ರಜ್ಞೆ, ಧೈರ್ಯ, ಸಾಹಸ ಪ್ರವೃತ್ತಿ ಜೊತೆಗೆ ಮಾನವೀಯತೆ ಮೈದುಂಬಿಕೊಂಡ ಮಹಿಳೆಯಾಗಿ ಪುಟ್ಟಮ್ಮ ಈ ಕಥೆಯಲ್ಲಿ ಚಿತ್ರಿತಳಾಗಿದ್ದಾಳೆ.

- **ಶಿಷ್ಟರೂಪಕ್ಕೆ ಪರಿವರ್ತಿಸಿ ಬರೆಯುವುದು**

ಗ್ರಾಮ್ಯಭಾಷೆ ಹಾಗೂ ಶಿಷ್ಟಭಾಷೆಗಳ ಕುರಿತು ವಿದ್ಯಾರ್ಥಿಗಳು ಹಿಂದಿನ ತರಗತಿಗಳಲ್ಲಿ ತಿಳಿದುಕೊಂಡಿರುವರಲ್ಲವೇ? ಈಗ ವಿದ್ಯಾರ್ಥಿಗಳು ಪಾಠ ಭಾಗದಲ್ಲಿ ಬಂದಿರುವ ಗ್ರಾಮ್ಯರೂಪದ ವಾಕ್ಯಗಳನ್ನು ಹೇಳಲಿ. ಅವುಗಳನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಬಳಿಕ ಅಧ್ಯಾಪಕರು ಅದನ್ನು ಶಿಷ್ಟ ರೂಪದಲ್ಲಿ ಬರೆಯಲು ಹೇಳುವುದು. ಕೆಲವರಿಂದ ಬರೆದದ್ದನ್ನು ಓದಿಸುವುದು. ನಂತರ ಬಿಟ್ಟು ಹೋದ ಅಂಶಗಳಿದ್ದಲ್ಲಿ ಉತ್ತಮಪಡಿಸಿ ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ. ಪಾಠದ ಕೊನೆಗೆ ಕೊಡಲಾದ ವಾಕ್ಯಗಳನ್ನು ಶಿಷ್ಟ ರೂಪಕ್ಕೆ ಪರಿವರ್ತಿಸುವುದು.

**ಶಿಷ್ಟ ರೂಪ :**

ಅಮ್ಮಾ! ನಿನ್ನ ಗಂಡ ಕಿಕ್ಕೇರಿ ನಂಜನನ್ನು ಹಿಡಿಯಲು ಹೋಗಿದ್ದಾನೆ. ನನಗೆ ಗೊತ್ತು ಇಬ್ಬರು ಪೊಲೀಸರನ್ನು ಮನೆಗೆ ಕಾವಲು ಹಾಕಿ ಹೋಗಿದ್ದಾನೆ. ಇಬ್ಬರು ಗಾಢವಾಗಿ ನಿದ್ದೆ ಹೊಡೆಯುತ್ತಿದ್ದಾರೆ. ಪಾಪ ಬೆಚ್ಚಗೆ ಮಲಗಿರಲಿ. ನೀನೇನಾದರೂ ಕೂಗಿ ಗೀಗಿ ಗಲಾಟೆ ಮಾಡಿದೆ ಅಂದರೆ ಇಲ್ಲಿದೆ ನೋಡು ಮಚ್ಚು!

- **ಸಂಭಾಷಣೆ ಬರೆಯುವುದು**

ಪೊಲೀಸ್ ಪುಟ್ಟಮ್ಮ ಕಥೆಯನ್ನು ಮಕ್ಕಳು ಗುಂಪಿನಲ್ಲಿ ಕುಳಿತು ಇನ್ನೊಮ್ಮೆ ಓದಲು ಹೇಳುವುದು. ಆಗ ಪಾಠದಲ್ಲಿ ಬಂದಿರುವ ಪಾತ್ರಗಳನ್ನು ಗುರುತಿಸಲಿ. ಬಳಿಕ ಆ ಪಾತ್ರಗಳ ನಡುವಿನ ಸಂಭಾಷಣೆಯ ಕುರಿತು ಲಘು ಚರ್ಚೆ ನಡೆಸುವುದು. ನಂತರ ಕಳ್ಳನನ್ನು ಹಿಡಿಯಲು ನರಸಿಂಗ ರಾಯರು ಮನೆಯಿಂದ ಹೊರಡುವ ಸಂದರ್ಭದಲ್ಲಿ ರಾಯರು ಮತ್ತು ಪೊಲೀಸ್ ಪುಟ್ಟಮ್ಮನವರೊಳಗೆ ನಡೆದ ಮಾತುಕತೆಯನ್ನು ಸಂಭಾಷಣೆ ರೂಪದಲ್ಲಿ ಬರೆಯಲಿ. ಕೆಲವರು ತರಗತಿಯಲ್ಲಿ ಮಂಡಿಸಲಿ. ಉತ್ತಮವಾಗಿ ಬರೆದು ಮಂಡಿಸಿದ ವಿದ್ಯಾರ್ಥಿಯನ್ನು ಅಭಿನಂದಿಸುವುದು.

**ಸಂಭಾಷಣೆ ಹೀಗೂ ಬರೆಯಬಹುದು**

ನರಸಿಂಗ ರಾಯರು : ಎಲೇ ಪುಟ್ಟಮ್ಮ! ಎಲ್ಲಿದ್ದೀಯೇ?

ಪುಟ್ಟಮ್ಮ : ಏನ್ರೀ ! ಹೇಳಿ ಏನ್ ವಿಷಯ.

ನರಸಿಂಗರಾಯರು : ಏನಿಲ್ಲ! ಅದೇನೆಂದರೆ ನಾನು ಇನ್ನೆರಡು ದಿನಗಳ ಕಾಲ ಮನೆಯಲ್ಲಿ ಇರುವುದಿಲ್ಲ.

ಪುಟ್ಟಮ್ಮ : ಯಾಕ್ರಿ! ಏನಾಯ್ತು? ನರಸಿಂಗ ರಾಯರು: ಹಂಗೇನಿಲ್ಲ ಕಣೆ! ಪೊಲೀಸ್ ಕೆಲಸವೆಂದರೆ ಹಂಗೆ ಅಲ್ವೇ?

ಪುಟ್ಟಮ್ಮ : ಅದು ಹೌದು.

ರಾಯರು : ಅದೇ ಕುಖ್ಯಾತ ದರೋಡೆಕೋರನಾದ ಕಿಕ್ಕೇರಿ ನಂಜನನ್ನು ಬಂಧಿಸಲು ಸಾಧ್ಯವಾಗದಿದ್ದರೂ ಹೆಚ್ಚಿನ ತನಿಖೆ ನಡೆಸಲೆಂದು ಸಾಹುಕಾರ ಚೆನ್ನಬಸಪ್ಪನವರ ಬಳಿಗೆ ಹೊರಟಿರುವೆ.

ಪುಟ್ಟಮ್ಮ : ಓಹೋ ಹೌದೇ!

ರಾಯರು : ನೀನೇನು ಹೆದರಬೇಡ. ನಿನ್ನ ರಕ್ಷಣೆಗಾಗಿ ಇಬ್ಬರು ಪೊಲೀಸರನ್ನು ಕಾವಲಿರಿಸಿದ್ದೇನೆ. ನಾನು ಬರುವುದು ಎರಡು ಮೂರು ದಿನಗಳ ಬಳಿಕ. ಅಲ್ಲಿಯವರೆಗೂ ರಾತ್ರಿ ನಿನ್ನ ಜೊತೆಗೆ ಯಾರಾದರೂ ಹೆಂಗಸರನ್ನು ಕರೆಯಿಸಿಕೋ.

ಪುಟ್ಟಮ್ಮ : (ಬೇಸರದಿಂದ) ಹೋಗಲೇ ಬೇಕಾ ....

ರಾಯರು : ಹೌದು. ನೀನೇನು ಭಯಪಡಬೇಡ. ಹೊರಗಡೆ ಪೊಲೀಸನವರು ಕಾವಲಿರುತ್ತಾರೆ. ಮನೆ ಕಡೆ ಜೋಪಾನ.

ಪುಟ್ಟಮ್ಮ : (ಮರು ಮಾತನಾಡದೆ) ತಲೆಯಾಡಿಸಿ ಜಗಲಿಯ ಕಂಬಕ್ಕೊರಗಿ ನಿಂತು ಬಿಟ್ಟಳು.

- ## ಪತ್ರ ಬರೆಯುವುದು

ಪೊಲೀಸ್ ಪುಟ್ಟಮ್ಮ ಪಾಠ ಭಾಗವನ್ನು ವಿದ್ಯಾರ್ಥಿಗಳು ಇನ್ನೊಮ್ಮೆ ಮೌನವಾಗಿ ಓದಲಿ. ಪಾಠದ ಆಶಯವನ್ನು ಬರೆದು ತರಗತಿಯಲ್ಲಿ ಮಂಡಿಸಲಿ. ಆ ಬಳಿಕ ಖಾಸಗಿ ಪತ್ರದ ಸ್ವರೂಪವನ್ನು ಚರ್ಚಿಸಿ ನೆನಪಿಸಿಕೊಳ್ಳುವುದು.

**ಪತ್ರದ ಸ್ವರೂಪ :**

- ಸ್ಥಳ
- ತಾರೀಕು
- ಸಂಬೋಧನೆ
- ಕ್ಷೇಮ ಸಮಾಚಾರ
- ವಿಷಯ ಮಂಡನೆ
- ಮುಕ್ತಾಯ
- ಸಹಿ
- ವಿಳಾಸಗಳು
- ..........................

ಇತ್ಯಾದಿ ವಿಚಾರಗಳನ್ನು ಒಳಗೊಂಡು 'ಪೊಲೀಸ್ ಪುಟ್ಟಮ್ಮ' ಪಾಠ ಭಾಗದ ಆಶಯವನ್ನು ವಿವರಿಸಿಕೊಂಡು ಗೆಳೆಯ/ ಗೆಳತಿಗೆ ಪತ್ರ ಬರೆಯಲಿ. ಆಯ್ದು ಕೆಲವರಿಂದ ಮಂಡಿಸಲು ಹೇಳುವುದು. ಬಿಟ್ಟು ಹೋದ ವಿಚಾರಗಳನ್ನು ಅಧ್ಯಾಪಕರ ಸಲಹೆಗಳೊಂದಿಗೆ ಪರಿಷ್ಕರಿಸಿ ಬರೆಯಲಿ. ಉತ್ತಮವಾಗಿ ಬರೆದು ಮಂಡಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸುವುದು.

- ## ಊಹಿಸಿ ಬರೆಯುವುದು

ಪೊಲೀಸ್ ಪುಟ್ಟಮ್ಮ ಕಥೆಯನ್ನು ವಿದ್ಯಾರ್ಥಿಗಳಲ್ಲಿ ಅನುಕ್ರಮವಾಗಿ ಹೇಳಿಸಿ ಕಥೆಯನ್ನು ನೆನಪಿಸುವುದು. ಬಳಿಕ ಕಥೆಯಲ್ಲಿ ಬರುವ ಪೊಲೀಸ್ ಪುಟ್ಟಮ್ಮ ಕಳ್ಳನನ್ನು ಬಂಧಿಸದೇ ಇದ್ದರೆ ಏನಾಗುತ್ತಿತ್ತು? ಎಂದು ಅಭಿಪ್ರಾಯವನ್ನು ಆಯ್ದ ಕೆಲವರಿಂದ ಹೇಳಿಸುವುದು. ಅದನ್ನು ಸಂಕ್ಷಿಪ್ತವಾಗಿ ಕರಿಹಲಗೆಯಲ್ಲಿ ಬರೆಯುವುದು. ಇವುಗಳ ಆಧಾರದಲ್ಲಿ ಕಥೆಯನ್ನು ವಿಸ್ತರಿಸಿ ಬರೆಯುವುದು. ಕೆಲವರು ಮಂಡಿಸುವುದು.

**ವಿದ್ಯಾರ್ಥಿಗಳಲ್ಲಿ ಈ ರೀತಿಯ ಅಭಿಪ್ರಾಯಗಳು ಮೂಡಿಬಂದಿರಬಹುದು**

- ಪೋಲಿಸ್ ಇಲಾಖೆ ಮೇಲೆ ಅವಿಶ್ವಾಸ ಮೂಡುವುದು......
- ಪುಟ್ಟಮ್ಮನ ಗಂಡ ಅಯೋಗ್ಯ ಅಧಿಕಾರಿ ಎಂಬ ಸಂದೇಹ.......
- ಪೊಲೀಸ್ ಪುಟ್ಟಮ್ಮನ ವಾತ್ಸಲ್ಯದಿಂದ ಕಳ್ಳನು ಮನ ಪರಿವರ್ತನೆಗೊಳ್ಳುತ್ತಿದ್ದ.......
- ....................
- ....................

ಈ ರೀತಿಯ ಘಟನೆಗಳನ್ನು ಮುಂದುವರಿಸಿ ಕಥಾ ರೂಪದಲ್ಲಿ ಬರೆದು ಸೂಕ್ತ ಶೀರ್ಷಿಕೆ ನೀಡಲಿ. ತರಗತಿಯಲ್ಲಿ ಮಂಡಿಸಲಿ. ಉತ್ತಮವಾಗಿ ಬರೆದು ಮಂಡಿಸಿದ ರಚನೆಗೆ ಅಭಿನಂದಿಸುವುದು. ತರಗತಿಯ ಎಲ್ಲಾ ರಚನೆಗಳನ್ನು ಒಟ್ಟಾಗಿಸಿ ಕಥಾಸಂಕಲನವನ್ನು ತಯಾರಿಸುವುದು.

- **ಲೇಖನ ಚಿಹ್ನೆಗಳನ್ನು ಅಳವಡಿಸುವುದು**

ವಾಕ್ಯಗಳನ್ನು ಬರೆಯುವಾಗ ಸರಿಯಾದ ಲೇಖನ ಚಿಹ್ನೆಗಳನ್ನು ಬಳಸುವುದರಿಂದ ಓದುಗನು ಬರವಣಿಗೆಯ ಸರಿಯಾದ ಅರ್ಥವನ್ನು ಗ್ರಹಿಸಬಹುದಲ್ಲದೆ, ಸರಿಯಾದ ರೀತಿಯಲ್ಲಿ ವಾಚನ ಮಾಡಲು ಸಾಧ್ಯ. ಬರವಣಿಗೆಯ ಸಂದರ್ಭದಲ್ಲಿ ಬಳಸುವ ವಿವಿಧ ಲೇಖನ ಚಿಹ್ನೆಗಳನ್ನು ಒಬ್ಬೊಬ್ಬ ವಿದ್ಯಾರ್ಥಿ ಹೇಳಲಿ. ಅಧ್ಯಾಪಕರು ಅದನ್ನು ಕರಿಹಲಗೆಯಲ್ಲಿನಮೂದಿಸಲಿ. ಆ ಬಳಿಕ ಪಾಠದ ಚಟುವಟಿಕೆಯಲ್ಲಿನೀಡಿರುವ ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆಗಳನ್ನು ಅಳವಡಿಸಲು ಹೇಳುವುದು. ಕೆಲವರು ಮಂಡಿಸಲಿ. ತಪ್ಪಿದ್ದಲ್ಲಿ ಅಧ್ಯಾಪಕರು ಸರಿಪಡಿಸಿ ಬರೆಯಲು ಸಹಕರಿಸುವುದು.

**ಲೇಖನ ಚಿಹ್ನೆಗಳನ್ನು ಹೀಗೆ ಅಳವಡಿಸಿ ಬರೆಯಬಹುದು**

ಮಹಾರಾಜರಿಗೆ ಚಾಮರ ಬೀಸುತ್ತಿದ್ದ ಸೇವಕರೊಬ್ಬರು,"ಮಹಾಸ್ವಾಮಿ ನನ್ನದು ಅಧಿಕ ಪ್ರಸಂಗವೆಂದು ನೀವು ಭಾವಿಸುವುದಿಲ್ಲವಾದರೆ, ನಾನು ಪ್ರಶ್ನೆಗೆ ಉತ್ತರಿಸಬಹುದೇ?"ಎಂದು ಕೇಳಿದರು.

- **ವಾಕ್ಯ ರಚನೆ ಮಾಡುವುದು**

ವಿದ್ಯಾರ್ಥಿಗಳಿಂದ ಪಾಠದ ಕೊನೆಯಲ್ಲಿ ನೀಡಲಾದ ವಾಕ್ಯ ರಚನೆ ಚಟುವಟಿಕೆಯಲ್ಲಿರುವ ವಾಕ್ಯಗಳನ್ನು ಕೆಲವರಿಂದ ಓದಿಸುವುದು. ಅಡಿಗೆರೆ ಎಳೆದ ಪದಗಳನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಬಳಿಕ ಆ ಪದಗಳ ಅರ್ಥವನ್ನು ಅರ್ಥಕೋಶದ ಸಹಾಯದಿಂದ ಕಂಡುಹಿಡಿಯಲಿ. ನಂತರ ಪದದ ಅರ್ಥ ಹಾಗೂ ವಾಕ್ಯದ ಸಮಗ್ರ ಆಶಯಕ್ಕನುಗುಣವಾಗಿ ಅಡಿಗೆರೆ ಎಳೆದ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯದಲ್ಲಿ ಪ್ರಯೋಗಿಸಲಿ. ಆಯ್ದ ಕೆಲವರಿಂದ ಮಂಡಿಸಲು ಹೇಳುವುದು. ಉತ್ತಮವಾಗಿ ವಾಕ್ಯ ರಚನೆ ಮಾಡಿ ಮಂಡಿಸಿದ ವಿದ್ಯಾರ್ಥಿಗಳನ್ನು

ಅಭಿನಂದಿಸುವುದು. ಪ್ರತಿಯೊಬ್ಬರು ಉತ್ತಮ ವಾಕ್ಯ ರಚನೆಗಳನ್ನು ಚಟುವಟಿಕೆಯಲ್ಲಿ ಬರೆಯಲಿ.

**ಸ್ವಂತ ವಾಕ್ಯ ರಚನಾ ಸಂದರ್ಭದಲ್ಲಿ ಗಮನಿಸಬೇಕಾದ ವಿಚಾರಗಳು :**

- ಪದಗಳ ಅರ್ಥವನ್ನು ಕಂಡುಕೊಳ್ಳುವುದು.
- ವಾಕ್ಯದ ಸಮಗ್ರ ಆಶ್ರಯವನ್ನು ತಿಳಿಯುವುದು.

ವಿದ್ಯಾರ್ಥಿಗಳು ಪಾಠ ಭಾಗದಿಂದ ಇನ್ನಷ್ಟು ಪದಗಳನ್ನು ಆಯ್ದು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಲಿ.

- **ಪ್ರಶ್ನೆ ತಯಾರಿಸುವುದು**

ವಿದ್ಯಾರ್ಥಿಗಳು ಚಟುವಟಿಕೆಯಲ್ಲಿ ನೀಡಿರುವ ಗದ್ಯಭಾಗವನ್ನು ಮೌನವಾಗಿ ಓದಲಿ. ಬಳಿಕ ಆಯ್ದ ಕೆಲವರಿಂದ ಗಟ್ಟಿಯಾಗಿ ಓದಿಸುವುದು. ಆ ಸಂದರ್ಭದಲ್ಲಿ ಮುಖ್ಯವಾದ ಆಶಯಗಳನ್ನು ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ. ಆ ಆಶಯಗಳು ಉತ್ತರವಾಗಿ ಬರುವಂತೆ ಸಾಕಷ್ಟು ಪ್ರಶ್ನೆಗಳನ್ನು ರಚಿಸಲು ಹೇಳುವುದು. ಇದಕ್ಕಾಗಿ ನಿರ್ದಿಷ್ಟ ಸಮಯವನ್ನು ನೀಡುವುದು. ನಿಗದಿತ ಸಮಯದೊಳಗೆ ಉತ್ತಮವಾಗಿ ಪ್ರಶ್ನೆಗಳನ್ನು ರಚಿಸಿ, ಮಂಡಿಸಿದವರನ್ನು ಅಭಿನಂದಿಸುವುದು. (ಕರ್ತೃ, ಕರ್ಮ, ಕ್ರಿಯಾ ಅನುಸಾರವಾಗಿ ಪ್ರಶ್ನೆ ತಯಾರಿಸಲಿ.)

- ಸುಸಂಬದ್ಧ ವಾಕ್ಯವಾಗಿರಬೇಕು.
- ಆಶಯವನ್ನು ಗ್ರಹಿಸಿಕೊಂಡು ಪ್ರಶ್ನೆ ತಯಾರಿಸಿರಬೇಕು.
- ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳು ಗದ್ಯ ಭಾಗದಲ್ಲಿರಬೇಕು.
- ..........................
- ..........................

ಇವುಗಳ ಆಧಾರದಲ್ಲಿ ವಿದ್ಯಾರ್ಥಿಗಳು ಪ್ರಶ್ನೆಗಳನ್ನು ತಯಾರಿಸಲಿ.

* * *

# 3. ಕಾಯಕವೇ ಕೈಲಾಸ

## ಮುನ್ನುಡಿ

ಕಾಯಕವೇ ಕೈಲಾಸ ಎನ್ನುವುದು ಕೆಲಸದ ಪ್ರಾಮುಖ್ಯವನ್ನು ತಿಳಿಸುವಂತಹ ಮಾತಾಗಿದೆ. ಕೆಲಸವು ಒಬ್ಬ ವ್ಯಕ್ತಿಯ ಸ್ವಭಾವ, ಅಂತರಾತ್ಮ ಮತ್ತು ಸಮಾಜದ ಅಭಿವೃದ್ಧಿಗೆ ಅತ್ಯಂತ ಅಗತ್ಯವಾದುದಾಗಿದೆ. ಮನುಷ್ಯ ತನ್ನ ಕೆಲಸದಲ್ಲಿ ನಿರತನಾದಾಗ ಅವನ ಮನಸ್ಸು ಅತ್ಯಂತ ಪ್ರಶಾಂತವಾಗಿರುತ್ತದೆ. ಕಾಯಕವು ಸಾಮಾಜಿಕ ಮತ್ತು ವೈಯುಕ್ತಿಕ ಹಿತದ ಉದ್ದೇಶದಿಂದ ಕೈಗೂಡಿದಾಗ ಅತ್ಯಂತ ಮಹತ್ವವನ್ನು ಪಡೆಯುತ್ತದೆ. ಕೆಲಸದಲ್ಲಿ ಶ್ರಮ ಹಾಗೂ ನಿಷ್ಠೆಯನ್ನು ನೀತಿಯ ಮೂಲಕ ಸಾಧಿಸಿದಾಗ ವ್ಯಕ್ತಿಯ ಸ್ಥಾನಮಾನ ಮತ್ತು ಗೌರವವು ವರ್ಧಿಸುತ್ತದೆ.

ಭಕ್ತಿ ಭಂಡಾರಿ ಬಸವಣ್ಣನವರು ಕಾಯಕ ತತ್ವದ ಪ್ರತಿಪಾದಕರಾಗಿದ್ದರು. ಮನುಷ್ಯ ಸುಖವಾಗಿರಬೇಕೆಂದು ಬಯಸುವುದು ಸಹಜ. ಆದರೆ ಸುಖ ಸಿಗಬೇಕಾದರೆ ಕಷ್ಟಪಟ್ಟು ದುಡಿಯಲೇಬೇಕು. ಕೆಲಸವನ್ನು ನಿಷ್ಠೆಯಿಂದ, ಆಸಕ್ತಿಯಿಂದ, ಉತ್ಸಾಹದಿಂದ ಮಾಡಿದಾಗ ಮಾತ್ರ ಅದರಿಂದ ಉತ್ತಮ ಫಲ ದೊರೆಯುತ್ತದೆ. ಮನುಷ್ಯ ಸೋಮಾರಿಯಾಗದೆ ಕರ್ಮ ವೀರನಾಗಬೇಕೆಂಬುದೇ ಇದರ ಉದ್ದೇಶ.

ಕೆಲಸ ಯಾವುದೇ ಆಗಿರಲಿ ಕೆಲಸದಲ್ಲಿ ತೃಪ್ತಿ ಬೇಕು. ಸಂತೃಪ್ತಿಯಿಂದ ಕೆಲಸ ಮಾಡಿದರೆ ಮಾತ್ರ ಉತ್ತಮ ಫಲ ದೊರೆಯಲು ಸಾಧ್ಯ. ಘಟಕದ ಆರಂಭದಲ್ಲಿ 'ಸಂತೃಪ್ತಿ' ಎನ್ನುವ ಲೇಖನವನ್ನು ಕೊಡಲಾಗಿದೆ. ಶ್ರಮ ಹಾಗೂ ದುಡಿಮೆಯ ಮಹತ್ವದ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವುದು ಅಗತ್ಯ. ಈ ನಿಟ್ಟಿನಲ್ಲಿ ಘಟಕದುದಕ್ಕೂ ಕಾಯಕ ತತ್ವಕ್ಕೆ ಸಂಬಂಧಿಸಿದ ಸಾಹಿತ್ಯ ಕೃತಿಗಳನ್ನು ನೀಡಲಾಗಿದೆ.

ಘಟಕದ ಆರಂಭದಲ್ಲಿ ಅಗ್ನಿಶಾಮಕರ ಕಾರ್ಯವೈಖರಿಯನ್ನು ತಿಳಿಸುವ ಕವನವನ್ನು ನೀಡಲಾಗಿದೆ. ಉರಿಯುತ್ತಿರುವ ಬೆಂಕಿಯನ್ನು ನಂದಿಸಲು ಶ್ರಮಿಸುವರು ಅಗ್ನಿಶಾಮಕರು. ಸಮಾಜದಲ್ಲಿ ಇಂದು ನಡೆಯುತ್ತಿರುವಂತಹ ಕೋಮುದಳ್ಳುರಿ, ಜಾತೀಯತೆ, ವರ್ಗೀಯತೆ, ದ್ವೇಷ ಮುಂತಾದವುಗಳ ಶಮನಕ್ಕೆ ಪ್ರೀತಿಯೆಂಬ ಗಂಗೆಯ ಅಗತ್ಯವಿದೆ. ಈ ಪ್ರೀತಿಯ ಗಂಗೆಯನ್ನು ಹರಿಸುವ ಅಗ್ನಿಶಾಮಕರು ನಾವಾಗಬೇಕು ಎಂಬುದನ್ನು ಕವಿ ಡಾ| ಸಿದ್ದಲಿಂಗಯ್ಯನವರು 'ಅಗ್ನಿಶಾಮಕರು' ಕವನದ ಮೂಲಕ ಸ್ಪಷ್ಟಪಡಿಸಿದ್ದಾರೆ.

ಎರಡನೇ ಪಾಠವಾಗಿ ಮಕ್ಕಳ ಸಾಹಿತಿಯೆಂದೇ ಪ್ರಸಿದ್ಧರಾದ ಪ.ರಾಮಕೃಷ್ಣ ಶಾಸ್ತ್ರಿ ಅವರ 'ಕಲ್ತಪ್ಪದ ಹೋಟೆಲ್' ಎಂಬ ಲಲಿತ ಪ್ರಬಂಧವನ್ನು ನೀಡಲಾಗಿದೆ. ಸಿದ್ಧ ಆಹಾರಕ್ಕೆ ಮೊರೆ ಹೋಗುತ್ತಿರುವ ಇಂದಿನ ಜನಾಂಗ ಅನೇಕ ರೋಗರುಜಿನಗಳಿಗೆ ತುತ್ತಾಗುತ್ತಿರುವುದು ಸಾಮಾನ್ಯ. ಆದರೂ ಎಲ್ಲಿಯೋ ಕೆಲವೊಂದು ಕಡೆ ಆರೋಗ್ಯದಿಂದ ಕೂಡಿದ ಪ್ರಾದೇಶಿಕ ತಿಂಡಿ ತಿನಿಸುಗಳು ಕಂಡುಬರುತ್ತವೆ. 'ಕಲ್ತಪ್ಪ' ಎನ್ನುವ ಪ್ರಾದೇಶಿಕ ತಿಂಡಿಯ ಕುರಿತ ವಿಚಾರವನ್ನು ಲಘು ಹಾಸ್ಯ ಲೇಖನರೂಪದಲ್ಲಿ ನಿರೂಪಿಸಲಾಗಿದೆ. ಗ್ರಾಮೀಣ ಜನಜೀವನವನ್ನು ಪ್ರತಿಬಿಂಬಿಸುವ ಹಾಗೂ ಕಾಯಕ ತತ್ವವನ್ನು ಪ್ರತಿಪಾದಿಸುವ ಈ ಪ್ರಬಂಧ ಸೊಗಸಾದ ಶೈಲಿಯೊಂದಿಗೆ ಜನ ಮಾನಸದಲ್ಲಿ ನೆಲೆ ನಿಲ್ಲುವಂಥದ್ದಾಗಿದೆ.

ಘಟಕದದ ಕೊನೆಯಲ್ಲಿ ಬರುವ ಡಾ.ಕಾರ್ಕಡ ರಾಮಚಂದ್ರ ಉಡುಪರ 'ನ್ಯಾಯದ ತಕ್ಕಡಿ' ಎನ್ನುವ ನಾಟಕವು ಪ್ರಖ್ಯಾತ ಆಂಗ್ಲ ನಾಟಕಕಾರ ವಿಲಿಯಂ ಷೇಕ್ಸ್‌ಪಿಯರ್ ನ 'ಮರ್ಚೆಂಟ್ ಆಫ್ ವೆನಿಸ್' ನಾಟಕದ ರೂಪಾಂತರವಾಗಿದೆ. ಸರಳ ಸದ್ಗುಣಿ ವ್ಯಕ್ತಿಯೊಬ್ಬನ ಮೇಲೆ ಬಂದ ಆರೋಪವನ್ನು ಸರಿಯಾದ ತೀರ್ಪು ನೀಡುವ ಮೂಲಕ ಆತನ ಜೀವ ರಕ್ಷಣೆ ಮಾಡುವ ಕುರಿತ ವಿವರಣೆ ಇಲ್ಲಿದೆ.

ಒಟ್ಟಿನಲ್ಲಿ ಕಾಯಕದಲ್ಲಿ ಕೈಲಾಸವನ್ನು ಕಾಣುವ ಗುಣ ನಮ್ಮದಾಗಿರಬೇಕು. ವೃತ್ತಿ ಯಾವುದೇ ಇರಲಿ ನಿಷ್ಠೆಯಿಂದ ವೃತ್ತಿಯ ಮೇಲಿನ ಗೌರವದಿಂದ ಕೆಲಸ ಮಾಡಿದಾಗ ಮಾತ್ರ ಸಂತೃಪ್ತಿ ದೊರೆಯುತ್ತದೆ ಎಂಬ ಮನೋಭಾವವನ್ನು ಇಲ್ಲಿ ಬೆಳೆಸಬೇಕು.

## ಸಿಲೆಬಸ್ ಗ್ರಿಡ್

| | | |
|---|---|---|
| ವಿಷಯ | : | **ಕನ್ನಡ ಮೂಲಪಠ್ಯ** |
| ತರಗತಿ | : | **9** |
| ಸಮಯ | : | **8 ಪಿರೀಡುಗಳು** |
| ಘಟಕದ ಹೆಸರು | : | **ಕಾಯಕವೇ ಕೈಲಾಸ** |
| ಆಶಯ | : | **ಉದ್ಯೋಗ** |

### ಉಪ ಆಶಯಗಳು :

- ವೃತ್ತಿಗೌರವ
- ನಿರುದ್ಯೋಗ ಸಮಸ್ಯೆ
- ಉದ್ಯೋಗವಲಯದಲ್ಲಿನ ಪಲ್ಲಟಗಳು

### ಸಾಹಿತ್ಯ ಪ್ರಕಾರಗಳು

- ಅಗ್ನಿಶಾಮಕರು (ನವ್ಯ ಕವನ)
- ಕಲ್ತಪ್ಪದ ಹೋಟೆಲು (ಲಲಿತ ಪ್ರಬಂಧ)
- ನ್ಯಾಯದ ತಕ್ಕಡಿ (ನಾಟಕ)

### ಕಲಿಕಾ ಉದ್ದೇಶಗಳು:

- ಕವನ,ಲಲಿತ ಪ್ರಬಂಧ, ನಾಟಕ ಮುಂತಾದ ಸಾಹಿತ್ಯ ಕೃತಿಗಳಲ್ಲಿ ಬಿಂಬಿಸುವ ಉದ್ಯೋಗ, ದುಡಿಮೆಯ ಮಹತ್ವ, ನಿರುದ್ಯೋಗ ಸಮಸ್ಯೆ ಇತ್ಯಾದಿ ವಿಚಾರಗಳನ್ನು ಅರ್ಥೈಸಿ ಅವುಗಳಲ್ಲಿ ಕಂಡುಕೊಂಡ ವಿಚಾರಗಳನ್ನು ವಿಶ್ಲೇಷಿಸಿ ವಿವಿಧ ಭಾಷಾ ವ್ಯವಹಾರರೂಪಗಳಲ್ಲಿ ಅಭಿವ್ಯಕ್ತಿಗೊಳಿಸುವುದು.

| ಕಲಿಕಾ ಉದ್ದೇಶಗಳು | | | | ಭಾಷಾ ಸತ್ಯಾಂಶಗಳು | ಭಾಷಾ ವ್ಯವಹಾರ ರೂಪಗಳು | ಕಲಿಕೋಪಕರಣಗಳು | ಮೌಲ್ಯಮಾಪನ |
|---|---|---|---|---|---|---|---|
| ಪಾಠದ ಹೆಸರು | ಆಶಯ / ತಿಳುವಳಿಕೆಗಳು | ಭಾಷಾ ಸಾಮರ್ಥ್ಯಗಳು | ಮೌಲ್ಯಗಳು/ ಮನೋಭಾವಗಳು. | | | | |
| 1. ಅಗ್ನಿಶಾಮಕರು ( ನವ್ಯ ಕವನ )<br><br>2. ಕಲ್ಪವೃದ ಹೋಟೆಲು (ಲಲಿತ ಪ್ರಬಂಧ)<br><br>3. ನ್ಯಾಯದ ತಕ್ಕಡಿ (ನಾಟಕ) | ● ನ್ಯಾಯಯುತವಾದ ಎಲ್ಲಾ ವೃತ್ತಿಗಳೂ ಪವಿತ್ರ ಎಂಬುದನ್ನು ತಿಳಿಯುವುದು.<br>● ಯಾವುದೇ ಉದ್ಯೋಗವನ್ನು ಮಾಡಲು ತಯಾರಾದಲ್ಲಿ ನಿರುದ್ಯೋಗ ಸಮಸ್ಯೆ ಬಗೆಹರಿಸಬಹುದು.<br>● ಇಂದು ಉದ್ಯೋಗವಕಾಶಗಳು ತುಂಬಾ ಇವೆ.<br>● ನಿಶ್ಚಿತ ಉದ್ಯೋಗಕ್ಕಾಗಿ ನಿಶ್ಚಿತ ತರಬೇತಿಗಳಿವೆ ಎಂಬುದನ್ನು ತಿಳಿಯುವುದು.<br>● ಉದ್ಯೋಗಕ್ಕಾಗಿ ವಿದೇಶಗಳಿಗೆ ವಲಸೆ ಹೋಗುವುದನ್ನು ತಡೆಗಟ್ಟಬೇಕಾದುದು ಅಗತ್ಯ ಎಂಬುದನ್ನು ತಿಳಿಯುವುದು.<br>● ಯುವ ಜನಾಂಗಕ್ಕೆ ನಿರುದ್ಯೋಗ ಸಮಸ್ಯೆಯಿದೆ ಅದು ಆರ್ಥಿಕ ಸುಸ್ಥಿರತೆಗೆ ಮಾರಕವಾಗಿದೆ. | ● ವಿವಿಧ ಸಾಹಿತ್ಯ ಪ್ರಕಾರ(ನವ್ಯ ಕವನ, ಲಲಿತ ಪ್ರಬಂಧ, ನಾಟಕ) ಇತ್ಯಾದಿಗಳನ್ನು ಓದಿ ಆಸ್ವಾದಿಸುವ ಸಾಮರ್ಥ್ಯ.<br>● ಲೇಖನ, ಪ್ರಬಂಧ, ಜಾಹೀರಾತು, ವಿಶ್ಲೇಷಣಾ ಟಿಪ್ಪಣಿ, ಓದುಗರ ಓಲೆ ಮುಂತಾದ ವ್ಯವಹಾರ ರೂಪಗಳಲ್ಲಿ ಸ್ವಂತದೃಷ್ಟಿ ಕೋನಗಳಿಂದ ಅಭಿವ್ಯಕ್ತಿಗೊಳಿಸುವ ಸಾಮರ್ಥ್ಯ.<br>● ಆಶಯ ಸ್ವಾರಸ್ಯ ಬರವಣಿಗೆ, ಅನುಭವ ಬರವಣಿಗೆ, ದಿನಚರಿ ಇತ್ಯಾದಿಗಳ ಅಭಿವ್ಯಕ್ತಿ. | ● ವೃತ್ತಿಯಲ್ಲಿ ಪ್ರಾಮಾಣಿಕತೆಯ ಮನೋಭಾವ ಬೆಳೆಸುವುದು.<br>● ದುಡಿಮೆಯ ಮಹತ್ವವನ್ನು ತಿಳಿಯುವುದು, ಗೌರವ ತಾಳುವುದು.<br>● ಯಾವುದೇ ಉದ್ಯೋಗ ಕೀಳಲ್ಲ ಎಂಬ ಮನೋಭಾವ ತಾಳುವುದು.<br>● ಜೀವನೋಪಾದಿಗೆ ಉದ್ಯೋಗ ಅಗತ್ಯ.<br>● ಸತ್ಯಸಂಧತೆಯಿಂದ ಕೂಡಿದ ಉದ್ಯೋಗಕ್ಕೆ, ಉದ್ಯೋಗಿಗಳಲ್ಲಿ ಗೌರವ ಮನೋಭಾವ ತಾಳುವುದು. | ● ಪರ್ಯಾಯ ಪದಗಳು | ● ಸ್ವಾರಸ್ಯ ಬರವಣಿಗೆ<br>● ಪತ್ರ ಬರವಣಿಗೆ<br>● ನಾಟಕ<br>● ದಿನಚರಿ<br>● ಟಿಪ್ಪಣಿ<br>● ಆಶಯ<br>● ರೂಪಾಂತರ<br>● ಪ್ರಬಂಧ | ● ಹಾಡುವುದು<br>● ಸ್ವಾರಸ್ಯ ಬರೆಯುವುದು<br>● ನಾಟಕ ರಚಿಸುವುದು<br>● ಪಾತ್ರಚಿತ್ರಣ ಮಾಡುವುದು<br>● ಜಾಹೀರಾತು<br>● ಭಿತ್ತಿಪತ್ರ<br>● ಓದುಗರ ಓಲೆ | ● ಸ್ವಾರಸ್ಯ ಟಿಪ್ಪಣಿ<br>● ನಾಟಕ<br>● ಪಾತ್ರಚಿತ್ರಣ<br>● ಕಥೆ<br>● ಕವನ<br>● ರೂಪಾಂತರ<br>● ವಿಶ್ಲೇಷಣಾ ಟಿಪ್ಪಣಿ<br>● ದಿನಚರಿ<br>● ಓದುಗರ ಓಲೆ<br>● ಜಾಹೀರಾತು |

# ಚಟುವಟಿಕೆಗಳು

**ಪ್ರವೇಶ ಚಟುವಟಿಕೆ**

- **ಅಭಿಪ್ರಾಯ ಬರೆಯುವುದು**

ಘಟಕದ ಆರಂಭದಲ್ಲಿ ನೀಡಲಾದ 'ಸಂತೃಪ್ತಿ'ಲೇಖನವನ್ನು ವಿದ್ಯಾರ್ಥಿಗಳು ಗಮನವಿಟ್ಟು ಓದಲಿ. ಬಳಿಕ ಲೇಖನದ ಕುರಿತು ತಮ್ಮ ಅಭಿಪ್ರಾಯಗಳನ್ನು ವೈಯಕ್ತಿಕವಾಗಿ ಬರೆಯಲಿ. ಕೆಲವರು ಮಂಡಿಸಲಿ ,ಅವರ ಅಭಿಪ್ರಾಯದ ಕುರಿತು ಉಳಿದ ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಲಿ. ತಾನು ಮಾಡುವ ಕೆಲಸದಲ್ಲಿ ಪ್ರತಿಯೊಬ್ಬನು ಆನಂದವನ್ನು ಕಂಡುಕೊಳ್ಳಬೇಕು. ಜೀವನದಲ್ಲಿ ಸುಖವನ್ನು ಪಡೆಯಬೇಕೆನ್ನುವ ಮನುಷ್ಯನು ತನ್ನ ಕೆಲಸದಲ್ಲಿ ಹೆಚ್ಚಿನ ಸಂತೋಷವನ್ನು ಕಂಡುಕೊಳ್ಳುತ್ತಾನೆ. ಪ್ರಸನ್ನಚಿತ್ತದಿಂದ ಇರುವವನು ಹೆಚ್ಚು ಕೆಲಸ ಮಾಡುತ್ತಾನೆ. ಹೆಚ್ಚು ಕಾಲ ಸುಖದಿಂದ ಬದುಕಬೇಕೆನ್ನುವವರು ನಗುನಗುತ್ತಾ ಕೆಲಸ ಮಾಡಬೇಕು. ಕೆಲಸ ಯಾವುದೇ ಇರಲಿ ಅದನ್ನು ಶ್ರದ್ಧಾಭಕ್ತಿಗಳಿಂದ ಪ್ರಾಮಾಣಿಕತೆಯಿಂದ ಮಾಡುವುದರಲ್ಲಿ ಅದರ ಯಶಸ್ಸು ಅಡಗಿದೆ ಇತ್ಯಾದಿ ವಿಚಾರಗಳು ವಿದ್ಯಾರ್ಥಿಗಳ ಬರಹದಲ್ಲಿ ಬಂದಿವೆಯೋ ಎಂಬುದನ್ನು ಅಧ್ಯಾಪಕರು ಗಮನಿಸಿಕೊಳ್ಳಬೇಕು.

# ಅಗ್ನಿಶಾಮಕರು

- **ಉತ್ತರ ಬರೆಯುವುದು**

ವಿದ್ಯಾರ್ಥಿಗಳು ಅಗ್ನಿಶಾಮಕರು ಕವನವನ್ನು ಗಮನವಿಟ್ಟು ಓದಲಿ. ಕವನದ ಆಶಯವನ್ನು ಗ್ರಹಿಸಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಚರ್ಚಿಸಿ ಉತ್ತರವನ್ನು ಬರೆಯಲಿ. ಅದನ್ನು ತರಗತಿಯಲ್ಲಿ ಪ್ರಸ್ತುತಪಡಿಸಲಿ.

- **ಕವನದ ಆಶಯ ಬರೆಯುವುದು**

ವಿದ್ಯಾರ್ಥಿಗಳ ಗುಂಪಿನಲ್ಲಿ ಕುಳಿತು ಪರಸ್ಪರ ಚರ್ಚಿಸಿ ಆಶಯವನ್ನು ಬರೆಯಲಿ. ಬಳಿಕ ತರಗತಿಯಲ್ಲಿ ಚರ್ಚಿಸಿ ಆಶಯವನ್ನು ಪರಿಷ್ಕರಿಸಿ ಬರೆದುಕೊಳ್ಳಲು ಸೂಚಿಸುವುದು.

**ಕವನದ ಆಶಯ ಹೀಗೂ ಇರಬಹುದು**

ಕವಿ ಡಾ| ಸಿದ್ದಲಿಂಗಯ್ಯನವರು ಬರೆದ 'ಅಗ್ನಿಶಾಮಕರು'ನವ್ಯ ಸಂಪ್ರದಾಯದ ಕವನವಾಗಿದೆ. ಇದರಲ್ಲಿ ಅಗ್ನಿಶಾಮಕರ ಕಾರ್ಯ ವೈಖರಿಯನ್ನು ಹೇಳುವುದರ ಜೊತೆಗೆ ಭಾವೈಕ್ಯದ ಸಂದೇಶವನ್ನು ನೀಡಲಾಗಿದೆ.

ಭೂಮಿಯು ಹೊತ್ತಿ ಉರಿಯುವಾಗ ನಂದಿಸಲು ನೀರನ್ನು ತಂದವರು, ಕಟ್ಟಡಗಳು ಕುಸಿದು ನೆಲಸಮವಾಗುವಾಗ ರಕ್ಷಣೆ ನೀಡಿದವರು, ನೀರಿಗೆ ಬಿದ್ದು ಜೀವನ್ಮರಣ ಹೋರಾಟ ಮಾಡುವವರನ್ನು ಮೇಲೆತ್ತಿ ತಂದವರು ಅಗ್ನಿಶಾಮಕರು ಇವರು ನಮ್ಮ ಸಹೋದರರು.

ರಣಬಿಸಿಲಿನಿಂದ ಭೂಮಿ ಸುಡುತ್ತಿದ್ದರೂ, ನಡುರಾತ್ರಿಯಾಗಿದ್ದರೂ ಹಗಲಿರುಳೆನ್ನದೆ ರಕ್ಷಣೆಗೆ ಕರೆ ಬಂದ ಕೂಡಲೇ ತಮ್ಮ ಸಂಸಾರವನ್ನು ಬಿಟ್ಟು ಆಪತ್ತಿನಲ್ಲಿರುವವರನ್ನು ರಕ್ಷಿಸಲು ಓಡೋಡಿಧಾವಿಸಿ ಬರುವವರು ಅಗ್ನಿಶಾಮಕರು ಅವರೇ ನಮ್ಮ ಸೋದರರು.

ತಾವು ತಂಗಳನ್ನವನುಂಡು ಕಷ್ಟಕೋಟಲೆಗಳನ್ನೆದುರಿಸಿದರೂ ದಟ್ಟಡವಿಯೊಳಗೆ ಹಬ್ಬಿದ ಹೊಗೆ ತುಂಬಿದ ಕಿಚ್ಚನ್ನು ನಂದಿಸುವಲ್ಲಿ ಹೋರಾಡುವವರು. ಈ ಅಗ್ನಿಶಾಮಕರು ನಮ್ಮ ಸೋದರರು.

ಅಗ್ನಿಶಾಮಕರು ಸದಾಕಾಲ ಕರ್ತವ್ಯದಲ್ಲಿ ನಿರತರಾಗಿದ್ದು ಎಲ್ಲೋ ಕೆಲವೊಮ್ಮೆ ಮಾತ್ರ ತಮ್ಮ ಸಂಸಾರ, ಮಡದಿ ಮಕ್ಕಳ ಬಳಿಗೆ ತೆರಳಿ ಕುಟುಂಬರ ಸಂತೋಷದಲ್ಲಿ ಪಾಲ್ಗೊಳ್ಳುವರು. ಇವರು ನಮ್ಮ ಸೋದರರು.

ಪ್ರಸ್ತುತ ಸಮಾಜದಲ್ಲಿ ಜಾತಿ, ಮತ, ಪಂಥಗಳ ಹೆಸರಿನಲ್ಲಿ ಒಡಕು ಪಲ್ಲಟಗಳು ಕಂಡುಬರುತ್ತವೆ. ಮನುಷ್ಯ ಮನುಷ್ಯರ ನಡುವೆ ವೈಮನಸ್ಸು, ಕೋಮು ದ್ವೇಷಗಳು ಬೆಂಕಿಯಂತೆ ಉರಿದು ಸಮಾಜದ ಸ್ವಾಸ್ಥ್ಯವನ್ನು ಕೆಡಿಸುತ್ತವೆ. ಈ ಕೋಮು ದ್ವೇಷವೆಂಬ ಬೆಂಕಿಯನ್ನು ಆರಿಸಲು ಪ್ರೀತಿ ಎಂಬ ಗಂಗೆ ಬೇಕು. ಅದಕ್ಕಾಗಿ ನಾವೆಲ್ಲರೂ ಅಗ್ನಿಶಾಮಕರು ಆಗಬೇಕು, ಪರಸ್ಪರ ಪ್ರೀತಿಯಿಂದ ವ್ಯವಹರಿಸಬೇಕು ಎಂದು ಕವಿ ಸಾರಿ ಹೇಳುತ್ತಾರೆ. ಜಾತಿವೈರವನ್ನು ನಿರ್ಮೂಲನೆ ಮಾಡಲು ಪ್ರೀತಿ ಒಂದೇ ದಾರಿ ಎಂಬುದಾಗಿ ಕವನದಲ್ಲಿ ಒತ್ತಿ ಹೇಳಲಾಗಿದೆ.

- **ಸಾಲು ಗುರುತಿಸಿ ಬರೆಯುವುದು**

ಕವನದ ಆಶಯವನ್ನು ಬರೆದ ಬಳಿಕ ವಿದ್ಯಾರ್ಥಿಗಳು ಕವನದಲ್ಲಿ ತಮಗಿಷ್ಟವಾದ ಸಾಲುಗಳನ್ನು ಗುರುತಿಸಿ ಬರೆಯಲಿ. ಆ ಸಾಲುಗಳು ಯಾಕೆ ಇಷ್ಟವಾಯಿತೆಂಬುದಕ್ಕೆ ಕಾರಣವನ್ನು ಬರೆಯಲಿ. ಪ್ರತಿಯೊಬ್ಬರೂ ತಾವು ಬರೆದುದನ್ನು ತರಗತಿಯಲ್ಲಿ ಮಂಡಿಸಲಿ. ಚರ್ಚೆಯ ಮೂಲಕ ಪರಿಷ್ಕರಿಸಿ ಉತ್ತಮಪಡಿಸಲಿ.

**ಸಾಲು ಗುರುತಿಸುವ ಚಟುವಟಿಕೆಯನ್ನು ಹೀಗೂ ಬರೆಯಬಹುದಲ್ಲವೇ?**

ಧರೆ ಹತ್ತಿ ಉರಿದಾಗ ಗಂಗೆಯನ್ನು ತಂದವರು

ಕಟ್ಟಡವು ಕುಸಿದಾಗ ಹೆಗಲು ಕೊಟ್ಟವರು

ಕೆರೆಗೆ ಬಿದ್ದವರನ್ನು ಬಿಗಿದಪ್ಪಿ ತಂದವರು

ಅಗ್ನಿಶಾಮಕರು ನಮ್ಮ ಸೋದರರು.

ಈ ಮೇಲಿನ ಸಾಲುಗಳು ನನಗೆ ಬಹಳ ಇಷ್ಟವಾಯಿತು. ಅಗ್ನಿಶಾಮಕರ ಕರ್ತವ್ಯನಿಷ್ಠೆಯನ್ನು ಈ ಸಾಲುಗಳಲ್ಲಿ ತಿಳಿಸಿದ್ದಾರೆ. ಬೆಂಕಿ ಹತ್ತಿ ಉರಿದಾಗ ಕಟ್ಟಡವು ಕುಸಿದಾಗ ಅದರೊಳಗೆ ಸಿಲುಕಿದವರನ್ನು ಇವರು ರಕ್ಷಿಸುತ್ತಾರೆ. ಕೆರೆಗೆ ಬಿದ್ದವರನ್ನು ರಕ್ಷಿಸಿ ತರುತ್ತಾರೆ. ಹೀಗೆ ಜೀವದ ಹಂಗು ತೊರೆದು ಇನ್ನೊಂದು ಜೀವದ ಕಷ್ಟವನ್ನು ಪರಿಹರಿಸಲು ಹಾತೊರೆಯುವ ಅವರ ಕರ್ತವ್ಯನಿಷ್ಠೆ ನನಗೆ ಬಹಳ ಮೆಚ್ಚುಗೆಯಾಯಿತು.

- **ಸ್ವಾರಸ್ಯ ಬರೆಯುವುದು**

ವಿದ್ಯಾರ್ಥಿಗಳು ಅಗ್ನಿಶಾಮಕರು ಕವನದಲ್ಲಿ ಬಂದಿರುವ ಸ್ವಾರಸ್ಯಕರವಾದ ಸಾಲುಗಳನ್ನು ಗುರುತಿಸಲಿ. ಆ ಸಾಲುಗಳು ನೀಡುವ ವಿಶೇಷ ಅರ್ಥವನ್ನು ಹೇಳಲಿ. ಪೂರಕ ಅಂಶಗಳನ್ನು ಅಧ್ಯಾಪಕರು ನೀಡುವುದು. ಅನಂತರ ಆ ಸಾಲುಗಳನ್ನು ಬರೆದು ಅವುಗಳ ಸ್ವಾರಸ್ಯ ಬರೆಯಲು ಹೇಳುವುದು.

ಜಾತಿ ವೈರದ ಜ್ವರವು ಏರುತಿಹುದಣ್ಣ

ಕೋಮುದ್ವೇಷದ ಬೆಂಕಿ ಉರಿಯುತಿಹುದಣ್ಣ

ಈ ಬೆಂಕಿಯಾರಿಸಲು ಪ್ರೀತಿ ಗಂಗೆಯುಬೇಕು

ಎಲ್ಲರೂ ಅಗ್ನಿಶಾಮಕರಿಂದು ಆಗಬೇಕು.

ಡಾ| ಸಿದ್ಧಲಿಂಗಯ್ಯನವರು ತಮ್ಮ ‘ಅಗ್ನಿಶಾಮಕರು’ ಕವನದ ಈ ಸಾಲುಗಳಲ್ಲಿ ಪ್ರಸ್ತುತ ಸಮಾಜವು ಎದುರಿಸುತ್ತಿರುವ ಜಾತಿ ವೈರ ಹಾಗೂ ಕೋಮು ದ್ವೇಷದ ಕುರಿತು ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ನಮ್ಮ ಸಮಾಜದಲ್ಲಿ ಮನುಷ್ಯ ಮನುಷ್ಯರೊಳಗೆ ಜಾತಿಯತೆ, ವರ್ಗೀಯತೆ, ಕೋಮು ದ್ವೇಷದ ದಳ್ಳುರಿ ಉರಿಯುತ್ತಿದೆ. ಜಾತಿ ಮತದ ಹೆಸರಿನಲ್ಲಿ ಅನ್ಯಾಯಗಳು ತಾಂಡವವಾಡುತ್ತವೆ. ಕವನದಲ್ಲಿ ಜಾತಿ ವೈರವನ್ನು ಏರುತ್ತಿರುವ ಜ್ವರದ ಕಾವಿಗೂ, ಕೋಮು ದ್ವೇಷದ ತೀವ್ರತೆಯನ್ನು ಉರಿಯುತ್ತಿರುವ ಬೆಂಕಿಗೂ ಹೋಲಿಸಿದ್ದು ಬಹಳ ಸ್ವಾರಸ್ಯ ಪೂರ್ಣವಾಗಿದೆ. ದಯೆ, ಕರುಣೆ, ಸಹನೆ, ಸಹಬಾಳ್ವೆ ಎನ್ನುವ ಮೌಲ್ಯಗಳು ಅಳಿಯುತ್ತಿರುವ ಈ ಕಾಲದಲ್ಲಿ ವೈರತ್ವ, ದ್ವೇಷದ ಉರಿಯನ್ನು ಶಮನಗೊಳಿಸಲು ಪ್ರೀತಿ ಎಂಬ ಗಂಗೆಯ ಅಗತ್ಯವಿದೆ. ಸಮಾಜದಲ್ಲಿ ಶಾಂತಿಯನ್ನು ಕಾಪಾಡಲು ನಾವೆಲ್ಲರೂ ಅಗ್ನಿಶಾಮಕರಾಗಿ ದಳ್ಳುರಿಯನ್ನು ನಂದಿಸಲು ಪರಸ್ಪರ ಕೈಜೋಡಿಸಬೇಕೆಂದು ಕವಿ ಕರೆನೀಡುತ್ತಿದ್ದಾರೆ.

- **ವಾಕ್ಯ ರಚಿಸುವುದು**

ವಿದ್ಯಾರ್ಥಿಗಳಲ್ಲಿ ಕವನವನ್ನು ಮೌನವಾಗಿ ಓದಲು ತಿಳಿಸಿ ಪರ್ಯಾಯ ಪದಗಳನ್ನು ಬರೆಯಬಹುದಾದ ಪದಗಳ ಪಟ್ಟಿಯನ್ನು ತಯಾರಿಸಲು ತಿಳಿಸುವುದು. ಆ ಪರ್ಯಾಯ ಪದಗಳನ್ನು ಬಳಸಿ ಸೂಕ್ತವಾದ ವಾಕ್ಯಗಳನ್ನು ರಚಿಸಲು ತಿಳಿಸುವುದು.

**ಉದಾಹರಣೆ :**

ಧರೆ : ಭೂಮಿ, ಇಳೆ, ವಸುಧೆ, ವಸುಂಧರೆ, ಧರಿತ್ರಿ, ಧಾರಿಣಿ, ಅವನಿ

ಬೆಂಕಿ : ಅನಲ, ಕಿಚ್ಚು, ಉರಿ, ಪಾವಕ, ಅಗ್ನಿ

- ಮಳೆ ಬಂದಾಗ ಇಳೆ ತಂಪಾಗುತ್ತದೆ.
- ಕಾಡ್ಗಿಚ್ಚು ಹಬ್ಬಿದಾಗ ಅಗ್ನಿಯ ಕೆನ್ನಾಲಿಗೆಗಳು ಆಕಾಶದೆತ್ತರಕ್ಕೆ ವ್ಯಾಪಿಸುತ್ತವೆ.

- **ಪ್ರಬಂಧ ಬರೆಯುವುದು**

ರಾಷ್ಟ್ರದಲ್ಲಿರುವ ವಿಭಿನ್ನ ಸಂಸ್ಕೃತಿ, ಆಚರಣೆ, ವಿವಿಧ ಭಾಷೆಗಳು ಇವುಗಳನ್ನೆಲ್ಲ ಗುರುತಿಸಿ ದೇಶದ ಏಕತೆಯನ್ನು ಹೇಗೆ ಕಾಪಾಡಿಕೊಳ್ಳಬೇಕು? ಎಂಬ ವಿಚಾರವಾಗಿ ವಿದ್ಯಾರ್ಥಿಗಳು ಚರ್ಚಿಸಲಿ. ಬಳಿಕ ರಾಷ್ಟ್ರೀಯ ಭಾವೈಕ್ಯ ಎಂಬ ವಿಚಾರವಾಗಿ ವಿದ್ಯಾರ್ಥಿಗಳು ಗುಂಪಿನಲ್ಲಿ ಕುಳಿತು ಪ್ರಬಂಧವನ್ನು ತಯಾರಿಸಲಿ. ಬಿಟ್ಟು ಹೋದ ಅಂಶಗಳಿದ್ದಲ್ಲಿ ಅಧ್ಯಾಪಕರ ನೆರವಿನೊಂದಿಗೆ ಪುನಃ ಪರಿಷ್ಕರಿಸಿ ಬರೆಯಲಿ. ಉತ್ತಮವಾಗಿ ಪ್ರಬಂಧ ಬರೆದು ಮಂಡಿಸಿದ ಗುಂಪನ್ನು ಅಭಿನಂದಿಸುವುದು.

**ಪ್ರಬಂಧವನ್ನು ಹೀಗೂ ಬರೆಯಬಹುದು**

## ರಾಷ್ಟ್ರೀಯ ಭಾವೈಕ್ಯ

ಭಾರತ ದೇಶವು ಭವ್ಯ ಸಂಸ್ಕೃತಿ ಹಾಗೂ ಪರಂಪರೆಯನ್ನು ಹೊಂದಿರುವ ನಾಡಾಗಿದೆ. ಅನಾದಿ ಕಾಲದಿಂದಲೇ ಇಲ್ಲಿ ಅನೇಕ ಜನಾಂಗದವರಿಂದ, ಸಂಸ್ಕೃತಿಯವರಿಂದ ಆಕ್ರಮಣವು ನಡೆಯಿತು. ಎಲ್ಲರನ್ನೂ ತನ್ನ ಒಡಲೊಳಗೆ ಸೇರಿಸಿಕೊಂಡು ಭಾರತವು ಇಂದಿಗೂ ಒಂದು ಅಖಂಡ ರಾಷ್ಟ್ರವಾಗಿ ನೆಲೆ ನಿಂತಿದೆ. ಭಾರತದೊಳಗಿರುವ ಏಕತೆಯ ಭಾವನೆಯೇ ಇದಕ್ಕೆ ಮುಖ್ಯ ಕಾರಣವಾಗಿದೆ. ಭಾರತಮಾತೆಯ ಒಡಲು ಹಿಂದೂ, ಜೈನ, ಬೌದ್ಧ, ಸಿಖ್, ಕ್ರೈಸ್ತ, ಮುಸಲ್ಮಾನ ,ಪಾರಸೀಕ ಹೀಗೆ ಒಂದೇ ಎರಡೇ ಹಲವು ಧರ್ಮಗಳ ಆಗರವಾಗಿದೆ. ಒಂದು ಉದ್ಯಾನವನದಲ್ಲಿ ಹಲವು ತರದ ಹೂಗಳಿರುವಂತೆ ಎಲ್ಲಾ ಧರ್ಮಗಳೂ ಅವುಗಳದೇ ಆದ ಹಿರಿಮೆಯಿಂದ ಶೋಭಿಸುತ್ತಿವೆ. ಅವುಗಳೆಲ್ಲದರ ಸಾರವು ಒಂದೇ ಆಗಿದ್ದು ಮಾನವೀಯತೆಗೆ ಆಸ್ವಾದವಿತ್ತಿದೆ. ಭಿನ್ನ-ಭಿನ್ನ ಜೀವನ ಸಂಸ್ಕೃತಿಗಳಿದ್ದರೂ ಎಲ್ಲರೂ ಸೌಹಾರ್ದದಿಂದ ಬಾಳುತ್ತಿರುವುದು ಇಲ್ಲಿನ ಜನರ ಏಕರೂಪತೆಯ ಪರಿಣಾಮವಾಗಿದೆ.

ಸ್ವಾತಂತ್ರ್ಯ ನಂತರದ ಆಡಳಿತ ಸೌಲಭ್ಯಕೋಸ್ಕರ ಭಾಷಾವಾರು ಪ್ರಾಂತ್ಯಗಳ ರಚನೆಯಾಯಿತು. ಉತ್ತರ ಭಾರತದಲ್ಲಿ ಮತ್ತು ಭಾರತದ ಹೆಚ್ಚಿನ ಭಾಗಗಳಲ್ಲಿ ಹಿಂದಿ ಭಾಷೆಯನ್ನಾಡುವ ಜನರು ನೆಲೆಸಿರುವುದರಿಂದ ಹಿಂದಿಯನ್ನು ರಾಷ್ಟ್ರ ಭಾಷೆಯನ್ನಾಗಿ ಸ್ವೀಕರಿಸಲಾಯಿತು. ಪ್ರಾಂತೀಯ ಭಾಷೆಗಳಿಗೂ ಪ್ರಾಧಾನ್ಯ ದೊರೆಯಿತು. ಈ ಪ್ರಾಂತ್ಯಗಳೊಳಗೆ ಎಷ್ಟೋ ಜಾತಿ, ಉಪಜಾತಿಗಳ ವೈವಿಧ್ಯಮಯ ಭಾಷೆಗಳಿವೆ. ಜನಜೀವನದ ಸಂಸ್ಕೃತಿಯ ಆಚರಣೆಗಳ ಸಾರವನ್ನು ಈ ಭಾಷೆಗಳು ಬಿಂಬಿಸುತ್ತವೆ.

ಇಂದಿನ ವಿದ್ಯಾರ್ಥಿಗಳು ಮುಂದಿನ ಜನಾಂಗವಾಗಿರುವುದರಿಂದ ಅವರಲ್ಲಿ ಏಕತೆಯ ಭಾವನೆಯು ಹೆಚ್ಚಾಗಿ ಮೂಡಬೇಕಾಗಿದೆ. ಈ ರಾಷ್ಟ್ರವು ನಮ್ಮದು ಎಂಬ ಅಭಿಮಾನ, ಗೌರವವೂ ಪ್ರತಿಯೊಬ್ಬನಲ್ಲೂ ಇರಬೇಕಾದದು ಅಗತ್ಯವಾಗಿದೆ. ವಿದ್ಯಾರ್ಥಿಯು ಶಾಲೆಯಲ್ಲಿ ಮುಂಜಾನೆ ಸ್ವೀಕರಿಸುವ ಪ್ರತಿಜ್ಞೆಯೊಂದಿಗೆ ಅದಕ್ಕೆ ಬದ್ಧನಾಗಿ ನಡೆಯಲು ಕಲಿಯಬೇಕು. ಇಂದು ವ್ಯಕ್ತಿಯ ಹೃದಯದಲ್ಲಿ ಮೂಡುವ ಏಕತೆಯ ಭಾವನೆಯು ನಾಳಿನ ಭದ್ರವಾದ ಭವ್ಯ ಭಾರತಕ್ಕೆ ನಾಂದಿಯಾಗುತ್ತದೆ.

ಹೀಗೆ ವಿವಿಧ ಭಾಷೆ, ಧರ್ಮ, ಜಾತಿ ಮತ್ತು ಸಂಸ್ಕೃತಿಗಳು ನೆಲೆಸಿದರೂ ಭಾರತೀಯರೆಂಬ ಏಕತೆಯ ಭಾವವು ರಾಷ್ಟ್ರವನ್ನು ರಕ್ಷಿಸುತ್ತಿದೆ. ಹೊರ ರಾಷ್ಟ್ರಗಳಿಂದ ಆಕ್ರಮಣವು ನಡೆದರೆ ಎಲ್ಲರೂ ಒಮ್ಮನಸ್ಸಿನಿಂದ ರಾಷ್ಟ್ರಕ್ಕಾಗಿ ತನು ಮನ ಧನಗಳನ್ನು ಅರ್ಪಿಸಲು ಸಿದ್ಧರಾಗಬೇಕು. ಒಗ್ಗಟ್ಟಿನಲ್ಲಿ ಬಲವಿದೆ ಎಂಬುದನ್ನು ಮನಗಂಡು ಎಲ್ಲರೂ ಈ ಏಕತೆಯನ್ನು ಇನ್ನಷ್ಟು ಬಲಿಷ್ಠಗೊಳಿಸಬೇಕಾಗಿದೆ. ದೇಶದ ಅಭಿವೃದ್ಧಿಯಲ್ಲಿ ಶಾಂತಿ, ಸಮಾಧಾನವನ್ನು ಉಳಿಸುವುದರಲ್ಲಿ ಪ್ರತಿಯೊಬ್ಬ ಪ್ರಜೆಗೂ ಪಾತ್ರವಿದೆ. ಇದನ್ನು ಮನಗಂಡು ನಮ್ಮ ನಡೆನುಡಿಗಳಲ್ಲಿ ಪ್ರಕಟವಾದಾಗ ದೇಶದ ಅಖಂಡತೆ ಐಕ್ಯತೆ ಪ್ರಗತಿ ಉಂಟಾಗುತ್ತದೆ. ಮುಂದಿನ ಜನಾಂಗವಾದ ವಿದ್ಯಾರ್ಥಿಗಳಲ್ಲಿ ಸಾಮರಸ್ಯ ಬೆಳೆದು ಬರಬೇಕು. ಅದೇ ಮುಂದೆ ರಾಷ್ಟ್ರದ ರಕ್ಷಾಕವಚವಾಗಿರಬೇಕು. ರಾಷ್ಟ್ರದ ಜನರ ಭಾವೈಕ್ಯವು ರಾಷ್ಟ್ರದ ಐಕ್ಯಕ್ಕೆ ಉತ್ತಮ ಬುನಾದಿಯಾಗಿದೆ. ವಿಶ್ವದ ಎಲ್ಲೆಡೆಯಲ್ಲಿ ಭಾರತವು ಶಾಂತಿಪ್ರತೀಕದ ಒಂದು ಮಾದರಿ ರಾಷ್ಟ್ರವಾಗಿ ಮೆರೆಯಲಿ.

- **ವಿಶ್ಲೇಷಣಾ ಟಿಪ್ಪಣಿ ಬರೆಯುವುದು**

ಹಗಲು ಸುಡುತ್ತಿದ್ದರು ನಡುರಾತ್ರಿಯಿದ್ದರೂ

ಕರೆ ಬಂದ ಕೂಡಲೇ ಮಡದಿ ಮಕ್ಕಳ ಬಿಟ್ಟು

ಓಡೋಡಿ ಬರುವವರು

'ಅಗ್ನಿಶಾಮಕರು' ಕವನದ ಈ ಸಾಲುಗಳನ್ನು ವಿದ್ಯಾರ್ಥಿಗಳಿಂದ ಓದಿಸುವುದು. ಬಳಿಕ ಅಗ್ನಿಶಾಮಕರ ಕಾರ್ಯ ವೈಖರಿಯ ಕುರಿತು ಚರ್ಚಿಸಿ ವೈಯುಕ್ತಿಕವಾಗಿ ತಮ್ಮ ಅಭಿಪ್ರಾಯಗಳೊಂದಿಗೆ ವಿಶ್ಲೇಷಣಾ ಟಿಪ್ಪಣಿಯನ್ನು ಬರೆದು ಮಂಡಿಸಲಿ. ಮಂಡನೆಯ ಬಳಿಕ ಉತ್ತಮಪಡಿಸಿ ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆಯಲು ತಿಳಿಸುವುದು.

- **ವಿಶ್ಲೇಷಣಾ ಟಿಪ್ಪಣಿ**

'ಅಗ್ನಿಶಾಮಕರು' ಕವನದ ಈ ಸಾಲುಗಳಲ್ಲಿ ಅಗ್ನಿಶಾಮಕರ ಕೆಲಸದ ಕುರಿತು ಹೇಳಲಾಗಿದೆ. ಅಗ್ನಿಶಾಮಕ ಸಿಬ್ಬಂದಿಗಳು ಯಾವುದೇ ಸಮಯದಲ್ಲಿ ಎಂತಹ ಕಠಿಣ ಪರಿಸ್ಥಿತಿಯನ್ನು ಎದುರಿಸಲು ತಯಾರಾಗಿರುತ್ತಾರೆ. ಹಗಲಿರುಳೆನ್ನದೆ, ನಡುರಾತ್ರಿಯೆನ್ನದೆ, ಬಿಸಿಲು, ಮಳೆ, ಚಳಿ, ಗಾಳಿಯನ್ನು ಲೆಕ್ಕಿಸದೆ ಕರ್ತವ್ಯದ ಕರೆ ಬಂದ ಕೂಡಲೇ ಧಾವಂತದ ಹೆಜ್ಜೆಗಳನ್ನಿಟ್ಟು ಅಪಾಯದಲ್ಲಿರುವವರ ರಕ್ಷಣೆಗೆ ಸಿದ್ಧರಾಗುತ್ತಾರೆ. ತಮ್ಮ ಅಗತ್ಯಗಳನ್ನು ಕಡೆಗಣಿಸಿ, ಕುಟುಂಬ ಸದಸ್ಯರ ಅವಶ್ಯಕತೆಗಳನ್ನು ಬದಿಗೊತ್ತಿ, ಜೀವದ ಹಂಗು ತೊರೆದು ಕರ್ತವ್ಯವನ್ನು ನಿರ್ವಹಿಸುತ್ತಾರೆ. ಯಾವುದೇ ಅಪಾಯದಲ್ಲಿರುವವರಿಗೆ ಅಗ್ನಿಶಾಮಕರು ರಕ್ಷಣೆಯನ್ನು ನೀಡುತ್ತಾರೆ. ಎಂತಹ ದುರ್ಗಮ ಸನ್ನಿವೇಶಗಳಲ್ಲೂ ಇತರರ ಜೀವದ ರಕ್ಷಣೆಯೇ ತಮ್ಮ ಗುರಿಯೆಂದುಕೊಂಡು ತಮ್ಮ ಕರ್ತವ್ಯವನ್ನು ನಿಭಾಯಿಸುತ್ತಾರೆ.

ಪ್ರಸ್ತುತ ಕವನದ ಈ ಸಾಲುಗಳ ಮೂಲಕ ಅಗ್ನಿಶಾಮಕರಾದವರು ತಮ್ಮ ಸ್ವಂತ ಕಾರ್ಯಗಳನ್ನು ಲೆಕ್ಕಿಸದೆ ಸಮಾಜಸೇವೆಗಾಗಿ ಕಾರ್ಯಪ್ರವೃತ್ತರಾಗುತ್ತಾರೆ. ನಿಸ್ವಾರ್ಥ ಸೇವೆಯೇ ಇವರ ಬಾಳಿನ ಧ್ಯೇಯವಾಗಿರುತ್ತದೆ. ಇಂತಹ ನಿಸ್ವಾರ್ಥ ಮನೋಭಾವವನ್ನು ನಾವು ಬೆಳೆಸಿಕೊಳ್ಳಬೇಕು.

**ಪೂರಕ ಮಾಹಿತಿ :**

## ಭಗೀರಥನು ಗಂಗೆಯನ್ನು ಭೂಮಿಗೆ ತಂದ ಪ್ರಸಂಗ

ಸಗರನ ಅರುವತ್ತುಸಾವಿರ ಮಂದಿ ಮಕ್ಕಳೂ ಕಪಿಲ ಮುನಿಯ ಕೋಪಾಗ್ನಿಯಿಂದ ಬೂದಿಯಾಗಿರುವಲ್ಲಿ, ಅವರ ಮರಿಮಗನಾದ ಭಗೀರಥನು ತನ್ನ ಮುತ್ತಜ್ಜಂದಿರಿಗೆ ಸದ್ಗತಿಯನ್ನುಂಟುಮಾಡುವುದಕ್ಕಾಗಿ, ಗಂಗೆಯನ್ನು ಭೂಲೋಕಕ್ಕೆ ತರುವ ಉದ್ದೇಶದಿಂದ ಗಂಗೆಯನ್ನು ಕುರಿತು ತಪಸ್ಸು ಮಾಡಿದನು. ಗಂಗೆ ಪ್ರತ್ಯಕ್ಷಳಾಗಿ "ನಾನು ನಿನ್ನ ಇಷ್ಟಾರ್ಥವನ್ನು ಕೈಗೂಡಿಸುವೆನು. ಆದರೆ ನನ್ನ ವೇಗವನ್ನು ತಡೆಯುವವರಾರು?" ಎನಲು, ಭಗೀರಥ ಶಿವನನ್ನು ಮೆಚ್ಚಿಸಿ ಒಪ್ಪಿಸಿದನು. ಗಂಗೆ ಶಿವನ ಮಸ್ತಕದ ಮೇಲೆ ಬಿದ್ದು, ಅಲ್ಲಿಂದ ಭಗೀರಥನ ಹಿಂದೆಯೇ ಬರುತ್ತ ದಾರಿಯಲ್ಲಿ ಜಹ್ನುವಿನ ಯಜ್ಞಶಾಲೆಯನ್ನು ಕೊಚ್ಚಿಕೊಂಡು ಹರಿಯತೊಡಗಿದಳು. ಜಹ್ನು ಗಂಗೆಯನ್ನು ಆಪೋಷಣೆ ಮಾಡಿಬಿಟ್ಟನು. ಭಗೀರಥ ಜಹ್ನುವನ್ನು ಬೇಡಲಾಗಿ, ಜಹ್ನು ಮರಳಿ ಪ್ರವಹಿಸುವಂತೆ ಮಾಡಿದನು. ಈ ಕಾರಣದಿಂದಲೇ ಗಂಗೆಗೆ "ಜಾಹ್ನವಿ" ಎಂದು ಹೆಸರು ಬಂತು. ಬಳಿಕ ಭಗೀರಥ ಗಂಗೆಯನ್ನು ತನ್ನ ಹಿಂದೆಯೇ ಕರೆದೊಯ್ದು ತನ್ನ ಮುತ್ತಜ್ಜಂದಿರ ಬೂದಿಯ ರಾಶಿಯ ಮೇಲೆ ಪ್ರವಹಿಸುವಂತೆ ಮಾಡಿ, ಅವರಿಗೆ ಸದ್ಗತಿಯನ್ನೊದಗಿಸಿದನು.

# ಕಲ್ತಪ್ಪದ ಹೋಟೆಲು

## ● ಉತ್ತರಿಸುವುದು

ಕಲ್ತಪ್ಪದ ಹೋಟೆಲು ಪಾಠ ಭಾಗವನ್ನು ಮಕ್ಕಳು ಓದಿ ಆಶಯಗ್ರಹಿಸಿಕೊಂಡ ಅನಂತರ ಕೊಟ್ಟಿರುವ ಪ್ರಶ್ನೆಗಳಿಗೆ ಪ್ರತಿಯೊಬ್ಬರೂ ಉತ್ತರ ಬರೆಯಲಿ. ಆ ಬಳಿಕ ಗುಂಪಿನಲ್ಲಿ ಕುಳಿತು ಪರಿಷ್ಕರಿಸಲಿ. ಗುಂಪಿನಿಂದ ಒಬ್ಬರಂತೆ ತರಗತಿಯಲ್ಲಿ ಮಂಡಿಸಲಿ. ಉತ್ತಮವಾಗಿ ಬರೆದು ಮಂಡಿಸಿದ ಗುಂಪನ್ನು ಅಭಿನಂದಿಸುವುದು.

## ● ಪಾತ್ರಚಿತ್ರಣ ಮಾಡುವುದು

ಕಲ್ತಪ್ಪದ ಹೋಟೆಲು ಲಲಿತ ಪ್ರಬಂಧದಲ್ಲಿ ಬರುವ ಪ್ರಮುಖ ಪಾತ್ರಗಳು ಯಾವುವು? ಎಂಬುದಾಗಿ ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವುದು. ಆ ಪಾತ್ರಗಳಲ್ಲಿ ನಿಮಗಿಷ್ಟವಾದ ಪಾತ್ರ ಯಾವುದು? ಆ ಪಾತ್ರ ಯಾಕೆ ಇಷ್ಟವಾಯಿತು? ಎಂದು ಕೇಳುವುದು. ಅನಂತರ ಆ ಪಾತ್ರದ ವ್ಯಕ್ತಿತ್ವವು ಕಥೆಯಲ್ಲಿ ಹೇಗೆ ಮೂಡಿ ಬಂದಿದೆ ಎಂಬುದಾಗಿ ಅಧ್ಯಾಪಕರು ತಿಳಿಸುವುದು. ಬಳಿಕ ಗುಂಪಿನಲ್ಲಿ ಪಾತ್ರ ಚಿತ್ರಣವನ್ನು ಬರೆದು ಮಂಡಿಸಲು ಹೇಳುವುದು. ವಿದ್ಯಾರ್ಥಿಗಳು ಮಂಡಿಸಿದ ನಂತರ ಅಧ್ಯಾಪಕರ ನೆರವಿನೊಂದಿಗೆ ಬಿಟ್ಟುಹೋದ ಅಂಶಗಳನ್ನು ಸೇರಿಸಿ ತಮ್ಮ ಬರಹಗಳನ್ನು ಪರಿಷ್ಕರಿಸಿ ಬರೆಯಲಿ.

### ಷೇಕಬ್ಬನ ಪಾತ್ರಚಿತ್ರಣ :

ಪ. ರಾಮಕೃಷ್ಣ ಶಾಸ್ತ್ರಿಯವರು ಬರೆದ 'ಕಲ್ತಪ್ಪದ ಹೋಟೆಲು' ಎಂಬ ಲಲಿತ ಪ್ರಬಂಧದ ಪ್ರಧಾನ ಪಾತ್ರವೇ ಷೇಕಬ್ಬ. ಅಜ್ಜ, ಅಪ್ಪ ಹೀಗೆ ತಲೆಮಾರಿನಿಂದ ಕಲ್ತಪ್ಪದ ಹೋಟೆಲನ್ನು ನಡೆಸುವ ಮೂಲಕವೇ ಬದುಕು ಕಟ್ಟಿಕೊಂಡವನು ಷೇಕಬ್ಬ. ಹೋಟೆಲ್ ಅಂದ ಮಾತ್ರಕ್ಕೆ ಅದು ಪಂಚತಾರಾ ಹೋಟೆಲ್ ಆಗಿರದೆ ಹಲಸಿನ ಮರದ ಕೆಳಗೆ ಆಳೆತ್ತರದ ತುಂಡುಗಳನ್ನೇ ನೆಲದಲ್ಲಿ ನಾಲ್ಕು ಕಡೆ ಕಂಬಗಳಾಗಿ ಹೂಳಿ ತಗಡಿನ ಶೀಟು ಹೊದೆಸಿ ನಿರ್ಮಾಣಗೊಂಡುದಾಗಿತ್ತು. ಅಲ್ಲಿ ವೈವಿಧ್ಯಮಯ ತಿಂಡಿಗಳಿರದೆ ಕೇವಲ ಕಲ್ತಪ್ಪವೆಂಬ ತಿಂಡಿ ಮಾತ್ರ ತಯಾರಾಗುತ್ತಿತ್ತು. ಷೇಕಬ್ಬನ ಚಾ ತಯಾರಿಯೂ ಆಕರ್ಷಕವಾಗಿತ್ತು. ಎರಡು ಪಾಟೆಗಳನ್ನು ಹಿಡಿದು ಜಲಪಾತದ ಹಾಗೆ ಒಂದರಿಂದ ಇನ್ನೊಂದಕ್ಕೆ ಭರದಿಂದ ಚಹಾವನ್ನು ಹೊಯ್ಯುವ ಮೂಲಕ ನೊರೆ ನೊರೆ ಉಕ್ಕಿ ಬರುವಂತೆ ಚಹಾವನ್ನು ಮಾಡುತ್ತಿದ್ದನು. ಹೋಟೆಲಿಗೆ ಸಂಬಂಧಿಸಿದ ಎಲ್ಲಾ ಕೆಲಸಗಳಿಗೆ ಸರ್ವರ್, ಕ್ಯಾಶರ್ ಎಲ್ಲವೂ ಅವನೇ ಆಗಿದ್ದನು. ಅವನ ಹೋಟೆಲ್‌ನಲ್ಲಿ ಸಿಗುತ್ತಿದ್ದ ವಿಶೇಷ ತಿಂಡಿ ಎಂದರೆ ಕಲ್ತಪ್ಪ. ಈ ಕಲ್ತಪ್ಪವನ್ನು ತಿನ್ನಲು ಬೆಳಕು ಹರಿಯುವ ಮೊದಲೇ ಅವನ ಹೋಟೆಲಿಗೆ ಗ್ರಾಹಕರು ಬರುತ್ತಿದ್ದರು. ಪಟ್ಟಣದ ಹೋಟೆಲನ್ನು ನೋಡಿದವರಿಗೆ ಅವನದು ಮುರುಕು ಹೋಟೆಲ್ ಆಗಿ ಕಾಣಿಸಿರಬಹುದು. ಆದರೆ ಹಳ್ಳಿಯಲ್ಲಿ ದುಡಿದು ತಿನ್ನುವ ವರ್ಗದೊಂದಿಗೆ ಅದು ಆತ್ಮೀಯ ಬಾಂಧವ್ಯವನ್ನು ಬೆಸೆದಿತ್ತು. ಕಡಿಮೆ ದುಡ್ಡಿನಲ್ಲಿ ಹೊಟ್ಟೆ ತುಂಬಾ ತಿನ್ನಬಹುದಿತ್ತು. ಯಾರಾದರೂ ಇಂದು ಹಣವಿಲ್ಲವೆಂದು ಹೇಳಿದರೆ ಷೇಕಬ್ಬ ತಲೆಬಿಸಿ ಮಾಡದೆ 'ನಾಳೆ ಕೊಡು ನೀನೇನು ಓಡಿ ಹೋಗುತ್ತೀಯಾ?' ಎಂದು ಗ್ರಾಹಕರನ್ನು ಸಮಾಧಾನಪಡಿಸುತ್ತಿದ್ದನು. ಇಲ್ಲಿ ಷೇಕಬ್ಬನ ಮಾನವೀಯ ಗುಣ ,ದಾಕ್ಷಿಣ್ಯ ಸ್ವಭಾವ ಕಂಡುಬರುತ್ತದೆ.

ಷೇಕಬ್ಬ ಹೆಚ್ಚು ಓದಿದವನಲ್ಲ, ಕುರಾನ್ ಪುಟಗಳನ್ನು ಬಿಚ್ಚಿದವನಲ್ಲ. ಆದರೂ ತನಗಾದ ವ್ಯಾಪಾರದಲ್ಲಿ ಹತ್ತರಲ್ಲಿ ಒಂದು ಪಾಲು ಬಡಬಗ್ಗರಿಗೆ ಕೊಡಬೇಕು ಎಂಬುದನ್ನು ತಿಳಿದಿದ್ದನು. ಹೆಂಡತಿ ಜೊತೆಗೆ ಮಕ್ಕಾ ಯಾತ್ರೆ ಮಾಡಬೇಕೆಂಬುದು ಅವನ ಕನಸಾಗಿತ್ತು. ಅದಕ್ಕಾಗಿ ಅವನು ಹಣವನ್ನು ಹೊಂದಿಸಿಟ್ಟಿದ್ದನು. ಆದರೆ ಅದೇ ಸಮಯಕ್ಕೆ ಅವನ ಹೋಟೆಲಲ್ಲಿ ದಿನವೂ ಬಂದು ಚಹಾ ಕುಡಿದು ಹೋಗುತ್ತಿದ್ದ ಸಂಕಣ್ಣ, ಅಕಾಲ ಮರಣಕ್ಕೆ ತುತ್ತಾದಾಗ ನಿಂತು ಹೋಗುವುದರಲ್ಲಿದ್ದ ಅವನ ಮಗಳ ಮದುವೆಯನ್ನು ಸುಸೂತ್ರ ವಾಗುವಂತೆ ಷೇಕಬ್ಬನು ಮಾಡಿದನು. ಮಕ್ಕಾ ಯಾತ್ರೆಗೆಂದು ಕೂಡಿಟ್ಟಂತಹ ಹಣವನ್ನು ನೀಡುವುದರ ಮೂಲಕ ಮಾನವೀಯತೆ ಮೆರೆದಿದ್ದನು. ಒಬ್ಬ ಹೆಣ್ಣುಮಗಳ ಮದುವೆಗೆ ಸಹಾಯ ಮಾಡಿದರೆ ಮಕ್ಕಾ ಯಾತ್ರೆಗಿಂತಲೂ ದೊಡ್ಡ ಪುಣ್ಯ ಬರುತ್ತದೆ ಎಂದು ಮಕ್ಕ ಯಾತ್ರೆಗೆ ಹೊರಡಲು ಸಿದ್ಧಳಾಗಿದ್ದ ತನ್ನ ಹೆಂಡತಿಗೆ ಸಮಾಧಾನ ಹೇಳಿದನು. ಇಲ್ಲಿ ಆತನ ಉದಾತ್ತ ಮಾನವೀಯ ಗುಣದ ಅನಾವರಣವಾಗುತ್ತದೆ.

ಒಟ್ಟಿನಲ್ಲಿ ಷೇಕಬ್ಬನ ಪಾತ್ರವು ಸರಳ ಸಜ್ಜನಿಕೆಯ ಪ್ರತೀಕವಾಗಿ ಮೂಡಿಬಂದಿದ್ದು ಸದಾಕಾಲ ಜನಮಾನಸದಲ್ಲಿ ಅಚ್ಚೊತ್ತಿ ನಿಲ್ಲುವಂತಿದೆ.

- **ದಿನಚರಿ ಬರೆಯುವುದು**

ಮನುಷ್ಯನ ಉತ್ತಮ ಹವ್ಯಾಸಗಳಲ್ಲಿ ದಿನಚರಿ ಬರೆಯುವುದೂ ಒಂದು. ಸೂರ್ಯೋದಯದಿಂದ ರಾತ್ರಿ ಮಲಗುವವರೆಗೆ ಏನೇನು? ನಡೆಯಿತು ಎಂಬುದನ್ನು ವ್ಯವಸ್ಥಿತವಾಗಿ ದಾಖಲಿಸಿಕೊಳ್ಳುವುದೇ ದಿನಚರಿ ಎನಿಸುತ್ತದೆ.

ತನ್ನ ಕಲ್ಲಿನ ಒರಳು, ಒಂದಿಷ್ಟು ಪಾತ್ರೆಗಳು, ಲೋಟತಟ್ಟೆ ಇವೆಲ್ಲವನ್ನು ರಸ್ತೆಯ ಪಕ್ಕ ಇರಿಸಿಕೊಂಡ ಷೇಕಬ್ಬ ತನ್ನ ಹಿರಿಯರು ಬಾಳಿ ಬದುಕಿದ ಸೌಧ ಕುಸಿದು ಬೀಳುತ್ತಿರುವ ದೃಶ್ಯವನ್ನು ನಿರ್ಭಾವುಕನಾಗಿ ನೋಡುತ್ತಾ ನಿಂತಿದ್ದ.

ಷೇಕಬ್ಬ ಆ ದಿನ ತನ್ನ ದಿನಚರಿಯಲ್ಲಿ ಈ ಘಟನೆಯ ಕುರಿತು ಏನು ಬರೆದಿರಬಹುದು?

ಅದನ್ನು ಕಲ್ಪಿಸಿಕೊಂಡು ವಿದ್ಯಾರ್ಥಿಗಳು ವೈಯುಕ್ತಿಕವಾಗಿ ದಿನಚರಿ ಬರೆಯಲಿ. ದಿನಚರಿಯ ಆರಂಭದಲ್ಲಿ ದಿನ ತಾರೀಕು ಇರಬೇಕು.

**ದಿನಚರಿ ಹೀಗೂ ಬರೆಯಬಹುದು**

ಮಂಗಳವಾರ

28.10.2024

ಇಂದು ನನ್ನ ಜೀವನದ ಅತ್ಯಂತ ದುಃಖದ ದಿನ. ನನ್ನ ಜೀವನಕ್ಕೆ ಏಕೈಕ ಆಧಾರವಾಗಿದ್ದ ಕಲ್ಪವೃಕ್ಷದ ಹೋಟೆಲ್ ನನ್ನ ಕಣ್ಣೆದುರಲ್ಲೇ ನೆಲಸಮವಾದ ದಿನ. ಹೊರಗಿನಿಂದ ನೋಡುವವರಿಗೆ ಇದೇನು ದೊಡ್ಡ ವಿಷಯವೇ ಅಲ್ಲ. ಆದರೆ ನನ್ನ ಪಾಲಿಗೆ ಅದು ತುಂಬಲಾರದ ನಷ್ಟವೇ ಆಗಿದೆ. ನನ್ನ ಮುತ್ತಾತ, ತಾತ, ತಂದೆಯಿಂದ ಬಳುವಳಿಯಾಗಿ ಬಂದು ನನ್ನ ಜೀವನವೂ, ಸಂವೇದನೆಯೂ ಆಗಿದ್ದ ಹೊಟೇಲನ್ನು ನನ್ನ ಕಣ್ಣೇದುರೇ ಜೆಸಿಬಿಯ ಸೊಂಡಿಲು ಎತ್ತಿ ನೆಲಕ್ಕೊಗೆದ

ಚಿತ್ರವೇ ನನ್ನ ಮನ:ಪಟಲದಲ್ಲಿ ತುಂಬಿ ನಿಂತಿದೆ. ಶೂನ್ಯವೇ ನನ್ನನ್ನು ಆವರಿಸಿದಂತಿದೆ. ಹೊತ್ತು ಮೂಡುವ ಮೊದಲೇ ಉತ್ಸಾಹದಿಂದ ಕೆಲಸದಲ್ಲಿ ತೊಡಗಲು ಸ್ಪೂರ್ತಿಯಾದ ಗ್ರಾಮದ ನಾಡಿಮಿಡಿತವೆ ಆಗಿ ಹೋಗಿದ್ದ ನನ್ನ ಹೋಟೆಲ್ ಇನ್ನಿಲ್ಲವೆಂದಾಗ ದುಃಖ ತಡೆಯಲಾಗುತ್ತಿಲ್ಲ. ನನ್ನ ಹೋಟೆಲ್‌ನ ಕಲ್ಲಪ್ಪ ತಿನ್ನಲೆಂದೇ ಜನ ಸಾಲು ಸಾಲಾಗಿ ಬರುವ ದೃಶ್ಯ ನನ್ನ ಕಣ್ಣೆದುರು ಕಾಣುತ್ತಿದೆ. ಹೋಟೆಲ್‌ನ ಕೆಲಸವನ್ನು ಬಿಟ್ಟು ಬೇರೆ ಯಾವ ಕೆಲಸ ಮಾಡಲೂ ಅಶಕ್ತನಾದ ನಾನು ಮುಂದಿನ ನನ್ನ ಜೀವನವನ್ನು ಹೇಗೆ ನಡೆಸಲಿ? ನನ್ನನ್ನೇ ನಂಬಿದ ನನ್ನ ಪತ್ನಿಯಲ್ಲಿ ನಾನು ಏನೆನ್ನಲಿ? ಭಗವಂತಾ ನೀನೇ ನನಗೆ ದಾರಿ ತೋರಿಸು.

- **ಜಾಹೀರಾತು ತಯಾರಿಸುವುದು**

ಪತ್ರಿಕೆಯಲ್ಲಿ ಬಂದಿರುವ ವಿವಿಧ ರೀತಿಯ ಜಾಹೀರಾತಿನ ತುಣುಕುಗಳನ್ನು ವಿದ್ಯಾರ್ಥಿಗಳಿಗೆ ನೀಡುವುದು. ವಿದ್ಯಾರ್ಥಿಗಳು ಗುಂಪಿನಲ್ಲಿ ಕುಳಿತು ಚರ್ಚಿಸಿ ಜಾಹೀರಾತನ್ನು ತಯಾರಿಸಲಿ. ಗುಂಪಿನಿಂದ ಒಬ್ಬರಂತೆ ಮಂಡಿಸಲಿ. ಬಳಿಕ ಪರಿಷ್ಕರಿಸಿ ತಮ್ಮ ಚಟುವಟಿಕೆಯ ಪುಸ್ತಕದಲ್ಲಿ ಬರೆದುಕೊಳ್ಳಲಿ.

**ಜಾಹೀರಾತನ್ನು ಹೀಗೂ ಬರೆಯಬಹುದಲ್ಲವೇ?**

**ಬನ್ನಿರಿ! ಸವಿಯಿರಿ!! ಪ್ರೋತ್ಸಾಹಿಸಿರಿ!!!**

ಶುಚಿ-ರುಚಿಯಾದ ತಿಂಡಿ ತಿನಿಸುಗಳನ್ನು ಸವಿಯಲು ಇಂದೇ ಭೇಟಿ ನೀಡಿರಿ

**ಹೋಟೆಲ್ ಅಭಿಮಾನ್**

ಮುಖ್ಯ ರಸ್ತೆ ಕಾಸರಗೋಡು

- **ಕ್ಯಾಟರಿಂಗ್ ವ್ಯವಸ್ಥೆ ಇದೆ.**
- **ಹೋಮ್ ಡೆಲಿವರಿ ವ್ಯವಸ್ಥೆ ಇದೆ.**
- **ಸಾಂಪ್ರದಾಯಿಕ ತಿಂಡಿ ತಿನಿಸುಗಳು ಲಭ್ಯವಿವೆ.**
- **ಎಲ್ಲಾ ರೀತಿಯ ಸ್ವಾದಿಷ್ಟಕರವಾದ ತಿಂಡಿ ತಿನಿಸುಗಳನ್ನು ತಯಾರಿಸಿಕೊಡಲಾಗುವುದು.**

ಶುಚಿ ರುಚಿಯಾದ ಆಹಾರ ಸವಿಯಿರಿ ಉತ್ತಮ ಆರೋಗ್ಯ ಪಡೆಯಿರಿ

- **ಕಥೆ ಮುಂದುವರಿಸಿ ಬರೆಯುವುದು**

‘ಷೇಕಬ್ಬನ ಹೋಟೆಲು’ ಪಾಠದ ಘಟನೆಗಳನ್ನು ವಿದ್ಯಾರ್ಥಿಗಳಲ್ಲಿ ಅನುಕ್ರಮವಾಗಿ ಹೇಳಿಸುವುದು. ಕೊನೆಗೆ ಜೀವನ ನಿರ್ವಹಣೆಯ ಏಕ ಮಾರ್ಗವಾಗಿದ್ದ ಷೇಕಬ್ಬನ ಹೋಟೆಲು ಪತನಗೊಂಡಿತು. ಆ ಬಳಿಕ ಅವನು ತನ್ನ ಜೀವನವನ್ನು ಹೇಗೆ ಸಾಗಿಸಿರಬಹುದು? ಊಹಿಸಿ ಹೇಳಲು ವಿದ್ಯಾರ್ಥಿಗಳಿಗೆ ಸೂಚಿಸುವುದು. ಅದನ್ನು ಸಂಕ್ಷಿಪ್ತವಾಗಿ ಕರೆಹಲಗೆಯಲ್ಲಿ ಬರೆಯುವುದು. ಇವುಗಳ ಆಧಾರದಲ್ಲಿ ವಿದ್ಯಾರ್ಥಿಗಳು ವೈಯಕ್ತಿಕವಾಗಿ ಕಥೆಯನ್ನು ಮುಂದುವರಿಸಿ ಬರೆಯಲಿ. ನಿರ್ದಿಷ್ಟ ಸಮಯದ ಬಳಿಕ ಮಂಡಿಸಲು ತಿಳಿಸುವುದು.

**ವಿದ್ಯಾರ್ಥಿಗಳಲ್ಲಿ ಈ ರೀತಿಯ ಅಭಿಪ್ರಾಯಗಳು ಮೂಡಿಬಂದಿರಬಹುದು**

- ಉದ್ಯೋಗ ಕಳೆದುಕೊಂಡ ಷೇಕಬ್ಬನು ತನ್ನ ಮಗ ಕೆಲಸ ಮಾಡುತ್ತಿದ್ದ ದೂರದೂರಿಗೆ ಹೋಗಿ ಅಲ್ಲಿಯೇ ನೆಲೆಸಿದನು.
- ಉದ್ಯೋಗ ಕಳೆದುಕೊಂಡ ಆರಂಭದಲ್ಲಿ ಷೇಖಬ್ಬನು ಬಹಳ ದುಃಖಿತನಾಗಿದ್ದನು. ಆದರೆ ಧೃತಿಗೆಡದೆ, ಛಲಬಿಡದೆ ಅದೇ ಗ್ರಾಮದ ಬೇರೊಂದು ಪಾರ್ಶ್ವದಲ್ಲಿ ಹೋಟೆಲೊಂದನ್ನು ಸ್ಥಾಪಿಸಿದನು.
- ವಿದೇಶದಲ್ಲಿ ನೆಲೆಸಿದ್ದ ತನ್ನ ಮಗನ ಬಳಿಗೆ ಹೋದ ಷೇಕಬ್ಬ ಮಗನ ಹೋಟೆಲ್ ಉದ್ಯಮದೊಂದಿಗೆ ಕೈಜೋಡಿಸಿದನು.
- .......................
- .........................

ಈ ರೀತಿಯ ವಿಚಾರಗಳನ್ನು ಮುಂದಿಟ್ಟುಕೊಂಡು ವಿದ್ಯಾರ್ಥಿಗಳು ಕಥೆಯನ್ನು ಮುಂದುವರಿಸಿ ಬರೆಯಲಿ. ಕಥೆಗೆ ಸೂಕ್ತವಾದ ಶೀರ್ಷಿಕೆ ಇರಲಿ. ಉತ್ತಮವಾಗಿ ಬರೆದು ಮಂಡಿಸಿದವರನ್ನು ಅಭಿನಂದಿಸುವುದು. ತರಗತಿಯ ಎಲ್ಲಾ ರಚನೆಗಳನ್ನು ಒಟ್ಟಾಗಿಸಿ ಕಥಾಸಂಕಲನವನ್ನು ತಯಾರಿಸುವುದು. ತರಗತಿಯ ಸಾಹಿತ್ಯ ಸಭೆಯಲ್ಲಿ ಅದನ್ನು ಬಿಡುಗಡೆಗೊಳಿಸುವುದು.

- **ಸಂಚಿಕೆ ತಯಾರಿಸುವುದು**

ವಿದ್ಯಾರ್ಥಿಗಳು ‘ಕಲ್ತಪ್ಪದ ಹೋಟೆಲು’ ಎಂಬ ಪಾಠವನ್ನು ಈಗಾಗಲೇ ಓದಿ ಆಶಯ ಗ್ರಹಣ ಮಾಡಿದ್ದಾರೆ. ಇದರ ಆಧಾರದಲ್ಲಿ ಗ್ರಾಮೀಣ ತಿಂಡಿಗಳ ಕುರಿತು ಲಘು ಚರ್ಚೆ ನಡೆಸುವುದು. ಗ್ರಾಮೀಣ ತಿಂಡಿಗಳ ಪ್ರಾಧಾನ್ಯದ ಕುರಿತು ಚರ್ಚಿಸುವುದು. ಬಳಿಕ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ ಗ್ರಾಮೀಣ ತಿಂಡಿಯೊಂದರ ಹೆಸರು ಹಾಗೂ ಅದನ್ನು ತಯಾರಿಸುವ ವಿಧಾನವನ್ನು ಬರೆದು ತರಲು ತಿಳಿಸುವುದು. ಅಗತ್ಯವಿದ್ದರೆ ಮನೆಯಲ್ಲಿ ಹಿರಿಯರ ಸಹಾಯವನ್ನು

ಪಡೆದುಕೊಳ್ಳಲು ಸೂಚಿಸುವುದು. ವಿದ್ಯಾರ್ಥಿಗಳು ಬರೆದು ತಂದ ಬರಹಗಳನ್ನೆಲ್ಲ ಒಟ್ಟು ಸೇರಿಸಿ ಸಂಚಿಕೆಯೊಂದನ್ನು ತಯಾರಿಸಲಿ. ವಿದ್ಯಾರ್ಥಿಗಳಲ್ಲಿ ಒಬ್ಬರು ಸಂಪಾದಕರಾಗಲಿ. ವಿದ್ಯಾರ್ಥಿಗಳು ಸಂಚಿಕೆಯ ಸ್ವರೂಪವನ್ನು ಹಿಂದಿನ ತರಗತಿಯಲ್ಲಿ ತಿಳಿದಿರುತ್ತಾರೆ. ಸಂಚಿಕೆಗೆ ಶೀರ್ಷಿಕೆ, ಮುನ್ನುಡಿಯನ್ನು ಬರೆಯುವಂತೆ ವಿದ್ಯಾರ್ಥಿಗಳಿಗೆ ಅಧ್ಯಾಪಕರು ಸೂಚನೆಯನ್ನು ನೀಡುವುದು. ಸೂಚನೆಯ ಆಧಾರದಲ್ಲಿ ಸಂಚಿಕೆಯನ್ನು ತಯಾರಿಸಲಿ. ಶಾಲಾ ಅಸೆಂಬ್ಲಿಯಲ್ಲಿ ಮುಖ್ಯೋಪಾಧ್ಯಾಯರ ನೇತೃತ್ವದಲ್ಲಿ ಸಂಚಿಕೆಯನ್ನು ಬಿಡುಗಡೆಗೊಳಿಸುವುದು.

- **ಓದುಗರ ಓಲೆಗೆ ಪತ್ರ ಬರೆಯುವುದು**

ಅಧ್ಯಾಪಕರು ವಿದ್ಯಾರ್ಥಿಗಳ ಜೊತೆಗೆ ಪತ್ರಿಕೆಗಳಲ್ಲಿ ಪ್ರಕಟವಾಗುವ ಓದುಗರ ಓಲೆಯ ಕುರಿತು ಲಘು ಚರ್ಚೆ ನಡೆಸುವುದು. ಬಳಿಕ ಕೆಲವೊಂದು ಪ್ರಶ್ನೆಗಳನ್ನು ಕೇಳುವುದು.

- ಓದುಗರ ಓಲೆ ಎಂದರೇನು?
- ಓದುಗರ ಓಲೆ ಬರೆಯುವವರು ಯಾರು?
- ಇದರ ಉದ್ದೇಶವೇನು?

ಮುಂತಾದ ಪ್ರಶ್ನೆಗಳನ್ನು ಕೇಳಿ ವಿದ್ಯಾರ್ಥಿಗಳಲ್ಲಿ ಚರ್ಚಿಸುವುದು. ಬಳಿಕ ಅಧ್ಯಾಪಕರು ಸಂಪಾದಕರಿಗೆ ಬರೆಯುವ ಪತ್ರವೇ, ಓದುಗರ ಓಲೆಯಾಗಿದೆ. (Letter to editor) ಓದುಗರ ಓಲೆ, ವಾಚಕರ ವಾಣಿ, ದೂರುಗಂಟೆ ಎಂಬೀ ಶೀರ್ಷಿಕೆಗಳ ಮೂಲಕ ದಿನಪತ್ರಿಕೆಗಳಲ್ಲಿ ಇದನ್ನು ಕಾಣಬಹುದು. ಯಾವುದೇ ಒಂದು ವಿಚಾರದ ಕುರಿತು ಸಾರ್ವಜನಿಕರಿಗೆ ಮನವರಿಕೆ ಮಾಡುವುದರ ಜೊತೆಗೆ ಸಂಬಂಧಪಟ್ಟ ಅಧಿಕಾರಿಗಳ ಕಣ್ಣು ತೆರೆಸಲು ಇದು ಬಳಸಲ್ಪಡುತ್ತದೆ ಎಂಬ ವಿಚಾರವನ್ನು ಮನದಟ್ಟು ಮಾಡುವುದು.

ಬಳಿಕ ವಿದ್ಯಾರ್ಥಿಗಳನ್ನು ಗುಂಪಿನಲ್ಲಿ ಕುಳ್ಳಿರಿಸಿ ಓದುಗರ ಓಲೆ ವಿಭಾಗದ ಪತ್ರಿಕಾ ತುಣುಕುಗಳನ್ನು ನೀಡಿ ಓದಲು ಅವಕಾಶವನ್ನು ನೀಡುವುದು. ಅನಂತರ ಓದುಗರ ಓಲೆಯ ಸ್ವರೂಪದ ಕುರಿತು ಚರ್ಚಿಸುವುದು.

**ಚರ್ಚೆಯಲ್ಲಿ ಇರಬೇಕಾದ ಅಂಶಗಳು**

- ಶೀರ್ಷಿಕೆ
- ದಿನಾಂಕ
- ಸಂಬೋಧನೆ
- ನಿರ್ದಿಷ್ಟ ಸ್ಪಷ್ಟ ವಿಚಾರದ ವಿವರ
- ಬರೆದವರ ಹೆಸರು ಮತ್ತು ಸ್ಥಳ

ಈ ಎಲ್ಲಾ ವಿಚಾರಗಳನ್ನು ಕುರಿತು ಚರ್ಚಿಸಿದ ಬಳಿಕ ವಿದ್ಯಾರ್ಥಿಗಳು ಗುಂಪಿನಲ್ಲಿ ಆಯ್ದ ವಿಷಯವೊಂದರ ಕುರಿತು

ಓದುಗರ ಓಲೆಗೆ ಪತ್ರವೊಂದನ್ನು ಬರೆಯಲಿ. ಬಳಿಕ ಗುಂಪಿನಿಂದ ಒಬ್ಬರಂತೆ ಮಂಡಿಸಲಿ. ಮಂಡನೆ ಸಂದರ್ಭದಲ್ಲಿ ಬಿಟ್ಟುಹೋದ ಅಂಶಗಳಿದ್ದಲ್ಲಿ ಸೇರಿಸಿ ಪರಿಷ್ಕರಿಸಿ ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆದುಕೊಳ್ಳಲಿ.

**ಓದುಗರ ಓಲೆಗೆ ಪತ್ರ ಹೀಗೂ ಇರಬಹುದಲ್ಲವೇ?**

**ನಮ್ಮ ನೋವಿಗೆ ಸ್ಪಂದಿಸುವವರಾರು?**

ಪ್ರಿಯರೇ,

ಇತ್ತೀಚಿನ ದಿನಗಳಲ್ಲಿ ರಸ್ತೆ ಅಗಲೀಕರಣದ ಕೆಲಸವು ಭರದಿಂದ ಸಾಗುತ್ತಿದ್ದು ಇದರಿಂದಾಗಿ ತಮ್ಮ ಹೊಟ್ಟೆಪಾಡಿಗೆ ದುಡಿಯುತ್ತಿದ್ದ ಹಲವಾರು ಮಂದಿಯ ಉದ್ಯೋಗಕ್ಕೆ ಸಂಚಕಾರ ಬಂದಿದೆ. ರಸ್ತೆ ಬದಿಯಲ್ಲಿ ಸಣ್ಣಪುಟ್ಟ ಹೋಟೆಲು, ಅಂಗಡಿಗಳನ್ನು ನಡೆಸುತ್ತಿದ್ದ ಅದೆಷ್ಟೋ ಮಂದಿ ತಮ್ಮ ಕೆಲಸಗಳನ್ನು ಕಳೆದುಕೊಂಡು ನಿರ್ಗತಿಕರಾಗುವ ಪರಿಸ್ಥಿತಿ ಬಂದೊದಗಿದೆ. ರಸ್ತೆ ಅಗಲೀಕರಣಕ್ಕಾಗಿ ರಸ್ತೆಯ ಇಕ್ಕೆಲಗಳಲ್ಲಿರುವ ಎಲ್ಲಾ ಅಂಗಡಿ ಮುಂಗಟ್ಟುಗಳನ್ನು ತೆರವುಗೊಳಿಸಲಾಗಿದೆ. ತಮ್ಮ ಕುಟುಂಬ ನಿರ್ವಹಣೆಗೆ ಇದೇ ಜೀವನೋಪಾಯವಾಗಿರುವ ಕಾರಣ ಬೇರೆ ದಾರಿ ಇಲ್ಲದೆ ಅವರೆಲ್ಲ ಅತಂತ್ರರಾಗಿದ್ದಾರೆ. ಇಂಥವರ ನೋವಿಗೆ ಸ್ಪಂದಿಸುವುದಕ್ಕಾಗಿ ಸರಕಾರ ಎಚ್ಚೆತ್ತುಕೊಳ್ಳಬೇಕಾಗಿದೆ. ನಗರೀಕರಣದ ಕಾರಣದಿಂದ ಉದ್ಯೋಗ ವಂಚಿತರಾದ ಈ ಬಡ ಜನತೆಗೆ ಉದ್ಯೋಗವನ್ನು ಕಲ್ಪಿಸಿ ಕೊಡುವತ್ತ ಸಂಬಂಧಪಟ್ಟ ಇಲಾಖೆಯವರು ಗಮನಹರಿಸಬೇಕಾಗಿದೆ. ಎಲ್ಲರೂ ನೊಂದವರ ಕಂಬನಿ ಒರೆಸುವ ಕೈಗಳಾಗಬೇಕಾಗಿದೆ.

ಸ್ಥಳ: ಕಾಸರಗೋಡು

ದಿನಾಂಕ: 28.10.2024 ಇತಿ

ನೊಂದ ನಾಗರಿಕ

- **ಅಭಿಪ್ರಾಯ ಟಿಪ್ಪಣಿ ಬರೆಯುವುದು**

ವಿದ್ಯಾರ್ಥಿಗಳು 'ಷೇಕಬ್ಬನ ಹೋಟೆಲು' ಪಾಠವನ್ನು ಓದಿರುವರು. ಷೇಕಬ್ಬನ ಹೋಟೆಲು ಆ ಗ್ರಾಮದ ಭಾವನಾತ್ಮಕ ಕೊಂಡಿಯಾಗಿತ್ತು. ಆ ಹೋಟೆಲಿನಲ್ಲಿ ಅನೇಕ ವಿಚಾರಗಳು ಚರ್ಚೆಯಾಗುತ್ತಿದ್ದವು. ಹೋಟೆಲಿಗೆ ಸಂಬಂಧಿಸಿದಂತೆ ಪಾಠದಲ್ಲಿ ಬಂದಿರುವ ವಿಚಾರಗಳನ್ನು ಅಥವಾ ಸನ್ನಿವೇಶಗಳನ್ನು ವಿದ್ಯಾರ್ಥಿಗಳಿಂದ ಹೇಳಿಸಿ ಕರೆಹಲಗೆಯಲ್ಲಿ ಬರೆಯುವುದು. ಬಿಟ್ಟುಹೋದ ಅಂಶಗಳನ್ನು ಸೇರಿಸುವುದು.

**ಉದಾ :**

- ಪಟೇಲರ ಮನೆಗೆ ಗುರುವಾರ ಕ್ಷೌರಿಕ ಹೋಗಬೇಕಿದ್ದರೆ ಷೇಕಬ್ಬನಲ್ಲಿ ಹೇಳಿದರೆ ನಡೆಯುತ್ತಿತ್ತು.
- ರಾಮಣ್ಣನವರ ಮಗಳ ಮದುವೆಗೆ ಹಾಲು ಬೇಕಾದಲ್ಲಿ ಷೇಕಬ್ಬನಲ್ಲಿ ಹೇಳಿದರೆ ಸಾಕಿತ್ತು.

- ವಿದ್ಯುತ್ ಸಮಸ್ಯೆ ಉಂಟಾದಾಗ ಲೈನ್ ಮ್ಯಾನ್ ಗಳ ಅವಶ್ಯಕತೆ ಇದ್ದಲ್ಲಿ ನೇರ ಷೇಕಬ್ಬನ ಹೋಟೆಲಿಗೆ ಹೋಗಿ ಹೇಳಿದರೆ ಸಾಕು. ವಿರಾಮದ ವೇಳೆಯಲ್ಲಿ ವಿಶ್ರಾಂತಿ ಪಡೆಯುತಿದ್ದ ಲೈನ್ ಮ್ಯಾನ್ ಗಳು ಲಭ್ಯವಾಗುತಿದ್ದರು.
- ಷೇಕಬ್ಬನ ಹೋಟೆಲ್ ರಾಜಕೀಯ ಚರ್ಚೆಯ ವೇದಿಕೆಯು ಆಗಿತ್ತು.
- ಹಿಂದಿನ ರಾತ್ರಿ ನೋಡಿದ ಯಕ್ಷಗಾನದ ಚರ್ಚೆಯೂ ಅಲ್ಲಿ ನಡೆಯುತ್ತಿತ್ತು.
- .............ಇತ್ಯಾದಿ.

ಈ ಎಲ್ಲಾ ವಿಚಾರಗಳ ಕುರಿತು ಲಘು ಚರ್ಚೆ ನಡೆಸಿದ ಬಳಿಕ ವಿದ್ಯಾರ್ಥಿಗಳಲ್ಲಿ ತಮ್ಮ ಊರಿನಲ್ಲಿರುವ ಹೋಟೆಲ್ ಅಥವಾ ಅಂಗಡಿಗಳಲ್ಲಿ ಚರ್ಚೆಯಾಗುವ ಅಥವಾ ಚರ್ಚೆಯಾಗಬಹುದಾದ ವಿಚಾರಗಳು ಹಾಗೂ ಸನ್ನಿವೇಶಗಳನ್ನು ಊಹಿಸಿ ಪಟ್ಟಿ ಮಾಡಲು ತಿಳಿಸುವುದು.

**ಉದಾ :**

- ಕೃಷಿಗೆ ಸಂಬಂಧಿಸಿದ ಚರ್ಚೆಗಳು
- ರಾಜಕೀಯ ಚರ್ಚೆಗಳು
- ಹವಾಮಾನದ ಕುರಿತ ಚರ್ಚೆಗಳು
- ಊರಿನ ಮನೆಗಳಲ್ಲಿ ಕಂಡು ಬರುವ ಅನಾರೋಗ್ಯ, ಅಕಾಲಿಕ ಮರಣ, ಮದುವೆ, ಮುಂಜಿ..... ಇತ್ಯಾದಿ

ಎಲ್ಲ ವಿಚಾರಗಳನ್ನು ಪಟ್ಟಿ ಮಾಡಿದ ಬಳಿಕ ವಿದ್ಯಾರ್ಥಿಗಳನ್ನು ವಿವಿಧ ಗುಂಪುಗಳಲ್ಲಿ ಕುಳ್ಳಿರಿಸಿ ತಾವು ಬರೆದ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಅಭಿಪ್ರಾಯ ಟಿಪ್ಪಣಿಯನ್ನು ಬರೆಯಲು ತಿಳಿಸುವುದು. ಗುಂಪಿನಿಂದ ಒಬ್ಬರಂತೆ ಮಂಡಿಸಲು ತಿಳಿಸುವುದು.ಉತ್ತಮವಾಗಿ ಬರೆದು ಮಂಡಿಸಿದ ಗುಂಪನ್ನು ಅಭಿನಂದಿಸುವುದು.

## ಅಭಿಪ್ರಾಯ ಟಿಪ್ಪಣಿ ಹೀಗೂ ಇರಬಹುದು

'ಕಲ್ಲಪ್ಪದ ಹೋಟೆಲು' ಪಾಠ ಭಾಗದಲ್ಲಿ ಬರುವ ಷೇಕಬ್ಬನ ಹೋಟೆಲ್, ಹಳ್ಳಿ ಜೀವನದ ಪ್ರತೀಕವಾಗಿದೆ. ಅಲ್ಲಿ ತಮ್ಮ ಜೀವನದ ಸುಖ ದುಃಖಗಳ ಪರಸ್ಪರ ಹಂಚಿಕೆಯಾಗುತ್ತಿತ್ತು. ಏನೇ ಸಮಸ್ಯೆಗಳಿದ್ದರೂ ಚರ್ಚಿಸಿ ಬಗೆಹರಿಸಲಾಗುತ್ತಿತ್ತು. ಉದಾಹರಣೆಗೆ ಸಂಕಣ್ಣನ ಅಕಾಲಿಕ ಮರಣದಿಂದ ನಿಂತು ಹೋಗುವುದರಲ್ಲಿದ್ದ ಆತನ ಮಗಳ ವಿವಾಹವನ್ನು ಸ್ವತಃಷೇಕಬ್ಬನೆ ಮಕ್ಕಾ ಯಾತ್ರೆಗೆಂದು ಕೂಡಿಟ್ಟ ಹಣದಿಂದ ನೆರವೇರಿಸಿದನು. ಅಲ್ಲಿ ಹೋಟೆಲ್ ಎಂಬುದು ಕೇವಲ ವ್ಯವಹಾರದ ಒಂದು ಕೇಂದ್ರವಾಗಿರದೆ ಭಾವನಾತ್ಮಕ ಸಂಬಂಧಗಳ ಸಂಗಮ ತಾಣವೂ ಆಗಿತ್ತು. ಉದಾಹರಣೆಗೆ ವಿದ್ಯುತ್ ಕಂಬದಲ್ಲಿ ಸಮಸ್ಯೆ ಕಂಡು ಬಂದು ಲೈನ್ ಮ್ಯಾನ್ ನ್ನು ಸಂಪರ್ಕಿಸಬೇಕಾದಲ್ಲಿ ನೇರವಾಗಿ ಷೇಕಬ್ಬನ ಹೋಟೆಲಿನ ದಾರಿ ಹಿಡಿದರೆ ಸಾಕು. ವಿರಾಮ ವೇಳೆಯಲ್ಲಿ ಹೋಟೆಲಿನ ಹೊರಾಂಗಣದಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಲೈನ್ ಮ್ಯಾನ್‌ಗಳ

ಸೇವೆಯು ಲಭ್ಯವಾಗುತ್ತಿತ್ತು.

ಇಂದಿನ ಕಾಲದಲ್ಲಿ ಸಮಾನ ಮನಸ್ಕರ ಒಂದು ವಾಟ್ಸಪ್ ಗ್ರೂಪ್ ಹೇಗೆ ಕಾರ್ಯನಿರ್ವಹಿಸುತ್ತದೆಯೋ ಅದೇ ರೀತಿ ಹಿಂದಿನ ಕಾಲದ ಹೋಟೆಲುಗಳು ಸಮಾನ ಮನಸ್ಕರ ಒಗ್ಗೂಡುವಿಕೆಯ ತಾಣವಾಗಿದ್ದವು.

ಇಂದು ನಮ್ಮ ಹಳ್ಳಿಗಳಲ್ಲಿಯೂ ಸಹ ಕೆಲವೊಂದು ಕಡೆಗಳಲ್ಲಿ ಭಾವನಾತ್ಮಕ ಸಂಬಂಧಗಳನ್ನು ಬೆಸೆಯುವ ಷೇಕಬ್ಬನ ಹೋಟೆಲ್ ಅನ್ನು ಹೋಲುವ ಹೋಟೆಲ್ ಗಳು ಹಾಗೂ ಅಂಗಡಿಗಳು ಕಾಣಸಿಗುತ್ತವೆ. ಇವುಗಳನ್ನು ಗ್ರಾಮದ ಜೀವನಾಡಿ ಎಂದರು ತಪ್ಪಿಲ್ಲ. ಪ್ರತಿಯೊಂದು ಮನೆ ಮನದ ನೋವು ನಲಿವಿಗೆ ಇಲ್ಲಿ ಸ್ಪಂದನವಿದೆ. ಕೃಷಿಗೆ ಸಂಬಂಧಿಸಿದ ಚರ್ಚೆಗಳು ರಾಜಕೀಯ ಚರ್ಚೆಗಳು ಇಲ್ಲಿ ನಿತ್ಯ ನಡೆಯುತ್ತವೆ. ಅಡಿಕೆ, ತೆಂಗು, ಭತ್ತ ಇತ್ಯಾದಿ ಬೆಳೆಗಳ ಬೆಲೆಗಳ ಕುರಿತ ಧಾರಾಳ ಮಾತುಕತೆ ನಡೆಯುತ್ತದೆ. ಕಾಲಕಾಲಕ್ಕೆ ಸುರಿಯಬೇಕಾಗಿದ್ದ ಮಳೆ ಅತಿವೃಷ್ಟಿ ಅನಾವೃಷ್ಟಿಯ ಹವಾಮಾನ ವೈಪರೀತ್ಯದ ಕುರಿತು ಗಂಭೀರ ಚಿಂತನೆ ನಡೆಯುತ್ತದೆ. ಗ್ರಾಮದಲ್ಲಿರುವ ಮನೆಗಳಲ್ಲಾಗುವ ಅನಾರೋಗ್ಯ ಅಕಾಲಿಕ ಮರಣಗಳ ಕುರಿತ ಸಂತಾಪ ವ್ಯಕ್ತವಾಗುತ್ತದೆ.

ಒಟ್ಟಿನಲ್ಲಿ ಹಳ್ಳಿಗಳಲ್ಲಿ ಕಂಡು ಬರುವ ಸಣ್ಣಪುಟ್ಟ ಅಂಗಡಿಗಳು ಹೋಟೆಲ್ ಗಳು ಗ್ರಾಮದ ಉಸಿರು ಎನ್ನಬಹುದು. ಇಲ್ಲಿ ಆಧುನಿಕತೆಯ ಸೋಂಕಿನಿಂದ ದೂರವಾದ ಹಳ್ಳಿ ಜನರ ಮುಗ್ಧ ಮನಸುಗಳ ಅನಾವರಣವಾಗುತ್ತದೆ. ಇದು ಕೇವಲ ವ್ಯಾವಹಾರಿಕ ನೋಟವನ್ನು ಒಳಗೊಳ್ಳದೆ ಗ್ರಾಮೀಣ ಜನರ ಬದುಕಿನ ಪ್ರತಿಫಲನವಾಗಿದೆ ಎಂದು ಹೇಳಬಹುದು.

## ನ್ಯಾಯದ ತಕ್ಕಡಿ

**ವಿಶದೀಕರಣ :**

ಸೇರು - ತೂಕದ ಮಾನ

- **ಉತ್ತರಿಸುವುದು**

ನ್ಯಾಯದ ತಕ್ಕಡಿ ನಾಟಕ ಭಾಗವನ್ನು ಮಕ್ಕಳು ಓದಿ ಆಶಯಗ್ರಹಿಸಿಕೊಂಡ ಅನಂತರ ಕೊಟ್ಟಿರುವ ಪ್ರಶ್ನೆಗಳಿಗೆ ಪ್ರತಿಯೊಬ್ಬರೂ ಉತ್ತರ ಬರೆಯಲಿ. ಆ ಬಳಿಕ ಗುಂಪಿನಲ್ಲಿ ಕುಳಿತು ಪರಿಷ್ಕರಿಸಲಿ. ಗುಂಪಿನಿಂದ ಒಬ್ಬರಂತೆ ತರಗತಿಯಲ್ಲಿ ಮಂಡಿಸಲಿ. ಉತ್ತಮವಾಗಿ ಬರೆದು ಮಂಡಿಸಿದ ಗುಂಪನ್ನು ಅಭಿನಂದಿಸುವುದು.

## ● ಪಾತ್ರ ಚಿತ್ರಣ ಮಾಡುವುದು

### ಚಮನ್ ಲಾಲ್‌ನ ಪಾತ್ರ ಚಿತ್ರಣ

‘ನ್ಯಾಯದ ತಕ್ಕಡಿ’ ನಾಟಕದಲ್ಲಿ ಬರುವ ಪ್ರಮುಖ ಪಾತ್ರವೇ ಚಮನ್ ಲಾಲ್. ಈತನು ಕುಶನಗರದಲ್ಲಿ ಬಡ್ಡಿ ವ್ಯವಹಾರವನ್ನು ಮಾಡುತ್ತಿದ್ದ ಒಬ್ಬ ವ್ಯಕ್ತಿ. ಇವನಿಂದ ಜನರು ಸಾಲವನ್ನು ಪಡೆದುಕೊಳ್ಳುತ್ತಿದ್ದರು. ಸಾಲ ಕೊಡುವ ಸಂದರ್ಭದಲ್ಲಿ ಈತನು ಕರಾರು ಪತ್ರವನ್ನು ಸಿದ್ಧಪಡಿಸುತ್ತಿದ್ದನು. ಕರಾರು ಪತ್ರದಂತೆ ಸಾಲವನ್ನು ಕ್ಲಪ್ತ ಸಮಯಕ್ಕೆ ತೀರಿಸಲು ಸಾಧ್ಯವಾಗದಿದ್ದರೆ ಸಾಲಗಾರರ ಸೊತ್ತುಗಳನ್ನು ವಶಪಡಿಸುವುದು. ಹಾಗೂ ಬೇರೆ ಬೇರೆ ರೀತಿಯಲ್ಲಿ ಹಿಂಸಿಸುವುದು ಆತನ ಸ್ವಭಾವವಾಗಿತ್ತು. ಇದಕ್ಕೆ ಉತ್ತಮ ನಿದರ್ಶನವಾಗಿ ಕುಶನಗರದಲ್ಲಿ ರಾಜಕುಮಾರ್ ಎಂಬ ವರ್ತಕನಿಗೆ 5,000 ವರಹಗಳನ್ನು ಸಾಲಕೊಟ್ಟ ಆತ ಕರಾರು ಪತ್ರವೊಂದನ್ನು ಸಿದ್ಧಪಡಿಸುತ್ತಾನೆ. ಮೂರು ತಿಂಗಳ ಒಳಗೆ ಸಾಲವನ್ನು ಮರುಪಾವತಿ ಮಾಡದಿದ್ದರೆ ತನ್ನ ಹೃದಯದ ಸಮೀಪದಿಂದ ಒಂದು ಸೇರು ಮಾಂಸವನ್ನು ತೆಗೆದುಕೊಳ್ಳಲು ಅನುಮತಿಯನ್ನು ಸ್ವತಃ ರಾಜಕುಮಾರನೇ ನೀಡುತ್ತಾನೆ. ಮೂರು ತಿಂಗಳು ಕಳೆದರೂ ಸಾಲ ಮರುಪಾವತಿಯಾಗದುದನ್ನು ತಿಳಿದು ಚಮನ್ ಲಾಲ್ ಕರಾರು ಪತ್ರವನ್ನು ಮುಂದಿಟ್ಟು ನ್ಯಾಯಕ್ಕಾಗಿ ರಾಜನ ಬಳಿಗೆ ತೆರಳುತ್ತಾನೆ. ಅಲ್ಲಿ ತನ್ನ ವಾದವನ್ನು ಮುಂದಿಡುತ್ತಾನೆ. ವಾದವನ್ನು ಕೇಳಿದ ರಾಜನು ವಸುಮಿತ್ರನನ್ನು ಕರೆದು ತೀರ್ಪು ನೀಡಲು ಸೂಚಿಸುತ್ತಾನೆ. ಚಮನ್ ಲಾಲ್ ನ ದುರುದ್ದೇಶವನ್ನು ಅರಿತ ವಸುಮಿತ್ರ ಸರಿಯಾದ ತೀರ್ಪನ್ನು ನೀಡಿ ಚಮನ್ ಲಾಲ್ ಗರ್ಭಭಂಗ ಮಾಡುತ್ತಾನೆ. ರಾಜಕುಮಾರ್ ನಿಗೆ ನ್ಯಾಯ ಒದಗಿಸಿ ಕೊಡುತ್ತಾನೆ.

ಒಟ್ಟಿನಲ್ಲಿ ಅಹಂಕಾರಿಯೂ, ಹಣದ ಮದ ಉಳ್ಳವನಾಗಿಯೂ, ಕ್ರೂರಿಯೂ ಆಗಿರುವ ಚಮನ್ ಲಾಲ್ ಈ ನಾಟಕದಲ್ಲಿ ಖಳನಾಯಕನ ಪಾತ್ರದಲ್ಲಿ ಮೂಡಿಬಂದಿದ್ದಾನೆ.

## ● ಸಂದೇಶ ಬರೆಯುವುದು

‘ನ್ಯಾಯದ ತಕ್ಕಡಿ’ ಪಾಠದ ಪ್ರಮುಖ ಘಟನೆಗಳನ್ನು ಅನುಕ್ರಮವಾಗಿ ವಿದ್ಯಾರ್ಥಿಗಳಲ್ಲಿ ಬಾಯ್ದೆರೆಯಾಗಿ ಹೇಳಿಸುವುದು. ಹೀಗೆ ಕಥೆಯನ್ನು ವಿದ್ಯಾರ್ಥಿಗಳಿಗೆ ನೆನಪಿಸುವುದು. ಬಳಿಕ ಈ ನಾಟಕದಲ್ಲಿ ಪ್ರಮುಖವಾದ ಆಶಯವೇನು? ಎಂಬ ಪ್ರಶ್ನೆಯನ್ನು ವಿದ್ಯಾರ್ಥಿಗಳ ಮುಂದಿಡುವುದು. ವಿದ್ಯಾರ್ಥಿಗಳಿಂದ ಬಂದ ಉತ್ತರಗಳನ್ನು ಸಂಕ್ಷಿಪ್ತವಾಗಿ ಕರಿಹಲಗೆಯಲ್ಲಿ ಬರೆಯುವುದು. ಸಮರ್ಪಕವಾದ ಉತ್ತರಗಳನ್ನು ಕ್ರೂಡೀಕರಿಸಿ ಸಂದೇಶವನ್ನು ಗುರುತಿಸಿ ಸೂಕ್ತ ವಾಕ್ಯ ರಚನೆಯೊಂದಿಗೆ ಬರೆಯುವುದು.

## ಸಂದೇಶ ಹೀಗೂ ಇರಬಹುದು

ಕಾರ್ಕಡ ರಾಮಚಂದ್ರ ಉಡುಪರ ‘ನ್ಯಾಯದ ತಕ್ಕಡಿ’ ಎಂಬ ನಾಟಕದಲ್ಲಿ ನ್ಯಾಯಮೂರ್ತಿಯು ನೀಡುವ ನಿರ್ಣಯಗಳಿಗಿಂತ ಮೊದಲು ವಿಭಿನ್ನ ಮಜಲುಗಳಲ್ಲಿ ಯೋಚಿಸಬೇಕು ಎಂಬುದನ್ನು ಸೂಚಿಸುತ್ತದೆ. ಅಸಹಜವಾದ ಶಿಕ್ಷೆಯನ್ನು ನೀಡುವುದು ನ್ಯಾಯಯುತವಾಗಿರುವುದಿಲ್ಲ. ನ್ಯಾಯಮೂರ್ತಿಯು ಅಪರಾಧಿಯ

ಮನಪರಿವರ್ತನೆಯಾಗುವಂತಹ ಅಥವಾ ಜಗತ್ತಿಗೆ ಒಪ್ಪಿಗೆ ಆಗುವಂತಹ ಶಿಕ್ಷೆ ನೀಡುವ ವೃತ್ತಿ ಧರ್ಮವನ್ನು ಪಾಲಿಸುತ್ತಾರೆ ಎಂಬ ಸಂದೇಶವನ್ನು ನೀಡುತ್ತದೆ.

- **ಶೀರ್ಷಿಕೆ ನೀಡುವುದು**

ನಾಟಕದ ಆಶಯವು ಮನವರಿಕೆ ಆದ ಬಳಿಕ 'ನ್ಯಾಯದ ತಕ್ಕಡಿ' ಎಂಬ ಶೀರ್ಷಿಕೆಯು ನಾಟಕಕ್ಕೆ ಸೂಕ್ತವಾಗಿದೆ ಎಂದು ತಿಳಿಯುವರು. ನಾಟಕಕ್ಕೆ ಒಪ್ಪುವ ಬೇರೆ ಯಾವ ಶೀರ್ಷಿಕೆ ನೀಡಬಹುದು ಎಂದು ತರಗತಿಯಲ್ಲಿ ಗುಂಪು ಚರ್ಚೆ ನಡೆಸುವುದು. ವಿದ್ಯಾರ್ಥಿಗಳ ಅಭಿಪ್ರಾಯವನ್ನು ಕ್ರೋಢೀಕರಿಸಿ ಅವರು ಹೇಳಿದ ಶೀರ್ಷಿಕೆಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಆ ಶೀರ್ಷಿಕೆಗಳಲ್ಲಿ ಉತ್ತಮವಾದವುಗಳನ್ನು ಆಯ್ಕೆ ಮಾಡಲಿ. ಅದಕ್ಕೆ ಕಾರಣಕೊಟ್ಟು ಸಮರ್ಥಿಸಲಿ.

**ಶೀರ್ಷಿಕೆಗಳು ಹೀಗೂ ಇರಬಹುದು**

- ಪ್ರಾಮಾಣಿಕತೆಗೆ ಸಂದ ಜಯ
- ಅಹಂಕಾರಕ್ಕೆ ತಕ್ಕ ಶಾಸ್ತಿ
- ತೀರ್ಪು
- .......... ಇತ್ಯಾದಿ

**ತೀರ್ಪು**

'ನ್ಯಾಯದ ತಕ್ಕಡಿ' ನಾಟಕಕ್ಕೆ 'ತೀರ್ಪು' ಎಂಬ ಶೀರ್ಷಿಕೆಯನ್ನು ನೀಡಬಹುದು. ಈ ನಾಟಕದಲ್ಲಿ ವಸುಮಿತ್ರ ನೀಡುವ ತೀರ್ಪು ನಾಟಕಕ್ಕೆ ಹೊಸ ತಿರುವನ್ನು ನೀಡುತ್ತದೆ. ಆದುದರಿಂದ 'ತೀರ್ಪು' ಎನ್ನುವ ಶೀರ್ಷಿಕೆ ಈ ನಾಟಕಕ್ಕೆ ಸೂಕ್ತವಾಗಿದೆ.

- **ಭಿತ್ತಿ ಪತ್ರ ರಚಿಸುವುದು**
-

**ಸಾಹಿತ್ಯ ಸಭೆಯಲ್ಲಿ ನಾಟಕ ಪ್ರದರ್ಶನ**

ಭಿತ್ತಿ ಪತ್ರದ ಸ್ವರೂಪವನ್ನು ತಿಳಿಯಲು ಅಧ್ಯಾಪಕರು ಭಿತ್ತಿಪತ್ರದ ಮಾದರಿಯನ್ನು ವಿದ್ಯಾರ್ಥಿಗಳಿಗೆ ನೀಡುವುದು. ಅದರ ಆಧಾರದಲ್ಲಿ ಭಿತ್ತಿಪತ್ರವು ಹೇಗಿರಬೇಕೆಂದು ನಿರ್ಧಾರ ತಳೆಯಲಿ. ಅನಂತರ ವಿದ್ಯಾರ್ಥಿಗಳು ಗುಂಪಿನಲ್ಲಿ ಕುಳಿತು ಕಂಪ್ಯೂಟರ್ ಸಹಾಯದಿಂದ ಭಿತ್ತಿಪತ್ರ ತಯಾರಿಸಲಿ. ಅದರ ಪ್ರತಿಯನ್ನು ತೆಗೆದು ಪ್ರತಿ ಗುಂಪಿನವರು ತರಗತಿಯಲ್ಲಿ ಪ್ರದರ್ಶಿಸಲಿ. ಉತ್ತಮ ರೀತಿಯಲ್ಲಿ ತಯಾರಿಸಿದ ಗುಂಪನ್ನು ಪ್ರಶಂಸಿಸುವುದು.

**ಭಿತ್ತಿಪತ್ರ ಹೀಗೂ ಇರಬಹುದು**

**ಬನ್ನಿರಿ! ನೋಡಿರಿ!! ಆನಂದಿಸಿರಿ!!!**

ಸಂಸ್ಕೃತಿ ಪ್ರೌಢಶಾಲೆ ಕಾಸರಗೋಡು

ಇದರ ಸಾಹಿತ್ಯ ಸಂಘದ ಆಶ್ರಯದಲ್ಲಿ

**ನ್ಯಾಯದ ತಕ್ಕಡಿ**

**ನಾಟಕ ಪ್ರದರ್ಶನ**

ಸ್ಥಳ: **ಸಂಸ್ಕೃತಿ ಪ್ರೌಢ ಶಾಲೆ ಕಾಸರಗೋಡು**

ದಿನಾಂಕ: **25.11.2024ನೇ ಶನಿವಾರ**

- **ರೂಪಾಂತರಿಸಿ ಬರೆಯುವುದು**

ನಾಟಕದ ಪ್ರಧಾನ ಘಟನೆಗಳನ್ನು ಅನುಕ್ರಮವಾಗಿ ವಿದ್ಯಾರ್ಥಿಗಳನ್ನು ಹೇಳಿಸುವುದು. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಬಿಟ್ಟುಹೋದ ಅಂಶಗಳಿದ್ದಲ್ಲಿ ಚರ್ಚಿಸಿ ಸೇರಿಸುವುದು. ಬಳಿಕ ವಿದ್ಯಾರ್ಥಿಗಳನ್ನು ಗುಂಪುಗಳಲ್ಲಿ ಕುಳ್ಳಿರಿಸಿ 'ನ್ಯಾಯದ ತಕ್ಕಡಿ' ನಾಟಕದ ಕಥೆಯನ್ನು ಸಂಕ್ಷೇಪಿಸಿ ಗದ್ಯ ರೂಪದಲ್ಲಿ ಬರೆಯಲು ತಿಳಿಸುವುದು.

**ಗಮನಿಸಬೇಕಾದ ಅಂಶಗಳು**

- ನಾಟಕದ ಆಶಯಕ್ಕೆ ಧಕ್ಕೆ ಬರಬಾರದು.
- ಘಟನೆಗಳು ಕ್ರಮಾನುಗತವಾಗಿರಬೇಕು.
- ಸಂಕ್ಷಿಪ್ತ ರೂಪದಲ್ಲಿರಬೇಕು.

**ನಾಟಕದ ಪ್ರಧಾನ ಘಟನೆಗಳು**

- ಜಿಪುಣಾಗ್ರೇಸರನಾದ ಚಮನ್ ಲಾಲ್ ಕುಶನಗರದಲ್ಲಿ ಬಡ್ಡಿ ವ್ಯವಹಾರವನ್ನು ಮಾಡುತ್ತಿದ್ದನು.
- ವೃತ್ತಿಯಲ್ಲಿ ವರ್ತಕನಾಗಿದ್ದ ರಾಜಕುಮಾರನು ದೀನದಲಿತರಿಗೆ ಉಪಕಾರ ಮಾಡುವುದರಲ್ಲಿ ತೃಪ್ತಿ ಕಂಡವನಾಗಿದ್ದನು.

- ರಾಜಕುಮಾರನಿಗೆ ಸಮಯಕ್ಕೆ ಸರಿಯಾಗಿ ಸಾಲ ಮರುಪಾವತಿಸಲು ಸಾಧ್ಯವಾಗದೆ ಕರಾರು ಪತ್ರದಂತೆ ತನ್ನ ಹೃದಯದ ಸಮೀಪದಿಂದ ಒಂದು ಸೇರು ಮಾಂಸವನ್ನು ಕಿತ್ತು ಕೊಡಬೇಕಾಗಿತ್ತು.
- .............. ಇತ್ಯಾದಿ

ಈ ರೀತಿಯಲ್ಲಿ ಘಟನೆಗಳನ್ನು ಅನುಕ್ರಮವಾಗಿ ಬರೆದು ಬಳಿಕ ಅವುಗಳನ್ನು ಒಗ್ಗೂಡಿಸಿ, ಸಂಕ್ಷೇಪಿಸಿ ಗದ್ಯರೂಪದಲ್ಲಿ ಬರೆಯಲಿ. ಗುಂಪಿನಿಂದ ಒಬ್ಬರಂತೆ ಮಂಡಿಸಲಿ. ಉತ್ತಮವಾಗಿ ಬರೆದು ಮಂಡಿಸಿದ ಗುಂಪನ್ನು ಅಭಿನಂದಿಸುವುದು.

- **ಪತ್ರಿಕಾ ವರದಿ ಬರೆಯುವುದು**

ಅಧ್ಯಾಪಕರು ವಿದ್ಯಾರ್ಥಿಗಳ ಜೊತೆಗೆ ಪತ್ರಿಕಾ ವರದಿಯ ಕುರಿತು ಲಘು ಚರ್ಚೆ ನಡೆಸುವುದು. ಬಳಿಕ ಗುಂಪಿನಲ್ಲಿ ಕುಳ್ಳಿರಿಸಿ ಪ್ರತಿ ಗುಂಪಿಗೆ ಒಂದೊಂದು ಪತ್ರಿಕಾವರದಿಯ ತುಣುಕುಗಳನ್ನು ಹಂಚುವುದು. ನಿರ್ದಿಷ್ಟ ಸಮಯಾವಕಾಶವನ್ನು ನೀಡಿ ವಿದ್ಯಾರ್ಥಿಗಳಲ್ಲಿ ಓದಲು ತಿಳಿಸುವುದು .ಬಳಿಕ ಕೆಲವೊಂದು ಪ್ರಶ್ನೆಗಳನ್ನು ಕೇಳುವುದು.

- ಪತ್ರಿಕಾ ವರದಿ ಎಂದರೇನು?
- ಪತ್ರಿಕಾ ವರದಿಯ ಸ್ವರೂಪವೇನು?
- ಪತ್ರಿಕಾ ವರದಿಯ ಉದ್ದೇಶವೇನು?

ಇತ್ಯಾದಿ ಪ್ರಶ್ನೆಗಳನ್ನು ಕೇಳಿ ವಿದ್ಯಾರ್ಥಿಗಳಲ್ಲಿ ಚರ್ಚೆ ನಡೆಸುವುದು. ಚರ್ಚೆಯ ಬಳಿಕ ಪತ್ರಿಕಾ ವರದಿ ಎಂದರೆ ಒಂದು ಕಾರ್ಯಕ್ರಮ ನೆರವೇರಿದ ಬಳಿಕ ಆ ಕುರಿತು ಪತ್ರಿಕೆಗೆ ನೀಡಿದ ವರದಿ ಎಂಬುದನ್ನು ತಿಳಿದುಕೊಳ್ಳುವುದು. ಬಳಿಕ ಪತ್ರಿಕಾ ವರದಿಯ ಸ್ವರೂಪದ ಕುರಿತು ಚರ್ಚಿಸುವುದು.

**ಚರ್ಚೆಲ್ಲಿರಬೇಕಾದ ಅಂಶಗಳು**

- ಶೀರ್ಷಿಕೆ
- ಸ್ಥಳ ಹಾಗೂ ದಿನಾಚರಣೆ ಉಲ್ಲೇಖ
- ಕಾರ್ಯಕ್ರಮದ ಸಂಕ್ಷಿಪ್ತ ವಿವರಣೆ
- ಸ್ವಾಗತ,ವಂದನಾರ್ಪಣೆ, ನಿರೂಪಣೆ ಇತ್ಯಾದಿಗಳ ಸಂಕ್ಷಿಪ್ತ ಉಲ್ಲೇಖ.

ಈ ಎಲ್ಲಾ ವಿಚಾರಗಳನ್ನು ಕುರಿತು ಚರ್ಚಿಸಿದ ಬಳಿಕ ವಿದ್ಯಾರ್ಥಿಗಳು ಗುಂಪಿನಲ್ಲಿ ಪತ್ರಿಕಾ ವರದಿಯನ್ನು ಬರೆಯಲಿ. ಬಳಿಕ ಗುಂಪಿನಿಂದ ಒಬ್ಬರಂತೆ ಮಂಡಿಸಲಿ. ಮಂಡನೆ ಸಂದರ್ಭದಲ್ಲಿ ಬಿಟ್ಟುಹೋದ ಅಂಶಗಳಿದ್ದಲ್ಲಿ ಪರಿಷ್ಕರಿಸಿ ತಮ್ಮ ಚಟುವಟಿಕೆ ಪುಸ್ತಕಗಳಲ್ಲಿ ಬರೆದುಕೊಳ್ಳಲಿ.

## ಪತ್ರಿಕಾ ವರದಿ ಹೀಗೂ ಇರಬಹುದಲ್ಲವೇ?

### “ಮಕ್ಕಳ ಸೂಪ್ತ ಪ್ರತಿಭೆಗಳು ವಾರ್ಷಿಕೋತ್ಸವದ ವೇದಿಕೆಯಲ್ಲಿ ಅನಾವರಣಗೊಳ್ಳಲಿ”
### - ಡಾ| ಚಿಂತಾಮಣಿ ಮಹಾದೇವ.

**ಕಾಸರಗೋಡು ನವೆಂಬರ್ 10 :** ಇಲ್ಲಿನ ಭಾರತೀ ಸರಕಾರಿ ಉನ್ನತ ಪ್ರೌಢಶಾಲೆಯಲ್ಲಿ ಶಾಲಾ ವಾರ್ಷಿಕೋತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಡಾ| ಚಿಂತಾಮಣಿ ಮಹಾದೇವರವರು ಪ್ರತಿಯೊಂದು ಮಗುವಿನಲ್ಲಿಯೂ ವಿವಿಧ ಪ್ರತಿಭೆಗಳು ಸುಪ್ತವಾಗಿರುತ್ತವೆ. ಸಮಯ, ಸಂದರ್ಭಗಳು ದೊರೆತಾಗ ಮಾತ್ರ ಆ ಪ್ರತಿಭೆಗಳು ಪ್ರಕಟಗೊಳ್ಳುತ್ತವೆ. ಶಾಲೆಯಲ್ಲಿ ನಡೆಯುವ ಇಂತಹ ವಾರ್ಷಿಕೋತ್ಸವಗಳು ಮಗುವಿನಲ್ಲಿ ಹುದುಗಿರುವ ಸುಪ್ತ ಪ್ರತಿಭೆಗಳ ಅನಾವರಣಕ್ಕೆ ಸೂಕ್ತ ವೇದಿಕೆಗಳಾಗಿವೆ ಎಂದು ಹೇಳಿದರು. ನಗರಸಭಾ ಸದಸ್ಯರಾಗಿರುವ ಶ್ರೀ ಥೋಮಸ್ ಡಿ ಸೋಜಾ ರವರು ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಮೊಹಮ್ಮದ್ ಸಿರಾಜ್ ರವರು ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ವಿದ್ಯಾರ್ಥಿಗಳ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಗಿತ್ತು. ಹಿರಿಯ ಅಧ್ಯಾಪಕಿ ಶ್ರೀಮತಿ ನಿರ್ಮಲ ಸ್ವಾಗತಿಸಿ, ಶಿಕ್ಷಕ ರಮೇಶ್ ರವರು ವಂದನಾರ್ಪಣೆಗೈದರು. ಶ್ರೀಮತಿ ಮನೋರಮರವರು ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು. ಸಭಾ ಕಾರ್ಯಕ್ರಮದ ಬಳಿಕ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

* * *